# ಹತ್ತನೇ ಅಧ್ಯಯನಕ್ಕೆ ಮುನ್ನುಡಿ
# Preface to Study X

### ಗೌರವಾನ್ವಿತ ಪ್ರೊಫೆಸರ್ ಸಿ. ಪಿಯಾಝ್ಝಿ ಸ್ಮಿತ್‌ರವರ ಲೇಖನಿಯಿಂದ ಹಸ್ತಲೇಖ ರಚಿಸುವಾಗ ಈ ಅಧ್ಯಾಯದ ಮೇಲೆ ಮಾಡಿದ ಸೌಮ್ಯವಾದ ಒಂದು ವ್ಯಾಖ್ಯಾನ

**A kindly comment, on this Chapter when in manuscript, from the pen of Esteemed Prof. C. PIAZZI SMYTH,** F.R.S.E., F.R.A.S., **Ex-Astronomer Royal for Scotland**

ಗ್ರೇಟ್ ಪಿರಮಿಡ್‌ನ ಈ ಅಧ್ಯಾಯವನ್ನು ಬರೆಯಲಾಗಿದೆ ಎಂದು ತಿಳಿದ ಸಹೋದರ ವಿಲಿಯಂ. ಎಂ. ರೈಟ್ ಅವರು ಪಿರಮಿಡ್ ಬಗ್ಗೆ ಈಗಾಗಲೇ ಸಾಕಷ್ಟು ಜ್ಞಾನವನ್ನು ಹೊಂದಿದ್ದರಿಂದ ಅದನ್ನು ಟೈಪ್ ಮಾಡುವ ಮೊದಲು ಅದನ್ನು ಓದಬೇಕೆಂದು ವಿನಂತಿಸಿಕೊಂಡರು. ಇದನ್ನು ನಾವು ಸಂತೋಷದಿಂದ ನೀಡಿದ್ದೇವೆ, ಸಾಧ್ಯವಿರುವ ಎಲ್ಲಾ ಟೀಕೆಗಳ ಬಗ್ಗೆ ನಮ್ಮ ಆಕಾಂಕ್ಷೆಯ ಬಗ್ಗೆ ಅವರಿಗೆ ಭರವಸೆ ನೀಡಿದರು. ಈ ಹಸ್ತಪ್ರತಿ ಓದಿದ ನಂತರ ಸಹೋದರ ರೈಟ್‌ರವರು ನಾವು ವಿಮರ್ಶೆಯನ್ನು ಬಯಸಿದಂತೆ ವಿಮರ್ಶಕನ ನಿಲುವು ಉತ್ತಮವಾಗಿರುತ್ತದೆ ಎಂದು ರೈಟ್ ತೀರ್ಮಾನಿಸಿದರು. ಅದರಂತೆ ಅವರು ಹಸ್ತಪ್ರತಿಯ ಟೈಪ್‌ರೈಟ್‌ನ ನಕಲನ್ನು ಮಾಡಿದರು ಮತ್ತು ಅನುಮತಿಯ ಮೂಲಕ ಅದನ್ನು ಪ್ರೊ. ಸಿ. ಪಿಯಾಝ್ಝಿ ಸ್ಮಿತ್‌ರವರಿಗೆ ಅಂಚೆಯ ರವಾನೆ ಮಾಡಿದರು. ಅವರು ಸಾಮಾನ್ಯವಾಗಿ ಗ್ರೇಟ್ ಪಿರಮಿಡ್‌ನ ನಿರ್ಮಾಣ ಮತ್ತು ಮಾಪನಗಳ ಬಗ್ಗೆ ವಿಶ್ವದ ಇತರ ಮನುಷ್ಯರಿಗಿಂತ ಹೆಚ್ಚಿನ ಜ್ಞಾನವನ್ನು ಹೊಂದಿದ್ದಾರಾದ್ದರಿಂದ ಆ ಹಸ್ತಲೇಖವನ್ನು ಪರೀಕ್ಷಿಸಲು ವಿನಂತಿಸಿದರು, ಎಚ್ಚರಿಕೆಯಿಂದ ಮತ್ತು ಸತ್ಯದ ಹಿತದೃಷ್ಟಿಯಿಂದ ಅವರು ನೀಡಬೇಕಾದ ಯಾವುದೇ ವಿಮರ್ಶೆಗಳನ್ನು ಗಮನಿಸಿದರು. ಆ ಪತ್ರಕ್ಕೆ ಪ್ರಾಧ್ಯಾಪಕರ ಉತ್ತರ, ಆ ಹಸ್ತಲೇಖದ ನಕಲನ್ನು ಅದರ ವಿಮರ್ಶೆಯ ಗುರುತುಗಳೊಂದಿಗೆ ಆತನಿಗೆ ಕಳುಹಿಸಲಾಯಿತು. ಅದನ್ನು ತೆಗೆದುಕೊಂಡು ಲೇಖಕರಿಗೆ ಕಳುಹಿಸಲಾಯಿತು. ನಾವು ಸಹೋದರ ರೈಟ್ ಮತ್ತು ಪ್ರೊ. ಸ್ಮಿತ್ ಅವರ ಸೌಜನ್ಯಕ್ಕಾಗಿ ಮತ್ತು ಸೂಚಿಸಿದ ತಿದ್ದುಪಡಿಗಳನ್ನು ಅನುಸರಿಸಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಆದಾಗ್ಯೂ ಅದೆರಲ್ಲದರಲ್ಲಿ ನಮೂದಿಸಿದ ಕೇವಲ ಮೂರು ಮಾತ್ರ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿಲ್ಲವೆಂದ ನಾವು ಸಂತೋಷಪಟ್ಟಿದ್ದೇವೆ. ಟೀಕೆಗಳಲ್ಲಿ ಕೇವಲ ಒಂದು ಮಾತ್ರ ಅಳತೆಗಳ ಮೇಲೆ ಇತ್ತು ಮತ್ತು ಇದು ಕೇವಲ ಒಂದು ಅಂಗುಲ ವ್ಯತ್ಯಾಸವನ್ನು ತೋರಿಸಿದೆ. ಅದನ್ನು ನಾವು ಸಂತೋಷದಿಂದ ಸರಿಪಡಿಸಿದ್ದೇವೆ.

ನಾವು ಇದರೊಡನೆ ನೀಡುವ ವಿಚಾರ ನಮ್ಮ ಓದುಗರಿಗೆ ಆಸಕ್ತಿದಾಯಕವಾಗಿರಬಹುದೆಂದು ಯೋಚಿಸುತ್ತೇವೆ.

**ಪ್ರೊಫೆಸರ್ ಸಿ. ಪಿಯಾಝ್ಝಿ ಸ್ಮಿತ್‌ರವರ ಪತ್ರ**

**Prof. C. Piazzi Smyth's Letter**

ಕ್ಲೋವಾ, ರಿಪಾನ್, ಇಂಗ್ಲೆಂಡ್
ಡಿಸೆಂಬರ್ 21, 1890

ವಿಲಿಯಂ ಎಂ. ರೈಟ್,

ಆತ್ಮೀಯ ಸರ್, ನಾನು ಹಸ್ತಲೇಖನವನ್ನು ನೋಡಬೇಕೆಂದು ಬಯಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸ್ನೇಹಿತರಾದ ಅಲ್ಲೆಘೇನಿಯ ಸಿ.ಟಿ. ರಸ್ಸೆಲ್‌ರವರನ್ನು ನೋಡಬಯಸುತ್ತೇನೆ. ಆದರೆ ನಾನು ಈಗ ಒಂದು ಸೊಗಸಾದ ಶ್ರದ್ಧೆಯುಳ್ಳ ಪರೀಕ್ಷೆಯನ್ನು ವಾಕ್ಯವಾಕ್ಯವಾಗಿ ಪೂರ್ಣಗೊಳಿಸಿದ್ದೇನೆ. ನೋಂದಾಯಿತ ಪಾರ್ಸೆಲ್ ಮೂಲಕ ಸಮಿತಿಗಳ ನಡುವೆ ಅಂತಹ ಕಾಳಜಿಯೊಂದಿಗೆ ನಯವಾದ ಪ್ರತಿ ಪುಟದೊಂದಿಗೆ ಮತ್ತು ಕೈಯ ಜಾಗದಲ್ಲಿ ಟೈಪ್‌ರೈಟರ್‌ನಿಂದ ರಚಿಸಲ್ಪಟ್ಟ ಹಸ್ತಪ್ರತಿಯನ್ನು ಕಳುಹಿಸಲು ನೀವು ತುಂಬಾ ಹಿತಕರವಾಗಿ ಶ್ರಮೆಯನ್ನು ತೆಗೆದುಕೊಂಡಿರುವಾಗ ನಾನು ಅದನ್ನು ಮಾಡುವುದು ಕನಿಷ್ಠ ಮಾತ್ರ. ಮೊದಲಲ್ಲಿ ನಾನು ಹೇಳಿದ ಟೈಪ್‌ರೈಟರ್‌ನ ಚೀಟಿಗಳನ್ನು ಮಾತ್ರ ದೊರಕಿಸಬಹುದಿತು. ಆದರೆ ನಾನು ಪುಟಗಳಾದ್ಯಂತವಾಗಿ ಮುಂದುವರೆದಂತೆ ಲೇಖಕರ ಕಾರ್ಯಶಕ್ತಿಗಳು, ವಿಶೇಷತೆಗಳು ಮತ್ತು ಹೊಸಕಲ್ಪನೆ (ಅಭಿವ್ಯಕ್ತಿಯ ಶಕ್ತಿ)ಗಳು ಭವ್ಯವಾಗಿ ಹೊರಬಂದವು ಮತ್ತು ನನ್ನ ಸ್ವಂತ ಪುಸ್ತಕವಾದ ಪಿರಮಿಡ್ ಪುಸ್ತಕದ ಮುಂದಿನ ಸಂಭಾವ್ಯ ಆವೃತ್ತಿಯಲ್ಲಿ ಹೆಸರಿನ ಜೊತೆ ಉಲ್ಲೇಖನಕ್ಕೋಸ್ಕರ ನಕಲನ್ನು ತೆಗೆದುಕೊಂಡು ಸಂತೋಷಿಸಲು ಅಲ್ಲಿ ಕೆಲವು ವಾಕ್ಯವೃಂದಗಳಿರಲಿಲ್ಲ. ಆದರೆ ಖಂಡಿತವಾಗಿಯೂ ನಾನು ಆ ರೀತಿಯ ಏನನ್ನೂ ಮಾಡಲಿಲ್ಲ ಮತ್ತು ವೇದದ ಅಧ್ಯಯನಗಳ (Scripture

Studies) ಲೇಖಕನು ಪ್ರಕಟಣೆಗೆ ತನ್ನದೇ ಆದ ಸಮಯವನ್ನು ಆರಿಸಿಕೊಳ್ಳುವಾಗ ಪರಿಪೂರ್ಣ ತಾಳ್ಮೆಯಿಂದ ಮತ್ತು ಅತ್ಯಂತ ಕೃತಜ್ಞತೆಯ ಮನಃಸ್ಥಿತಿಯಲ್ಲಿ ಕಾಯುತ್ತೇನೆ. ಹಾಗಾಗಿ ನಾನಿಲ್ಲಿ ಅಭಿಪ್ರಾಯಪಡುವುದೇನೆಂದರೆ ಪಿರಮಿಡ್‌ನ ವಿವಿಧ ಭಾಗಗಳು ಕಾಲಗಣನೆಯ ಮೇಲೆ ತಿಳಿಸುವಂತೆ ಅವರ ಹೇಳುವಷ್ಟು ಒಳ್ಳೆಯದು ಮತ್ತು ಹೊಸದು ಎಂದು ನಾನು ಇಲ್ಲಿ ಅಭಿಪ್ರಾಯಪಡುತ್ತೇನೆ. ವಿಶೇಷವಾಗಿ ಮೊದಲನೇ ಆರೋಹಣ (ಏರು) ಮಾರ್ಗ ಮತ್ತು ಅದರಲ್ಲಿನ ಗ್ರಾನೈಟ್ ಪ್ಲಗ್ ಗ್ರಾಂಡ್ ಗ್ಯಾಲರಿಯ ಮೇಲೆ ಕರ್ತನ ಜೀವನವನ್ನು ವಿವರಿಸುವಂತೆ ರಾಜನ ಕೊಠಡಿ ಮತ್ತು ಅದರ ಗ್ರಾನೈಟ್ ನಡುವಿನ ಸಮಾನಾಂತರತೆಯ ಮೇಲೆ, ವಿವರಿಸಿದ ಹಾಗೆ ಎದುರಾಗಿ ದೇವದರ್ಶನ ಗುಡಾರ ಮತ್ತು ಅದರ ಬಂಗಾರ ಇವುಗಳ ನಡುವಿನ ಸಮಾನಾಂತರತೆಗಳ ಮೇಲೆ ಹಾಗೂ ಬಹುಮಟ್ಟಿಗೆ ಸತ್ಯವೇದ ಮತ್ತು ಮಹಾಪಿರಮಿಡ್ ನಡುವಿನ ದೃಢೀಕರಣ ಅಥವಾ ನಿಕಟ ಒಡಂಬಡಿಕೆಗಳ ಬಗ್ಗೆ ಚೆನ್ನಾಗಿ ಪ್ರಸ್ತಾಪ ಮಾಡಲಾಗಿದೆ.

ಏತನ್ಮಧ್ಯೆ ಸತ್ಯವೇದ ಅಧ್ಯಯನ (ಸ್ಕ್ರಿಪ್ಚರ್ ಸ್ಟಡೀಸ್) ಗ್ರಂಥಶ್ರೇಣಿಯ ಮೊದಲ ಎರಡು ಸಂಪುಟಗಳ ಬಹಳ ಹಿಂದೆಯೇ ನಿಮ್ಮ ಸಹೃದಯ ಉಡುಗೊರೆಗಾಗಿ ನಾನು ನಿಮಗೆ ಚಿರಋಣಿಯಾಗಿದ್ದೇನೆ ಎಂದು ತೋರುತ್ತೆ. ಆ ಸಮಯದಲ್ಲಿ ನಾನು ಮೊದಲ ಸಂಪುಟದ ಮೊದಲಾರ್ಧಕ್ಕಿಂತ ಹೆಚ್ಚಿನದನ್ನು ಪಡೆಯಲಿಲ್ಲ. ನಾನು ಅಂದುಕೊಂಡಂತೆ ವಿಷಯವನ್ನು ಕಂಡುಕೊಂಡಿದ್ದೇನೆ. ನಾನು ನಿರೀಕ್ಷಿಸಿದ ಹಾಗೆ ಪೂರ್ತಿಯಾಗಿ ಅತ್ಯಂತ ಹೊಸದಲ್ಲ, ಆದರೆ ಲಾಭದಾಯಕವಾದ ನಂತರ, ಮೂರನೇ ಸಂಪುಟದ ಈ ಸುಧಾರಿತ ಪಿರಮಿಡ್ ಅಧ್ಯಯನದ ಕೂಲಂಕುಷವಾಗಿ ಓದುವ ಮೂಲಕ, ನಾನು ಮೊದಲ ಎರಡು ಸಂಪುಟಗಳನ್ನು ಮತ್ತೆ ತೆಗೆದುಕೊಳ್ಳಬೇಕು.

ಅದರ ನೋಂದಾಯಿಸಲ್ಪಟ್ಟ ಮಂಡಳಿಗಳ (ಸಮಿತಿಗಳ) ನಡುವೆ ಪಾರ್ಸಲ್ ಹಿಂತಿರುಗುತ್ತದೆ. ನಾನು ಹಿಂದೆ ಉಳಿಯುತ್ತೇನೆ, ಅನೇಕ ಧನ್ಯವಾದಗಳೊಂದಿಗೆ,

ಇಂತಿ ನಿಮ್ಮ ಗೌರವಾನ್ವಿತ,

**ಸಿ. ಪಿಯಾಝಿ ಸ್ಮಿತ್**

## ಸಂಗೀತ 350

1. ಎನ್ನೊಂದಿಗಿರು, ಸಂಜೆಯಾಯಿತು;
ಸಂದ್ಹೋಗುತ್ತೇ ಈ ಜೀವಕಾಲವು;
ಎನ್ನೊಂದಿಗಿರು, ದಿವ್ಯ ಮಿತ್ರನೇ,
ಅನಾಥನಾಥ ನೀನು ಅಲ್ಲವೇ?

2. ಓ ಯೇಸು, ನಿನ್ನ ಮುಖದರ್ಶನ
ಒಂದೊಂದು ಕ್ಷಣವು ಅವಸರ
ಪ್ರಕಾಶ ಮೋಡ ಯಾವದಿದ್ದರೂ,
ನೀನಿದ್ದರೆ ನನಗೆ ಹಿತವು.

3. ನಿನ್ನ ಸುಮುಖವನ್ನು ಕಂಡರೆ,
ಸುಖದುಃಖ ಉಭಯಸಮವೇ
ಓ ಮೃತ್ಯು ! ನಿನ್ನ ಕೊಂಡಿಹೋಯಿತು.
ಸಮಾಧಿಯೇ, ನಿನ್ನನ್ನು ಗೆದ್ದೆನು.

4. ಜೀವಾಂತ್ಯಕಾಲದಲ್ಲಿ, ಕರ್ತನೇ,
ನಿನ್ನನ್ನು ಆತುಕೊಂಡು ಸಾಯುವೆ;
ಆ ಮೇಲೆ ಸ್ವರ್ಗೋದಯವಾಗಲು
ಎಂದೆಂದೂ ನೀನು ನನ್ನ ಭಾಗವು.

* * * * * * *

# ಅಧ್ಯಯನ – 10 Study - X

# ದೇವರ ಕಲ್ಲು ಸಾಕ್ಷಿಗಳ ಪ್ರಮಾಣ ಮತ್ತು ಪ್ರವಾದಿ, ಐಗುಪ್ತದಲ್ಲಿರುವ ಮಹಾ ಪಿರಮಿಡ್

# The Testimony of God's Stone Witness and Prophet, The Great Pyramid in Egypt

**ಮಹಾ ಪಿರಮಿಡ್‌ನ ಸಾಮಾನ್ಯ ವರ್ಣನೆ, ಇದು ಕ್ರೈಸ್ತರಿಗೆ ಯಾಕೆ ವಿಶೇಷ ಆಸಕ್ತಿಕರವಾಗಿದೆ? ಮಹಾ ಪಿರಮಿಡ್ ಸತ್ಯದ ಉಗ್ರಾಣವಾಗಿದೆ. ವೈಜ್ಞಾನಿಕ, ಐತಿಹಾಸಿಕ ಮತ್ತು ಪ್ರವಾದನೀಯ – ಎಂಬುದಕ್ಕೆ ಸತ್ಯವೇದದ ಇಂಗಿತಗಳು. ಯಾಕೆ? ಎಲ್ಲಿ? ಮತ್ತು ಯಾರಿಂದ ಕಟ್ಟಲ್ಪಟ್ಟವು? ಅದರ ಸ್ಥಳದ ಮಹತ್ವ. ಅದರ ವೈಜ್ಞಾನಿಕ ಪಾಠಗಳು, ವಿಮೋಚನೆಯ ಯೋಜನೆ, ಇವುಗಳ ಕುರಿತಾಗಿ ಅದರ ಪುರಾವೆ, ಯುಗಗಳ ಯೋಜನೆ, ಕ್ರಿಸ್ತನ ಮರಣ ಮತ್ತು ಪುನರುತ್ಥಾನಗಳು ಸೂಚಿತವಾಗಿವೆ. ಲೋಕವನ್ನು ಕೆಳಗೊಯ್ಯುತ್ತಿರುವ ಪಥ, ಸಂಕಷ್ಟದ ಮಹಾ ಸಮಯದಲ್ಲಿ ಮುಕ್ತಾಯಗೊಳ್ಳುವದು. ಸಂಕಷ್ಟದ ಸಹಜಗುಣ. ಮಹಾ ಸುಧಾರಣಾ ಚಳುವಳಿಯನ್ನು ಗುರುತಿಸಲಾಗಿದೆ – ಯೆಹೂದ್ಯ ಯುಗದ ವಿಸ್ತಾರವನ್ನು ಸೂಚಿಸಲಾಗಿದೆ – ಸುವಾರ್ತಾ ಸಭೆಯ 'ಮಹಾಕರೆಯು' ತೋರಿಸಲಾಗಿದೆ – ಸಭೆಯ ಪ್ರತಿಷ್ಠೆಯ ಕ್ರಮ. ಮಹಾ ಕರೆಯ ಅಂತ್ಯವನ್ನು ಗುರುತಿಸಲಾಗಿದೆ – ಕ್ರಿಸ್ತನ ದ್ವಿತಿಯಾಗಮನದ ದಿನಾಂಕ – ಪ್ರಪಂಚದ ಪುನರ್‌ಸ್ಥಾಪನೆಯ ಆಶೀರ್ವಾದಗಳು ಹೇಗೆ ಸೂಚಿತಗೊಂಡಿವೆ – ಸಹಸ್ರಮಾನ ಯುಗದಲ್ಲಿ ಪ್ರಪಂಚದ ನಡವಳಿಕೆ – ಅದರ ಅಂತ್ಯ – ಪಿರಿಮಿಡ್‌ನಲ್ಲಿ ಸೂಚಿತವಾಗಿರುವಂತೆ ಮಾನವ ಮತ್ತು ಆತ್ಮಿಕ ಸ್ಥಿತಿಗಳ ವ್ಯತ್ಯಾಸಗಳು – ಪಿರಮಿಡ್ ನಾಸ್ತಿಕವಾದವನ್ನು, ಧರ್ಮನಿಂದನೆಯನ್ನು ಮತ್ತು ಎಲ್ಲಾ ವಿಕಾಸವಾದದ ವಿಚಾರಣ ಸರಣಿಯನ್ನು ಖಂಡಿಸುತ್ತದೆ ಮತ್ತು ಸತ್ಯವೇದದ ಯೋಜನೆಯನ್ನು ಮತ್ತು ಅದರ ನಿಗದಿತ ಸಮಯಗಳು ಮತ್ತು ಕಾಲಗಳನ್ನು ಪರಿಶೀಲನೆ ಮಾಡುತ್ತದೆ.**

**"ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವುವು. ಅವು ಐಗುಪ್ತ ದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವುವು" (ಯೆಶಾಯ 19: 19–20).**

ಪುರಾತನ ಕಾಲದವರು ಏಳು ಅದ್ಭುತಗಳನ್ನು ನಿರೂಪಿಸಿದ್ದಾರೆ. ಆ ಪಟ್ಟಿಯ ಮೇಲ್ಗಡೆಯಲ್ಲಿ ಗಿಝಾದ ಪಿರಮಿಡ್‌ನ ಹೆಸರಿದೆ. ಅದು ಐಗುಪ್ತ ದೇಶದಲ್ಲಿದೆ. ಪ್ರಸ್ತುತ ಕೈರೋ ನಗರದಿಂದ ಹೆಚ್ಚು ದೂರದಲ್ಲಿಲ್ಲ. ಪ್ರಪಂಚದ ಬೇರೆ ಯಾವುದೇ ಸೌಧವು ಇದರ ಅಳತಗೆ ಸಮವಿಲ್ಲ. ಈ ಪಿರಮಿಡ್ಡಿನ ವ್ಯಕ್ತಿಗತ ಪರೀಕ್ಷೆ ಮಾಡಿದ ಈ ದೇಶದ ಒಬ್ಬ ಪ್ರಖ್ಯಾತ ಗ್ರಾನೈಟ್ ವ್ಯಕ್ತಿಯು ಹೇಳುವುದೇನೆಂದರೆ "ಈ ಪಿರಮಿಡ್‌ನಲ್ಲಿ ಕಲ್ಲಿನ ತೊಲೆಗಳಿದ್ದು ಅವು ಒಂದು ಶಾಸನ ಸ್ಥಂಭದ ಮೂರು ಅಥವಾ ನಾಲ್ಕರಷ್ಟು ತೂಕವುಳ್ಳದ್ದಾಗಿದೆ. ನಾನು ಕಂಡ ಒಂದು ಕಲ್ಲಿನ ಸುಮಾರು ತೂಕ 880 ಟನ್‌ಗಳಾಗಿದೆ. ಅದರಲ್ಲಿ ಮೂವತ್ತು ಅಡಿ ಉದ್ದದ ಕಲ್ಲುಗಳಿದ್ದು ಅವು ಬಹಳ ನಿಕಟವಾಗಿ ಜೋಡಿಸಲ್ಪಟ್ಟಿವೆ. ನೀವು ಅದರ ಮೇಲ್ಮೈ ಮೇಲೆ ಒಂದು ಮಡಿಸಬಹುದಾದ ಸಣ್ಣ ಚಾಕು (Pen knife) ವನ್ನು ಓಡಿಸಿದರೂ ಅದರ ನಡುವಣ ಇರುವ ಬಿರುಕನ್ನು ಕಂಡುಹಿಡಿಯಲಾಗದು, ಅವುಗಳನ್ನು ಗಾರೆಯಿಂದಲೂ ಜೋಡಿಸಿರುವುದಿಲ್ಲ. ಎರಡು ಕಲ್ಲುಗಳ ಮೇಲ್ಮೈಯನ್ನು ಮೂವತ್ತು ಅಡಿಗಳನ್ನಾಗಿ ಈ ದೊಡ್ಡ ಪಿರಮಿಡ್‌ನಲ್ಲಿ ಅದ್ಭುತ ಕಲ್ಲುಗಳನ್ನು ಸರಿಯಾಗಿ ಒಂದಕ್ಕೊಂದು ಜೋಡಿಸುವ ಯಾವುದೇ ಯಂತ್ರೋಪಕರಣವೂ ಇದುವರೆಗೆ ಅಷ್ಟು ನಿಖರವಾಗಿಲ್ಲ, ಅದು ಸುಮಾರು ಹದಿಮೂರು ಎಕರೆ ಜಾಗವನ್ನು ಆಕ್ರಮಿಸುತ್ತದೆ. ಅದು 486 ಅಡಿಗಳಷ್ಟು ಎತ್ತರವಿದೆ ಮತ್ತು ಅದರ ತಳಭಾಗ 764 ಅಡಿಗಳಷ್ಟು ಅಗಲವಾಗಿದೆ. ಈ ಮಹಾ ಪಿರಮಿಡ್ ಆರು ಮಿಲಿಯನ್ ಟನ್ನುಗಳಷ್ಟು ತೂಕವಿರಬಹುದೆಂದು ಅಂದಾಜು ಮಾಡಲಾಗಿದೆ. ಅದನ್ನು ತೆಗೆದುಹಾಕಲು ಸುಮಾರು 6000 ಆವಿ ಯಂತ್ರಗಳು ಬೇಕಾಗಬಹುದು. ಪ್ರತಿಯೊಂದೂ 1000 ಟನ್ನುಗಳನ್ನು ಮಾತ್ರವೇ ಎಳೆಯಬಲ್ಲವು. ನಿಜವಾಗಿಯೂ ಐಗುಪ್ತದಲ್ಲಿರುವ ಸಂಪತ್ತು ಅದನ್ನು ಅದನ್ನು ನೆಲಸಮ ಮಾಡಲು ಕಾರ್ಮಿಕರಿಗೆ ವೇತನ ಕೊಡಲೂ ಸಾಲದು. ಈ ಸತ್ಯಗಳಿಂದ ಅದರ ಮಹಾವಿನ್ಯಾಸಕಾರ ಯಾರೇ

ಇರಲಿ ಆತನ ಉದ್ದೇಶ ಅದೊಂದು ಶಾಶ್ವತ ಬಾಳಿಕೆ ಬರುವ ಸ್ಮಾರಕವಾಗಬೇಕೆಂಬುದಾಗಿತ್ತು ಎಂದು ಸ್ಪಷ್ಟವಾಗುತ್ತದೆ.

ನಮ್ಮನ್ನು ಸಂತುಷ್ಟಗೊಳಸುವ ಯಾವುದೇ ದೃಷ್ಟಿಕೋನದಿಂದ ನೋಡಿದರೂ ಈ ಮಹಾ ಪಿರಮಿಡ್ ನಿಜವಾಗಿಯೂ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಅಸಾಮಾನ್ಯವಾದ ಕಟ್ಟಡವಾಗಿದೆ, ಆದರೆ, ಕಳೆದ ಮೂವತ್ತೆರಡು ವರ್ಷಗಳಿಂದ ಪ್ರಗತಿಯಲ್ಲಿರುವ ಒಂದು ಶೋಧನೆಯ ಬೆಳಕಿನಲ್ಲಿ, ಇದು ದೇವರ ವಾಕ್ಯದ ಬಗ್ಗೆ ಸುಧಾರಿತ ಅಧ್ಯಯನವನ್ನು ಮಾಡುವ ಪ್ರತಿಯೊಬ್ಬ ಕ್ರೈಸ್ತನೂ ಕುತೂಹಲವನ್ನು ದೊರಕಿಸಿದೆ. ಅದು ಅಸಾಧಾರಣ ರೀತಿಯಲ್ಲಿ, ಎಲ್ಲಾ ಪ್ರವಾದಿಗಳ ಸಾಮರಸ್ಯದಲ್ಲಿ ದೇವರ ಯೋಜನೆಯ ಗತಕಾಲದ, ಪ್ರಸ್ತುತದ ಮತ್ತು ಭವಿಷ್ಯದ ಒಂದು ಬಾಹ್ಯರೇಖೆಯನ್ನು ಕಲಿಸಿಕೊಡುವಂತೆ ತೋರುತ್ತದೆ.

ಇಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದುದೆಂದರೆ, ಮಹಾ ಪಿರಮಿಡ್ಡಿನ ಪಕ್ಕದಲ್ಲಿ ಕೆಲವು ಕಲ್ಲಿನ ಮತ್ತೆ ಕೆಲವು ಇಟ್ಟಿಗೆಯ ಪಿರಮಿಡ್‌ಗಳಿವೆ. ಆದರೆ ಇವೆಲ್ಲವೂ ಆ ದೊಡ್ಡದನ್ನು ನಕಲು ಮಾಡುವ ಪ್ರಯತ್ನಗಳಾಗಿವೆ. ಆದರೆ ಅವು ಎಲ್ಲಾ ರೀತಿಯಲ್ಲಿಯೂ ಅಳತೆಯಲ್ಲಿ, ನಿಖರತೆಯಲ್ಲಿ ಮತ್ತು ಆಂತರಿಕ ವ್ಯವಸ್ಥೆಯಲ್ಲಿ ಕೆಳಗುಣಮಟ್ಟದವುಗಳಾಗಿವೆ. ಮಹಾ ಪಿರಮಿಡ್‌ನಲ್ಲಿದ್ದಂತೆ ಅವುಗಳು ಯಾವುದೇ ಸಾಂಕೇತಿಕ ಲಕ್ಷಣಗಳನ್ನು ಹೊಂದಿಲ್ಲ. ಆದರೆ ಬಹುಶಃ ಐಗುಪ್ತರ ರಾಜವಂಶಸ್ಥರ ಸಮಾಧಿಗಳಿಗಳಾಗಿ ವಿನ್ಯಾಸಗೊಳಿಸಲ್ಪಟ್ಟಿವೆ ಮತ್ತು ಉಪಯೋಗಿಸಲ್ಪಟ್ಟಿವೆ ಎಂಬುದು ನಿರೂಪಿತಗೊಂಡಿದೆ.

ಮಹಾಪಿರಮಿಡ್ ಹೇಗಿದ್ದರೂ, ಮುಖ್ಯವಾದ ವೈಜ್ಞಾನಿಕ, ಐತಿಹಾಸಿಕ ಮತ್ತು ಪ್ರವಾದನೀಯ ಸತ್ಯದ ಉಗ್ರಾಣವಾಗಿದೆ ಮತ್ತು ಅದರ ಸಾಕ್ಷ್ಯವು ಪರಿಪೂರ್ಣವಾಗಿ ಸತ್ಯವೇದಕ್ಕನುಸಾರವಾಗಿ ಕಂಡು ಬರುತ್ತದೆ. ಮತ್ತು ಅದರ ಸತ್ಯಗಳ ಬಹುಮುಖ್ಯವಾದ ಲಕ್ಷಣಗಳನ್ನು ಸುಂದರವಾದ ಮತ್ತು ಸೂಕ್ತವಾದ ಸಂಕೇತಗಳೊಡನೆ ತಿಳಿಸುತ್ತದೆ. ಅದು ಯಾವುದೇ ಅರ್ಥದಲ್ಲಿ ಲಿಖಿತ ಪ್ರಕಟನೆಗಳ ಗ್ರಂಥಕ್ಕೆ ಸೇರ್ಪಡೆ ಅಲ್ಲ. ಯಾಕೆಂದರೆ, ಪ್ರಕಟನೆಯು ಸಂಪೂರ್ಣವೂ ಮತ್ತು ಸಮರ್ಪಕವಾದುದೂ ಆಗಿದೆ ಮತ್ತು ಅದಕ್ಕೆ ಯಾವುದೇ ಕೂಡಿಕೆ ಬೇಕಾಗುವುದಿಲ್ಲ. ಆದರೆ ಅದರ ದೇವರ ಯೋಜನೆಗೆ ಪ್ರಬಲವಾದ ದೃಢೀಕರಿಸುವ ಸಾಕ್ಷ್ಯವಾಗಿದೆ. ಮತ್ತು ಕೆಲವು ವಿದ್ಯಾರ್ಥಿಗಳು ಅದನ್ನು ಜಾಗರೂಕತೆಯಿಂದ ಪರೀಕ್ಷಿಸಬಹುದು ಮತ್ತು ಅದರ ಸಾಕ್ಷ್ಯದ ಸಾಮರಸ್ಯವನ್ನು ಲಿಖಿತ ವಾಕ್ಯಗಳೊಂದಿಗೆ ಗುರುತಿಸಬಹುದು. ಅದರ ರಚನೆಯು ಅದೇ ದೈವಿಕ ಜ್ಞಾನದಲ್ಲಿ ಉಂಟಾಗಿದೆ ಮತ್ತು ಇದು ಪ್ರವಾದಿಯು ಮೇಲೆ ಉಲ್ಲೇಖಿಸಿರುವ ಸಾಕ್ಷ್ಯಕ್ಕೆ ಆಧಾರ ಸ್ಥಂಭವಾಗಿದೆ ಎಂಬುದು ಯಾವುದೇ ರೀತಿಯಲ್ಲಿ ಪರಿಣಾಮವನ್ನುಂಟು ಮಾಡುತ್ತದೆಂದು ಮೆಚ್ಚಿಕೊಳ್ಳದಿರಲಾಗದು.

ಅದು ದೇವರ ನಿರ್ದೇಶನದಂತೆ ಜನರಿಗೆ ಆತನ ಸಾಕ್ಷ್ಯವೆಂಬಂತೆ ಕಟ್ಟಲ್ಪಟ್ಟಿದ್ದರೆ, ನಾವು ದೇವರ ವಾಕ್ಯದಲ್ಲಿ ಇದಕ್ಕೆ ಸೂಚ್ಯ ಉಲ್ಲೇಖವನ್ನು ನಿರೀಕ್ಷಿಸಬಹುದು. ಮತ್ತು ಇನ್ನೂ, ಅಂತ್ಯದವರೆಗೆ ಗುಪ್ತತೆಯನ್ನು ಕಾಪಾಡಿಕೊಳ್ಳುವುದು ದೇವರ ಉದ್ದೇಶವಾಗಿರುವುದರಿಂದ, ಯೋಜನೆಗಳ ಬಗ್ಗೆ ಅದು ಕೊಡುವ ಸಾಕ್ಷ್ಯ ಇದರ ಬಗ್ಗೆ ದೇವರ ವಾಕ್ಯಗಳಲ್ಲಿ ಯಾವುದೇ ಅನ್ವಯವು ಇರುವುದಾದರೂ ಅದನ್ನು ಅರ್ಥ ಮಾಡಿಕೊಳ್ಳುವ ತಕ್ಕ ಕಾಲವು ಬರುವವರೆಗೆ ಮುಚ್ಚಿಡಲ್ಪಡುತ್ತದೆಂದು ನಾವು ನಿರೀಕ್ಷಿಸಬಹುದು.

ಯೆಶಾಯನು ಮೇಲೆ ಉಲ್ಲೇಖಿಸಿರುವಂತೆ, ಐಗುಪ್ತ ದೇಶದಲ್ಲಿ ಒಂದು ಬಲಿಪೀಠ ಮತ್ತು ಸ್ಥಂಭದ ಬಗ್ಗೆ "ಅವು ಐಗುಪ್ತದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವುವು" ಎಂದು ಸಾಕ್ಷಿ ಹೇಳುವವನಾಗಿದ್ದಾನೆ. ಮಹಾ ರಕ್ಷಕನೂ ಮತ್ತು ವಿಮೋಚಕನು ಶೋಷಣೆಯ ಸರಪಳಿಯನ್ನು ಮುರಿದುಹಾಕಲು ಮತ್ತು ಪಾಪದ ಬಂಧನದಲ್ಲಿರುವವರನ್ನು ಬಿಡುಗಡೆಗೊಳಿಸಲು ಬರುತ್ತಾನೆ ಎಂದು ನಮ್ಮ ಕರ್ತನು ಆತನ ಮೊದಲ ಆಗಮನದಲ್ಲಿ ಬೋಧಿಸಿದ (ಲೂಕ 4:18) ಸನ್ನಿವೇಶವನ್ನು ಇದು ತೋರಿಸುತ್ತದೆ, ಈ ಪ್ರವಾದನೆಯ ವ್ಯಾಪ್ತಿ ಮಸುಕಾಗಿ ಕಂಡುಬರುತ್ತದೆ. ಆದಾಗ್ಯೂ ಐಗುಪ್ತವು ಒಂದು ಸಂಕೇತವಾಗಿ ಅಥವಾ ವ್ಯರ್ಥ ವೇದಾಂತಗಳುಳ್ಳ ಮಾನವ ಜಾತಿಯ ನಮೂನೆಯಾಗಿ ಗ್ರಹಿಸಲ್ಪಟ್ಟಿದೆ. ಇದುವೇ ಅವರ ತಿಳುವಳಿಕೆಗಳನ್ನು ಅಂಧಕಾರಗೊಳಿಸಿದೆ. ಸತ್ಯದ ಬೆಳಕು ಅರಿವಿಲ್ಲದ್ದಾಗಿದೆ. ಇಸ್ರಾಯೇಲ್ಯರು ಈ ಲೋಕದ ಸಂಕೇತವಾಗಿದ್ದಾರೆ. ಅವರಿಗಾಗಿ ಪಾಪ ಪರಿಹಾರ ಯಜ್ಞವು ಆರೋನನಿಂದ ಸಮರ್ಪಿಸಲ್ಪಟ್ಟಿದ್ದು ಅವರು ಮೋಶೆಯ ಪ್ರತಿಸಂಕೇತನಿಂದ ಆ ಪಾಪದ ಬಂಧನದಿಂದ ವಿಮೋಚಿಸಲ್ಪಡುವರು. ಹೀಗಾಗಿ ಐಗುಪ್ತವು ಪಾಪದ

ಚಕ್ರಾಧಿಪತ್ಯವನ್ನು, ಮರಣದ ಸಾಮ್ರಾಜ್ಯವನ್ನು ಪ್ರತಿನಿಧಿಸುವುದಾಗಿದೆ (ಇಬ್ರಿಯ 2:14) ಎಂಬುದರಲ್ಲಿ ದೀರ್ಘಕಾಲದವರೆಗೆ ದಾಸತ್ವದ ಸರಪಳಿಯಲ್ಲಿ ಕಟ್ಟಲ್ಪಟ್ಟವರಾಗಿದ್ದ ಕೆಲವರು ಮೋಶೆಯು ನಾಯಕತ್ವದಂತೆ ಆದರೆ ಮೋಶೆಗೂ ಮಿಗಿಲಾದವನ ನೇತೃತ್ವದಲ್ಲಿ ಕರ್ತನನ್ನು ಸೇವಿಸಲು ಸಂತೋಷದಿಂದ ಮುಂದಾಗುವರು (ಅ.ಕೃ. 3: 22,23).

ಅನೇಕ ದೇವರ ವಾಕ್ಯಗಳಲ್ಲಿ ಐಗುಪ್ತರ ಸಾಂಕೇತಿಕ ಗುಣಲಕ್ಷಣವು ಸೂಚಿತವಾಗಿದೆ. ಉದಾಹರಣೆಗೆ ಹೋಶೇಯ 11:1 ಮತ್ತು ಮತ್ತಾಯ 2:13–15. ಇಲ್ಲಿ ವಾಸ್ತವವಾಗಿ, ನಮ್ಮ ಕರ್ತನು ಶಿಶುವಾಗಿರುವಾಗ ಕೆಲವು ಸಮಯದವರೆಗೆ ಐಗುಪ್ತ ದೇಶದಲ್ಲಿದ್ದನು ಮತ್ತು ಇಸ್ರಾಯೇಲ್ಯರೂ ಸಹ ಹಲವು ಸಮಯದವರೆಗೆ ಐಗುಪ್ತದಲ್ಲಿದ್ದರು ಎಂಬದರಲ್ಲಿ ಸ್ಪಷ್ಟವಾಗಿ ಮತ್ತೊಂದು ಸಾಂಕೇತಿಕ ಮಹತ್ವವಿದೆ. ಮನುಷ್ಯ ಕುಮಾರನು ಮಾನವರ ಸಲುವಾಗಿ ಬಂದು, ಅವರನ್ನು ಆತನು ವಿಮೋಚಿಸಲು, ಬಿಡುಗಡೆಗೊಳಿಸಲು ಆತನು ಕೆಲವು ಸಮಯದವರೆಗೆ ಈ ಲೋಕದಲ್ಲಿದ್ದನು. ಆದರೆ ಆತನನ್ನು ಅದರೊಳಗಿಂದ, ಐಗುಪ್ತದಿಂದ – ಇನ್ನೂ ಹೆಚ್ಚಿನ ದೈವಿಕ ಸ್ವಭಾವಕ್ಕೆ ಕರೆಯಲಾಯಿತು. ಅದರಂತೆ ಯಾರು ಆತನ ಸಹೋದರರಾಗಿ, ಜೊತೆ ಬಾಧ್ಯಸ್ತರಾಗಿ ಕರೆಯಲ್ಪಡುವರೋ ಅಂಥವರು ಆತನ 'ದೇಹದ ಅಂಗಗಳಾಗಿರುವರು', ದೇವರ ನಿಜವಾದ ಇಸ್ರಾಯೇಲ್ಯ ರಾಗಿರುವವರು ಸಹ, ಐಗುಪ್ತದಿಂದ ಹೊರಬರುವಂತೆ ಕರೆಯಲ್ಪಡುತ್ತಾರೆ. ಮತ್ತು ನಮ್ಮ ಕರ್ತನು "ನಾನು ಲೋಕದವನಲ್ಲದೆ ಇರುವ ಕಾರಣ ಇವರೂ ಲೋಕದವರಲ್ಲ" (ಯೋಹಾನ 17:14) ಎಂದು ಸಾಕ್ಷಿ ಹೇಳಿದ್ದಾನೆ.

ಯೆಶಾಯ (31:1,3) ಈಗ ಸಮೀಪಿಸುತ್ತಿರುವ ಮಹಾ ಸಂಕಟವನ್ನು ಸೂಚಿಸುವವನಾಗಿ "ಅಯ್ಯೋ, ಸಹಾಯಕ್ಕಾಗಿ ಐಗುಪ್ತವನ್ನು (ಈ ಲೋಕದ ಆಲೋಚನೆಗಳಿಗಾಗಿ ಮತ್ತು ಯೋಜನೆಗಳಿಗಾಗಿ, ಮಹಾ ದಿನದ ಬಿಕ್ಕಟ್ಟಿನಲ್ಲಿ ಏನು ಮಾಡಬಹುದೆಂಬ ಸಮಾಲೋಚನೆಗಾಗಿ ಈ ಲೋಕವನ್ನು) ಸೇರಿ ಅಶ್ವಬಲವನ್ನು ಆಶ್ರಯಿಸುವವರ (ಇನ್ನೂ ಹಳೆಯವುಗಳಾದ ತಪ್ಪುಸಿದ್ಧಾಂತಗಳ ಹವ್ಯಾಸದ ಸವಾರಿ ಮಾಡಲು ಹೆಣಗುವವರ) ಗತಿಯನ್ನು ಏನು ಹೇಳಲಿ! ರಥಗಳು (ಈ ಲೋಕದ ಸಂಸ್ಥೆಗಳು) ಬಹಳವೆಂದು ಅವುಗಳಲ್ಲಿ ನಂಬಿಕೆ ಇಟ್ಟು, ಸವಾರರು (ತಮ್ಮ ಸಿದ್ಧಾಂತಗಳುಳ್ಳ ನಾಯಕರುಗಳು) ಬಹು ಬಲಿಷ್ಠರೆಂದು ಅವರ ಮೇಲೆ ಭರವಸೆಪಡುತ್ತಾರೆ. ಆದರೆ ಇಸ್ರಾಯೇಲ್ಯರ ಸದಮಲ ಸ್ವಾಮಿಯ ಕಡೆಗೆ ದೃಷ್ಟಿ ಇಡುವುದಿಲ್ಲ (ಸುರಕ್ಷಿತತೆ ಮತ್ತು ಜಯವು ಈ ಸಂಕಟದ ದಿನಗಳಲ್ಲಿ ಜನಸಮೂಹದಲ್ಲಿ ಇರುವುದಿಲ್ಲ) ಯೆಹೋವನನ್ನು ಆಶ್ರಯಿಸುವುದಿಲ್ಲ. ಐಗುಪ್ತರು ಮನುಷ್ಯರು ಮಾತ್ರದವರೇ, ದೇವರಲ್ಲ, ಅವರ ಅಶ್ವಗಳು ಮಾಂಸಮಯವೇ, ಆತ್ಮವಲ್ಲ; ಯೆಹೋವನು ಕೈಚಾಚುವಾಗ (ಆತನ ಶಕ್ತಿಯನ್ನು, ಸತ್ಯದ ಶಕ್ತಿಯನ್ನು ಮತ್ತು ಇತರೆ ಪಾರುಪತ್ಯಗಳನ್ನು) ಆತನು ಸದ್ಯದಲ್ಲಿಯೇ ಹೀಗೆ ಮಾಡಲಿರುವನು) ಸಹಾಯ ಮಾಡಿದವನು ಮುಗ್ಗರಿಸುವನು, ಸಹಾಯ ಪಡೆದವನು (ಐಗುಪ್ತದ ಶಕ್ತಿಯಿಂದ, ಭೂಲೋಕದ ಆಲೋಚನೆಗಳಿಂದ) ಬಿದ್ದುಹೋಗುವನು. ಅಂತೂ ಎಲ್ಲರೂ ಒಟ್ಟಿಗೆ ಲಯವಾಗುವರು".

ಎಷ್ಟೇ ಆದರೂ ಅವು ಮಾನವರ ಯೋಜನೆಗಳು ಮತ್ತು ರೂಪರೇಖೆಗಳಾಗಿದ್ದು ಅವರನ್ನು ಸೋಲಿಸಿದವು. ಮಾನವರು ತಮ್ಮ ಸ್ವಂತ ಪಾಪಭರಿತತೆ ಮತ್ತು ಅಸಹಾಯಕತೆಯನ್ನು ತಿಳಿದುಕೊಳ್ಳುವಾಗ ಅವರು ಸಹಾಯಕ್ಕಾಗಿ ದೇವರಿಗೆ ಮೊರೆ ಇಡುತ್ತಾರೆ. ಆಗ ಯೆಹೋವನು ತನ್ನನ್ನು ಮಹಾ ರಕ್ಷಕನೆಂದು ತೋರಿಸಿಕೊಳ್ಳುತ್ತಾನೆ. ಆತನು ತನ್ನ ವಿವೇಕವನ್ನು, ಭವಿಷ್ಯಜ್ಞಾನವನ್ನಾಗಿ ಮತ್ತು ಕೃಪೆಯಾಗಿ ಈ ಲೋಕಕ್ಕೆ ಮನದಟ್ಟು ಪಡಿಸುವಂತೆ ಈಗಾಗಲೇ ಮಹಾ ಪಿರಮಿಡ್ಡನ್ನು ಸಿದ್ಧಪಡಿಸಿ ಅದನ್ನು ಸಾಧನತೆಯನ್ನಾಗಿ ಮಾಡಿಕೊಂಡಿದ್ದಾನೆ. "ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವುವು. ಅವು ಐಗುಪ್ತದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ. (ಆತನ ಭವಿಷ್ಯ ಜ್ಞಾನಕ್ಕೆ ಮತ್ತು ರಕ್ಷಣೆಯ ಆತನ ಕೃಪಾ ಯೋಜನೆಗೆ ಸಾಕ್ಷಿಯಾಗಿಯೂ ಈಗ ನಾವು ನೋಡುತ್ತಿರುವಂತೆ) ಇರುವುವು. ಹಿಂಸಕರ ದೆಸೆಯಿಂದ (ಐಗುಪ್ತರು, ಬಡವಾದ ಲೋಕವು ಈಗ ಸಂಕಟದ ಕಾಲವು ಹತ್ತಿರ ಬರುತ್ತಿರಲಾಗಿ) ಯೆಹೋವನನ್ನು ಕೂಗಿಕೊಳ್ಳಲು, ಆತನು ಅವರಿಗಾಗಿ ಹೋರಾಡುವ ಶೂರನಾದ ರಕ್ಷಕನನ್ನು ಕಳುಹಿಸಿ ಅವರನ್ನುದ್ಧರಿಸುವನು ಮತ್ತು ಯೆಹೋವನು ತನ್ನನ್ನು ಐಗುಪ್ತರಿಗೆ (ಲೋಕಕ್ಕೆ) ತಿಳಿಯಪಡಿಸಲು ಅವರು ಆ ದಿನದಲ್ಲಿ ಯೆಹೋವನನ್ನು ತಿಳುಕೊಳ್ಳುವರು; (ಮಿಲಿಯಾಂತರದ

ದಿನ – ಸಂಕಟದ ಕಾಲವು ಮುಗಿಯುವಾಗ) ಹೌದು, ಯಜ್ಞ ನೈವೇದ್ಯಗಳ ಸೇವೆಯನ್ನಾಚರಿಸಿ ಯೆಹೋವನಿಗೆ ಹರಕೆ ಮಾಡಿಕೊಂಡು ಅದನ್ನು ನೆರವೇರಿಸುವರು. ಇದಲ್ಲದೆ ಯೆಹೋವನು ಐಗುಪ್ತರನ್ನು (ಲೋಕವನ್ನು, ಸಂಕಟದ ಸಮಯವು ಹತ್ತಿರದಲ್ಲಿರುವಾಗಲೇ) ಹೊಡೆಯುವನು. ಗಾಯವಮಾಡಿ ವಾಸಿಮಾಡು ವವನಾಗಿಯೇ ಹೊಡೆಯುವನು; ಅವರು ಯೆಹೋವನ ಕಡೆಗೆ ತಿರುಗಿಕೊಳ್ಳುವರು ಆತನು ಅವರ ವಿಜ್ಞಾಪನೆಯನ್ನು ಲಾಲಿಸಿ ಅವರನ್ನು ಗುಣಪಡಿಸುವನು" (ಯೆಶಾಯ 19; 19–22).

ಮಹಾ ಪಿರಮಿಡ್‌ನಿಂದ ಹೆಚ್ಚಿನ ಸಮರ್ಥನೀಯ ಸಾಕ್ಷ್ಯವು ದೇವರ ಲಿಖಿತ ವಾಕ್ಯಗಳಿಗೆ ನೀಡಲ್ಪಡುವಾಗ ಅದು ಭಕ್ತರುಗಳು ಲವಲವಿಕೆಯಿಂದ ಸಂತೋಷ ಪಡುವುದಕ್ಕೆ ಕಾರಣವಾಗುತ್ತದೆ. ಅದರ ಸಾಕ್ಷಿ ಹೇಳುವಿಕೆಯು ಮುಖ್ಯವಾಗಿ ಸಹಸ್ರಮಾನಯುಗದಲ್ಲಿ ಮಾನವ ಜಾತಿಯವರಿಗಾಗಿ ಎಂಬುದು ಪ್ರಕಟ ಗೊಳ್ಳುತ್ತದೆ. ಈ ವಿಶಿಷ್ಟವಾದ ಮತ್ತು ಅಪೂರ್ವವಾದ ಸಾಕ್ಷಿಯು ಮಾನವ ಜಾತಿಯವರಿಗೆ ಒಂದು ನೂತನ ವಿಶ್ವಾಸ ಪ್ರೀತಿ ಮತ್ತು ಉತ್ಕಂಠತೆಯ ನೆಲೆಯನ್ನು ಒದಗಿಸುತ್ತದೆ. ಆಗ ಅವರ ಹೃದಯಗಳು ಸೂಕ್ತ ಸಮಯದಲ್ಲಿ ಸತ್ಯಕ್ಕಾಗಿ ಸಿದ್ಧಗೊಳ್ಳುತ್ತವೆ. ಈ ಕಲ್ಲಿನ ಪುರಾವೆಯು ಲೋಕಕ್ಕೆ (ಐಗುಪ್ತಕ್ಕೆ) ಸಧ್ಯದಲ್ಲಿಯೇ ಪ್ರಕಟಗೊಳ್ಳಲಿರುವಾಗ ಇದುವರೆಗೆ ಈ ಸಾಕ್ಷ್ಯವನ್ನು (ಲಿಖಿತ ವಾಕ್ಯಗಳಲ್ಲಿ ಯುಗದ ಯೋಜನೆಗಳಂತೆ) ನಿಶ್ಯಬ್ದವಾಗಿಟ್ಟಿರುವುದು ಅಪೂರ್ವವಾಗಿದೆ. ಆದರೆ, ಆತನು ಅವರೊಡನೆ ಯಾವುದನ್ನೂ ಮರೆಮಾಡದೆ ಭಕ್ತರುಗಳು, ದೇವರ ಸ್ನೇಹಿತರು ಇವರುಗಳಿಗೆ ಈ ಸಾಕ್ಷ್ಯವನ್ನು ಕೇಳುವ ಸೌಭಾಗ್ಯ ಈಗಲೇ, ಅಂದರೆ ಈ ಲೌಕಿಕ ಮನಸ್ಸುಳ್ಳವರು ಆ ಸಾಕ್ಷ್ಯಗಳನ್ನು ಮೆಚ್ಚಿಕೊಳ್ಳಲು ಸಿದ್ಧವಾಗುವ ಮೊದಲೇ ದೊರೆತಿದೆ. ಕರ್ತನಿಗೆ ವಿಧೇಯರಾಗಲು ಸಿದ್ಧವಾಗಿರುವಾಗ ಮಾತ್ರವೇ ಆತನ ಸಾಕ್ಷ್ಯಗಳನ್ನು ಒಪ್ಪಿಕೊಳ್ಳಲಾಗುವುದು.

ಯೆರೆಮೀಯನು ದೇವರ ಪರಾಕ್ರಮ ಕಾರ್ಯದ ಬಗ್ಗೆ ಮಾತನಾಡುತ್ತಾ "ನೀನು ಐಗುಪ್ತ ದೇಶದಲ್ಲಿ ಮಹತ್ಕಾರ್ಯಗಳನ್ನೂ ಉತ್ಪಾತಗಳನ್ನು ನಡಿಸಿ ಈ ದಿನದವರೆಗೆ ಇಸ್ರಾಯೇಲ್ಯರಲ್ಲಿಯೂ ಇತರೆ ಜನರಲ್ಲಿಯೂ ಅವುಗಳನ್ನು ಮಾಡುತ್ತಾ ಬಂದು ಹೆಸರನ್ನು ಪಡೆದುಕೊಂಡಿ; ಅದು ಈಗಲೂ ಸ್ಥಿರವಾಗಿದೆ" (32:20) ಎಂದೆನ್ನುತ್ತಾನೆ. ದೇವರು ಇಸ್ರಾಯೇಲ್ಯರನ್ನು ಅಲ್ಲಿಂದ ವಿಜಯಶಾಲಿಗಳಾಗಿ ಬರಮಾಡಿದಾಗ ಐಗುಪ್ತದಲ್ಲಿ ಸೂಚಕಗಳನ್ನೂ, ಅದ್ಭುತಗಳನ್ನೂ ತೋರಿಸಿದನು; ಅದಲ್ಲದೇ, ಆತನು ಸೂಚಕಗಳನ್ನೂ, ಅದ್ಭುತಗಳನ್ನೂ ಸ್ಥಾಪಿಸಿದನು. ಅವು ಇದುವರೆಗೂ (ನಮ್ಮ ದಿನಗಳವರೆಗೂ) ಅಲ್ಲಿ ಸ್ಥಿರವಾಗಿವೆ, ಮಹಾ ಪಿರಮಿಡ್ ಈ ಸೂಚಕ ಮತ್ತು ಅದ್ಭುತಗಳಲ್ಲಿ ಪ್ರಾಮುಖ್ಯವಾಗಿದೆ ಎಂದು ನಾವು ನಂಬುತ್ತೇವೆ. ಈಗ ಅದು ವಿಜ್ಞಾನಿಗಳಿಗೆ, ಅವರ ಮೂಲಕ ಲೋಕದ ಎಲ್ಲಾ ಜನರಿಗೆ ತಮ್ಮದೇ ಆದ ಭಾಷೆಯಲ್ಲಿ ಮಾತನಾಡುತ್ತದೆ.

ಕರ್ತನು ಯೋಬನಿಗೆ ಲೋಕದ ಕುರಿತಾಗಿ ಕೇಳಿದ ಪ್ರಶ್ನೆಗಳು ಮತ್ತು ಮಾಡಿದ ಹೇಳಿಕೆಗಳು (38:3–7) ಪಿರಮಿಡ್‌ನಲ್ಲಿ ಮಹತ್ತರವಾದ ದೃಷ್ಟಾಂತವನ್ನು ಕಂಡುಕೊಳ್ಳುತ್ತವೆ. ನಂಬುವಂತೆ, ಅದರಲ್ಲಿಯೇ ಮತ್ತು ಅಳತೆಯಲ್ಲಿಯೇ ಈ ಲೋಕವನ್ನು ಮತ್ತು ದೇವರ ಯೋಜನೆಯನ್ನು ಉಲ್ಲೇಖಿಸಿ ಅದನ್ನು ಪ್ರತಿನಿಧಿಸು ವುದಾಗಿದೆ. ಉಪಯೋಗಿಸಿರುವ ದೃಷ್ಟಾಂತವು ಒಂದು ಕಟ್ಟಡವಾಗಿದೆ ಮತ್ತು ಅದು ಪಿರಮಿಡ್ ಆಕಾರದ ರಚನೆಗೆ ಮಾತ್ರವೇ ಹೊಂದುತ್ತದೆ ಎಂದು ನಾವು ನಂಬುತ್ತೇವೆ. ಭಾಷೆಯು, ಪ್ರಥಮವಾಗಿ ಲೋಕಕ್ಕೆ ಅನ್ವಯಿಸುವಾಗ, ಮಹಾ ಪಿರಮಿಡ್‌ನಲ್ಲಿ ನೀಡಿರುವ ದೃಷ್ಟಾಂತಕ್ಕೆ ಹೊಂದಿಕೊಳ್ಳುವಂತೆ ಜೋಡಿಸಲಾಗಿದೆ. ಮೊದಲಿಗೆ, ಅಸ್ತಿವಾರದ ತಯಾರಿಕೆ, ಮಹಾ ಪಿರಮಿಡ್ ಯಾವ ಬಂಡೆಕಲ್ಲಿನ ಮೇಲೆ ಕಟ್ಟಲ್ಪಟ್ಟಿದೆಯೋ ಅದನ್ನು ಗಮನಿಸಲಾಗಿದೆ. ಎರಡನೆಯದಾಗಿ ಅದರ ಅಳತೆಗಳ ವ್ಯವಸ್ಥೆ. ಇದನ್ನು ಪಿರಮಿಡ್‌ನಲ್ಲಿ ಬಹಳ ಪ್ರಧಾನವಾಗಿ ತೋರಿಸಲಾಗಿದೆ. ಅದು ಮಹತ್ತರವಾದ ಅಳತೆಗಳಿಂದ ತುಂಬಿರುತ್ತದೆ. "ಅದರ ಮೇಲೆ ನೂಲು ಹಿಡಿದವರು ಯಾರು?" (ವ. 5). ಆಕಾರದಲ್ಲಿ ಮಹಾ ಪಿರಮಿಡ್‌ನ ಸಮರ್ಪಕತೆ ಮತ್ತು ಎಲ್ಲಾ ತರದಲ್ಲಿ ಅದರ ನಿಖರತೆ ಇವುಗಳು ಅದರ ರಚನೆಯನ್ನು ಒಬ್ಬ ಪ್ರವೀಣ ಶಿಲ್ಪಿಯು ಮಾಡಿದ್ದಾನೆ ಎಂಬುದನ್ನು ರುಜುವಾತುಪಡಿಸುತ್ತದೆ. "ಅದರ ಸುಣ್ಣಪಾದಗಳು ಯಾವುದರಲ್ಲಿ ನೆಲೆ ಗೊಂಡವು?" ಅಥವಾ "ಅದರ ಮೂಲೆಗಲ್ಲುಗಳು ಯಾವುದರಲ್ಲಿ ನೆಲೆಗೊಂಡವು?" (ವ. 7). ಮಹಾ ಪಿರಮಿಡ್‌ನಲ್ಲಿರುವ ನಾಲ್ಕು ಮೂಲೆಗಲ್ಲುಗಳು ಗಟ್ಟಿಯಾದ ಬಂಡೆಯ ಗುಳಿಗಳಲ್ಲಿ ಮುಳುಗುತ್ತವೆ. ಪಿರಮಿಡ್‌ನಲ್ಲಿ ಒಟ್ಟು ಐದು ಮೂಲೆಗಲ್ಲುಗಳಿವೆ, ಆದರೆ ಇಲ್ಲಿ ಒಂದು ನಿರ್ದಿಷ್ಟವಾದ ಮೂಲೆಗಲ್ಲನ್ನು ಸೂಚಿಸಲಾಗಿದೆ. ಮೇಲಿರುವ ಮೂಲೆಗಲ್ಲು. ನಾಲ್ಕು ಸುಣ್ಣಪಾದಗಳಾಗಿ (Socket stones) ಮುಳುಗಿವೆ. ಉಳಿದಿರುವುದೇ ಮೇಲಿನ ಮೂಲೆಗಲ್ಲು. ಇದು

ರಚನೆಯ ಬಹು ಮಹತ್ವವಾದ ಕಲ್ಲಾಗಿದೆ. ಅದು ತನಗೆ ತಾನೇ ಬಹು ಸಮರ್ಪಕವಾದ ಪಿರಮಿಡ್ಡಾಗಿದೆ, ಅದರ ಸಮಗ್ರ ರಚನೆಯಲ್ಲಿರುವ ಗೆರೆಯು ಇದಕ್ಕೆ ಅನುರೂಪವಾಗಿದೆ. ಆದುದರಿಂದ, ಅದರ ಮಹತ್ವದ ಕುರಿತಾಗಿ ಪ್ರಶ್ನೆಯು, ಅದರ ವಿಶಿಷ್ಟವಾದ ಔಚಿತ್ಯದ ಬಗ್ಗೆ ಮತ್ತು ಅದನ್ನು ಮೇಲಿನ ಬಂಡೆಯ ಮೇಲೆ ಇಡಲಾದ ಬುದ್ಧಿವಂತಿಕೆ ಮತ್ತು ಕಾರ್ಯಕುಶಲತೆಯ ಬಗ್ಗೆ ಆಗಿದೆ.

ಈ ಪುರಾತನ ರಚನೆಯು ಈ ರೀತಿಯಾಗಿ ಪುನಃ ಪುನಃ ವೇದವಚನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದು ಈ ಐಗುಪ್ತ ದೇಶದಲ್ಲಿ ದೇವರ ಈ ಸಾಕ್ಷ್ಯವು ಅಂಥಾಃ ರುಜುವಾತನ್ನು ಹೊಂದಿದೆ ಮತ್ತು ಯೆಹೋವನಿಗೆ ಮಹಿಮೆಯನ್ನು ಸಲ್ಲಿಸುತ್ತದೆ ಮತ್ತು ಆತನ ಲಿಖಿತ ವಾಕ್ಯಗಳಿಗೆ ಅನುಗುಣ ವಾಗಿದೆ ಎಂಬುದರ ಬಗ್ಗೆ ನಾವು ಅನುಮಾನಿಸಲಾಗದು. ನಾವು ಈ ರೀತಿಯಲ್ಲಿ ಈ "ಸಾಕ್ಷವನ್ನು" ಪರಿಚಯಿಸುತ್ತೇವೆ. ಯಾಕೆಂದರೆ ಅದರ ರುಜುವಾತುಗಳ ಸ್ಫೂರ್ತಿಯು ಅಂಧಕಾರದ ಅಧಿಪತಿಗೆ, ಈ ಲೋಕದ ಅರಸನಿಗೆ ಮತ್ತು ಆತನು ಯಾರಿಗೆ ಈ ಸತ್ಯವನ್ನು ಕುರುಡಾಗಿಸುತ್ತಾನೆಂರೋ ಅವರಿಗೆ ನಿಸ್ಸಂದೇಹವಾಗಿ ಸತ್ಯವೇದ ಪ್ರಕಾರ ವಿವಾದಾತ್ಮಕವಾಗಿವೆ.

## ಈ ಮಹಾ ಪಿರಮಿಡ್ಡನ್ನು ಯಾಕೆ? ಯಾವಾಗ? ಮತ್ತು ಯಾರಿಂದ ಕಟ್ಟಲ್ಪಟ್ಟಿತು?

## Why, When and by Whom was The Great Pyramid Built ?

ಈ ಪ್ರಶ್ನೆಯ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವೈಜ್ಞಾನಿಕ ಮತ್ತು ಪರಿಶುದ್ಧ ಗ್ರಂಥಗಳ ದೃಷ್ಟಿಕೋನಗಳಲ್ಲಿ ಬಹಳಷ್ಟು ಚರ್ಚೆಗಳಾಗಿವೆ. ಸಹಸ್ರಾರು ವರ್ಷಗಳವರೆಗೆ ಈ ಬಗ್ಗೆ ಯಾವುದೇ ತೃಪ್ತಿಕರ ಉತ್ತರವು ಕಂಡುಹಿಡಿಯಲ್ಪಡಲಿಲ್ಲ. ಒಂದು ಹಳೆಯ ವಿಚಾರ ಸರಣಿಯ ಪ್ರಕಾರ ಇದನ್ನು ಒಬ್ಬ ಐಗುಪ್ತ ಅರಸನ ಸಮಾಧಿಯನ್ನಾಗಿ ನಿರ್ಮಿಸಲಾಯಿತು. ಆದರೆ ಇದು ನಂಬಲು ಅನರ್ಹವಾಗಿದೆ; ಯಾಕೆಂದರೆ, ನಾವು ಕಾಣುವಂತೆ, ಈ ರೀತಿಯ ಕಟ್ಟಡ ಕಟ್ಟಲು ಈ ದಿನಗಳ ಜ್ಞಾನಕ್ಕಿಂತಲೂ ಹೆಚ್ಚಾದ ಜ್ಞಾನ ಇದಕ್ಕೆ ಬೇಕಾಗುತ್ತದೆ. ಅಂಥಾಃ ಜ್ಞಾನ ನಾಲ್ಕು ಸಾವಿರ ವರ್ಷಗಳ ಹಿಂದೆ ಐಗುಪ್ತದ ಅರಸನಿಗೆ ಇತ್ತೆಂದು ಹೇಳಲು ಸಾಧ್ಯವಿಲ್ಲ. ಅದಕ್ಕೂ ಹೆಚ್ಚಾಗಿ ಇದರಲ್ಲಿ ಯಾವುದೇ ಪೆಟ್ಟಿಗೆಯಾಗಲೀ, ಮಮ್ಮಿಯಾಗಲೀ ಅಥವಾ ಶಿಲಾಶಾಸನಗಳಾಗಲಿ, ಸ್ಮಾರಕ ಲೇಖನವಾಗಲೀ ಇರುವುದಿಲ್ಲ. ದಾನಿಯೇಲ 12:4,9,10ರ ಪ್ರಕಾರ 'ಅಂತ್ಯಕಾಲವು' ಬಂದಾಗ ಮಾತ್ರವೇ ಜ್ಞಾನವು ಹೆಚ್ಚಾಗುತ್ತದೆ ಮತ್ತು ಜ್ಞಾನಿಗಳು ದೇವರ ಯೋಜನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ, ಮಹಾ ಪಿರಮಿಡ್‌ನ ರಹಸ್ಯಗಳನ್ನು ಅರ್ಥ ಮಾಡಿಕೊಳ್ಳಲು ಈಗಷ್ಟೆ ಪ್ರಾರಂಭವಾಗಿದೆ ಮತ್ತು ನಮ್ಮ ಪ್ರಶ್ನೆಗೆ ವಿಶ್ವಾಸಾರ್ಹ ಉತ್ತರಗಳು ಬರಲು ಪ್ರಾರಂಭಿಸಿವೆ.

ಈ ಮಹಾ ಪಿರಮಿಡ್‌ನ ವೈಜ್ಞಾನಿಕ ಲಕ್ಷಣಗಳನ್ನು ಸಾಬೀತುಪಡಿಸುವ ಪ್ರಸ್ತಾಪದ ಮೇಲೆ ಮುಖ್ಯವಾದ ಮೊದಲ ಕಾರ್ಯವು 1859ರಲ್ಲಿ ಇಂಗ್ಲೆಂಡಿನ ಜಾನ್ ಟೈಲರ್ ಎಂಬಾತನಿಂದ ಪ್ರಾರಂಭಗೊಂಡಿತು. ಅಂದಿನಿಂದ ಅನೇಕ ಸಮರ್ಥರ ಮನಸ್ಸಿನ ಗಮನವನ್ನು ಈ ಅದ್ಭುತ ಸಾಕ್ಷ್ಯದ ಮುಂದುವರೆದ ಅಧ್ಯಯನದತ್ತ ನೀಡಲಾಯಿತು. ಗಮನಾರ್ಹವಾಗಿ ಪ್ರೊ॥ ಪಿಯಾಝಿ ಸ್ಮಿತ್ ಸ್ಕಾಟ್ಲಾಂಡಿನ ಅರಸೊತ್ತಿಗೆಯ (ರಾಜ) ಖಗೋಳ ಶಾಸ್ತ್ರಜ್ಞನು ಅದಕ್ಕೆ ಬೇಟಿಕೊಟ್ಟಮೇಲೆ, ಕೆಲವು ತಿಂಗಳುಗಳವರೆಗೆ ಅವರು ಅದರ ವೈಶಿಷ್ಟ್ಯಗಳ ಅಧ್ಯಯನ ನಡೆಸಿ ಅದರ ರಚನೆಯ ಬಗ್ಗೆ, ಅಳತೆಗಳ ಬಗ್ಗೆ ಮಹತ್ವವಾದ ಸತ್ಯಗಳನ್ನು ಮತ್ತು ಅವುಗಳಿಂದ ದೊರೆತ ತಮ್ಮ ಸಿದ್ಧಾಂತಗಳನ್ನು ಈ ಲೋಕಕ್ಕೆ ನೀಡಿದರು. ಅವರ ಈ ಪಾಂಡಿತ್ಯಮಯ ವೈಜ್ಞಾನಿಕ ಕಾರ್ಯದ ಬಗ್ಗೆ ಬರೆದ "ಗ್ರೇಟ್ ಪಿರಮಿಡ್ ನಮ್ಮ ಪಿತ್ರಾರ್ಜಿತ" (Our inheritance in the Great Pyramid) ಎಂಬ ಕೃತಿಗೆ ನಾವು ಬಹಳ ಆಭಾರಿಯಾಗಿದ್ದೇವೆ ಮತ್ತು ಅದರಲ್ಲಿ ಕೊಟ್ಟಿರುವ ಮಾಹಿತಿಗಳನ್ನು ಈ ಅಧ್ಯಾಯದಲ್ಲಿ ಉಪಯೋಗಿಸಿ ಕೊಂಡಿದ್ದೇವೆ. ನಮ್ಮ ದೃಷ್ಟಾಂತಗಳು ಅವರ ಇಪ್ಪತ್ತೈದು ಹಾಳೆಗಳ ಕೆಲವು ಪ್ರತಿಗಳಾಗಿವೆ. ಅದರೊಂದಿಗೆ ಆ ಕಾರ್ಯದ ಇತ್ತೀಚಿನ ಆವೃತ್ತಿಯನ್ನು ಒಪ್ಪಗೊಳಿಸಲಾಗಿದೆ.

ಪ್ರೊ॥ ಸ್ಮಿತ್‌ರವರು ಹಿಂತಿರುಗಿದ ಕೆಲವು ವರ್ಷಗಳ ನಂತರದಲ್ಲಿ, ಮಹಾ ಪಿರಮಿಡ್ ಯೆಹೋವನ "ಸಾಕ್ಷಿಯಾಗಿದೆ" ಮತ್ತು ಅದರ ದೈವಿಕ ಸತ್ಯವನ್ನು ಕಣ್ಣಾರೆ ಕಾಣುವುದು ಪ್ರಾಕೃತಿಕ ವೈಜ್ಞಾನಿಕ ಸತ್ಯವನ್ನು ಕಾಣುವಷ್ಟೇ ಮುಖ್ಯವಾಗಿದೆ ಎಂಬ ಸಲಹೆ ಬಂತು. ಇದು ಪ್ರೊ॥ ಸ್ಮಿತ್‌ರವರಿಗೆ ಮತ್ತು ಬೇರೆ ಕೆಲವರಿಗೆ ನೂತನ ಆಲೋಚನೆಯಾಗಿತ್ತು, ಸಲಹೆಯು ಸ್ಕಾಂಟ್ಲ್ಯಾಂಡಿನ ಒಬ್ಬ ಯುವಕ ರಾಬರ್ಟ್ ಮೆಂಜೀಸ್ ಎಂಬಾತನಿಂದ ಬಂತು. ಆತನು ಮಹಾ ಪಿರಮಿಡ್‌ನ ವೈಜ್ಞಾನಿಕ ಬೋಧನೆಗಳ ಅಧ್ಯಯನ ಮಾಡುತ್ತಿರುವಾಗ ಪ್ರವಾದನೀಯ ಮತ್ತು

ಕಾಲಗಣನೆಯ ಬೋಧನೆಗಳು ಸಹ ಅವುಗಳೊಟ್ಟಿಗೆ ಅವೆ ಎಂಬುದನ್ನು ಕಂಡುಕೊಂಡನು.

ಅದರ ನಿರ್ಮಾಣದ ಉದ್ದೇಶವು ಅದರಲ್ಲಿ ದೇವರ ರಕ್ಷಣಾ ಯೋಜನೆಯ ದಾಖಲೆಯೊಂದನ್ನು ಒದಗಿಸುವುದು ಎಂಬುದು ಬೇಗನೆ ಸ್ಪಷ್ಟವಾಯಿತು, ಅಷ್ಟಲ್ಲದೇ ಸಂಬಂಧಪಟ್ಟ ದೈವಿಕ ಜ್ಞಾನದ ದಾಖಲೆಗಳಾದ ಇದು ಖಗೋಳ ಶಾಸ್ತ್ರದ, ಕಾಲಗಣನೆಯ ಮತ್ತು ರೇಖಾ ಶಾಸ್ತ್ರದ ಮತ್ತು ಇತರೆ ಮುಖ್ಯವಾದ ಸತ್ಯಗಳಿಗೆ ಕಡಿಮೆಯದೇನಲ್ಲ. ಏನೇ ಆದರೂ, ಶುದ್ಧ ಗ್ರಂಥಗಳಲ್ಲಿ ಬಹಿರಂಗಪಟ್ಟಿರುವ ರಕ್ಷಣಾ ಯೋಜನೆಯ ವ್ಯಾಪ್ತಿ ಮತ್ತು ಸಂಪೂರ್ಣತೆಯನ್ನು ಅರಿತುಕೊಳ್ಳದೆ, ಈ ಗಣ್ಯವ್ಯಕ್ತಿಗಳು ಮಹಾ ಪಿರಮಿಡ್‌ನ ಅಂಶಗಳ ಅತ್ಯಂತ ಅದ್ಭುತ ಮತ್ತು ಸುಂದರವಾದ ಈ ಸಾಕ್ಷ್ಯವನ್ನು ನೋಡಲು ಬಹಳಷ್ಟು ಸೋತು ಹೋಗಿದ್ದಾರೆ. ಇದನ್ನು ನಾವೀಗ ಯುಗಾಂತರಗಳ ಯೋಜನೆಯ ಬಹಳ ಪೂರ್ಣ ಮತ್ತು ಸಂಪೂರ್ಣ ಸಮರ್ಥನೀಯ ಎಂದು ಕಾಣುತ್ತೇವೆ ಮತ್ತು ಅದರೊಂದಿಗಿನ ಸಮಯ ಮತ್ತು ಕಾಲವು ಪರಿಶುದ್ಧ ಗ್ರಂಥಗಳಲ್ಲಿ ಕಲಿಸಿಕೊಡಲಾಗಿದೆ ಮತ್ತು ಇದರಲ್ಲಿ ಮತ್ತು Scripture Studiesನ ಹಿಂದಿನ ಸಂಪುಟಗಳಲ್ಲಿ ಪ್ರಸ್ತುತಗೊಂಡಿದೆ ಮತ್ತು ಮುಂದುವರೆಯುತ್ತಾ, ನಾವು ಜ್ಞಾನದ ಈ ಭಂಡಾರವು, ಸತ್ಯವೇದ ಭಂಡಾರದ ಹೆಚ್ಚಿನ ಭಾಗದಂತೆ ಅದರ ಸಾಕ್ಷ್ಯವು ಅಗತ್ಯವಾಗಿದೆ ಮತ್ತು ಮೆಚ್ಚಿಕೊಳ್ಳತಕ್ಕದ್ದಾಗಿದೆ ಎಂಬ ಅಗತ್ಯವು ಉಂಟಾಗುವವರೆಗೆ ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗಿತ್ತು ಎಂದು ನೋಡುತ್ತೇವೆ. ಹಾಗಿದ್ದರೆ, ಇದರ ಮಹಾಶಿಲ್ಪಿಗೆ ಇದರ ಸಾಕ್ಷ್ಯವು ಅಗತ್ಯವಾಗಿರುವ ಸಮಯ ಬರುತ್ತದೆ ಎಂದು ಗೊತ್ತಿತ್ತು ಎಂದು ಸೂಚಿಸುತ್ತದೆಯೋ? ಮತ್ತೊಂದು ಮಾತುಗಳಲ್ಲಿ, ದೇವರ ಲಿಖಿತ ಮಾತುಗಳನ್ನು ಹಗುರವಾಗಿ ತೆಗೆದುಕೊಳ್ಳುವ ಮತ್ತು ಆತನ ಇರುವಿಕೆಯನ್ನೇ ಪ್ರಶ್ನಿಸುವ ಸಮಯವು ಬರಲಿದೆ ಮತ್ತು ಆತನ ಅಸ್ಥಿತ್ವವನ್ನೇ ಪ್ರಶ್ನಿಸುವರೋ, ಯಾವಾಗ ಮಾನವ ತತ್ವಜ್ಞಾನವನ್ನು ವಿಜ್ಞಾನದ ಹೆಸರಿನಲ್ಲಿ ಮೆಚ್ಚಿಕೊಳ್ಳಲಾಗುವುದು ಮತ್ತು ಪ್ರತಿಯೊಂದು ಪ್ರಸ್ತಾಪವೂ ಅದರ ಪರೀಕ್ಷೆಗೊಳಪಡುತ್ತದೆಯೋ? ದೇವರು ತನ್ನನ್ನೂ ತನ್ನ ವಿವೇಕವನ್ನೂ ಈ ಪರೀಕ್ಷೆಗಳ ಮೂಲಕ ರುಜುವಾತುಪಡಿಸಲು ನಿರ್ಧರಿಸಿದ್ದಾನೆಯೋ? ಹಾಗೆಂದು ಕಂಡು ಬರುತ್ತಿದೆ. ಈ ರಚನೆಯು "ಆ ದಿನದಲ್ಲಿ" ಸೇನಾಧೀಶ್ವರನಾದ ಯೆಹೋವನ ಸಾಕ್ಷಿಯಾಗಿ ಬುದ್ಧಿವಂತರ ಜ್ಞಾನವನ್ನು ಮತ್ತೂ ಗೊಂದಲಗೊಳಿಸುತ್ತದೆ – ಇದು ಈಗಾಗಲೇ ಪ್ರಾರಂಭವಾಗಿದೆ.

ಪ್ರೊ॥ ಸ್ಮಿತ್‌ರವರು ಮಹಾಪಿರಮಿಡ್ ಕ್ರಿ.ಪೂ. 2170ರಲ್ಲಿ ಕಟ್ಟಲ್ಪಟ್ಟಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ, ಅವರು ಮೊದಲಿಗೆ ಖಗೋಲದ ಅವಲೋಕನಗಳಿಂದ ಈ ತೀರ್ಮಾನಕ್ಕೆ ಬಂದಿರುತ್ತಾರೆ. ಮೇಲ್ಗಡೆ ಹೋಗುವ ಹಾದಿಯ ಕೋನಗಳು ದೂರದರ್ಶಕಕ್ಕೆ ಅನುಗುಣವಾಗಿದೆ ಮತ್ತು ಪ್ರವೇಶದ ಮಾರ್ಗವು ಖಗೋಳ ಶಾಸ್ತ್ರಜ್ಞನ 'Pointer'ಗೆ ಅನುಗುಣವಾಗಿದೆ ಎಂಬುದನ್ನು ಗ್ರಹಿಸಿಕೊಂಡು ಅವರು ನಿರ್ದಿಷ್ಟವಾದ ಯಾವ ನಕ್ಷತ್ರವನ್ನು ಹಿಂದಿನ ಯಾವುದೇ ಕಾಲದಲ್ಲಿ ಗುರಿ ಇಟ್ಟಿದ್ದಿರಬಹುದು ಎಂದು ಕಂಡು ಹಿಡಿಯಲು ಮುಂದಾದರು. ಅವರ ಲೆಕ್ಕಾಚಾರಗಳು ಅದು Draconis ಎಂಬ ಡ್ರಾಗನ್ ನಕ್ಷತ್ರ ಎಂಬುದಾಗಿ ತೋರಿಸಿತು. ಅದು ಆಕಾಶದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿರುವುದನ್ನು ಕ್ರಿ.ಪೂ. 2170ರಲ್ಲಿ ಸೂರ್ಯನು ಸಮಭಾಜಕ ರೇಖೆಯನ್ನು ದಾಟುವ (Equinox) ಶರತ್ಕಾಲದ ಮಧ್ಯರಾತ್ರಿಯಲ್ಲಿ ಈ ಪ್ರವೇಶದಿಂದ ನೇರವಾಗಿ ನೋಡಬಹುದು. ನಂತರದಲ್ಲಿ ಆ ದಿನದಲ್ಲಿ ತನ್ನನ್ನು ಒಬ್ಬ ಖಗೋಳ ತಜ್ಞನೆಂದು ಪರಿಗಣಿಸಿಕೊಂಡು, ತನ್ನ pointerನ್ನು Draconis ಮೇಲೆ ನೆಲೆಗೊಳಿಸಿ, ಮತ್ತು ಮೇಲೆ ಹೋಗುವ ಏರುಮಾರ್ಗವನ್ನು ಅದು ದೂರದರ್ಶಕವೇನೋ ಎಂಬಂತೆ ಪರಿಗಣಿಸಿ, pointerನ್ನು ಹೋಲುವಂತೆ, ಅವರು ಯಾವ ನಕ್ಷತ್ರರಾಶಿ ಅಥವಾ ಯಾವ ಗಣ್ಯ ನಕ್ಷತ್ರವು ಅವರ ದೂರದರ್ಶಕದ ಮುಂದಿದ್ದಿರಬಹುದೆಂಬ ಲೆಕ್ಕಾಚಾರ ಮಾಡಿದರು. ಆ ರೀತಿಯಾಗಿ ತಮ್ಮ pointer ಸೂಚಿಸುವ ನಿರ್ದಿಷ್ಟ ದಿನಾಂಕವನ್ನು ಗೊತ್ತುಪಡಿಸಿದರು ಮತ್ತು ಅದು Pleiades ಆಗಿರಬೇಕೆಂದು ಕಂಡುಕೊಂಡರು. ಅಂತಹ ಅದ್ಭುತವಾದ ಒಂದು ಸಂಯೋಗವು (coincidence) ಆತನಿಗೆ ಮಹಾಪಿರಮಿಡ್‌ನ ರಚನೆಯ ದಿನಾಂಕವನ್ನು ಸೂಚಿಸುತ್ತದೆ ಎಂದು ಮನವರಿಕೆ ಮಾಡಿಕೊಂಡರು; ಏನೆಂದರೆ Draconis ಪಾಪ ಮತ್ತು ಸೈತಾನನ ಸಂಕೇತವಾಗಿರುವಂತೆ Pleiades ದೇವರನ್ನು ಮತ್ತು ವಿಶ್ವದ ಮಧ್ಯಭಾಗವನ್ನೂ ಸೂಚಿಸುತ್ತದೆ. ಮಹಾ ಪಿರಮಿಡ್ ಆ ರೀತಿಯಾಗಿ ಮಾನವ ದೃಷ್ಟಿಯ ಆಚೆ ಇರುವುದನ್ನು ಸೂಚಿಸುತ್ತದೆ ಮತ್ತು ಅದರ ಶಿಲ್ಪಿಯು ಕೇಡಿನ ಪ್ರಭುತ್ವವನ್ನು ಮತ್ತು ಮಾನವ ಜಾತಿಯ ಕೆಳಗಣ

ಕ್ರಮದ ಮೇಲೆ ಅದರ ಅಧಿಕಾರವನ್ನು ತಿಳಿದಿರುತ್ತಾನೆ ಮತ್ತು ಮಾನವ ದೃಷ್ಟಿಗೆ ಮೀರಿ ಏನಿದೆ ಎಂಬುದನ್ನು ಮತ್ತು ಮಾನವ ಕುಲದ ಏಕೈಕ ನಿರೀಕ್ಷೆಯು ಯೆಹೋವನೇ ಆಗಿದ್ದಾನೆ ಎಂಬುದನ್ನು ಮಹಾ ಪಿರಮಿಡ್ ಈ ರೀತಿಯಾಗಿ ಸೂಚಿಸುತ್ತದೆ.

ಮಹಾ ಪಿರಮಿಡ್‌ನ ನಿರ್ಮಾಣದ ದಿನಾಂಕದ ಬಗ್ಗೆ ಪ್ರೊ॥ ಸ್ಮಿತ್ ರವರ ಈ ತೀರ್ಮಾನವು ನಂತರದಲ್ಲಿ ಮಹಾ ಪಿರಮಿಡ್ ನಿರ್ಮಾಣದ ಬಗ್ಗೆ ಸೂಚಿಸುವ ಕೆಲವೊಂದು ಅಳತೆಗಳ ಮೂಲಕ ಮಹಾಪಿರಮಿಡ್ ತನ್ನ ನಿರ್ಮಾಣದ ದಿನಾಂಕವನ್ನು ತಾನೇ ಬಹಳ ಹೆಚ್ಚಾಗಿ ಸಮರ್ಥಿಸಲ್ಪಟ್ಟಿತು. ಮಹಾ ಪಿರಮಿಡ್ ವಿನ್ಯಾಸದ ಜ್ಞಾನವನ್ನು ಪ್ರದರ್ಶಿಸುವುದಾಗಿದ್ದು ಅಂಥಾಃ ಜ್ಞಾನವನ್ನು ಐಗುಪ್ತರು ಹೊಂದಿರಲಿಕ್ಕಿಲ್ಲ ಎಂಬ ಸತ್ಯದ – ಅರಿವು ದೈವಿಕ ಜ್ಞಾನವು ದೇವರ ಯಾವುದೇ ಸ್ಫೂರ್ತಿಯುತ ಸೇವಕನ ಮೇಲ್ವಿಚಾರಿಕೆಯಲ್ಲಿ ಈ ಕಾರ್ಯವು ನಡೆದಿದ್ದಿರಬಹುದು ಮತ್ತು ಮೆಲ್ಕೀಚೆದೆಕನೇ ಅದರ ನಿರ್ಮಾಣಿಕನು ಎಂಬ ಅಭಿಪ್ರಾಯಕ್ಕೆ ನಡೆಸುತ್ತದೆ, ಆತನು ಸಾಲೇಮಿನ ಅರಸನಾಗಿದ್ದನು (ಅಂದರೆ ಸಮಾಧಾನದ ರಾಜನು) ಮತ್ತು ಮಹೋನ್ನತನಾದ ದೇವರ ಯಾಜಕನಾಗಿದ್ದನು. ಮತ್ತು ಒಬ್ಬ ವ್ಯಕ್ತಿಯಾಗಿ ಮತ್ತು ಸಂಕೇತವಾಗಿ ಅಬ್ರಹಾಮನನ್ನು ಆಶೀರ್ವದಿಸುವ ಉನ್ನತ ಸ್ಥಾನದಲ್ಲಿದ್ದನು, ಅಬ್ರಹಾಮನು ಸಹಾ ಆತನಿಗೆ ದಶಮಾಂಶವನ್ನು ಅರ್ಪಿಸಿದನು (ಆದಿಕಾಂಡ 14:20). ಇದರ ಬಗ್ಗೆ ನಮಗೆ ಇನ್ನು ಹೆಚ್ಚಾಗಿ ಏನೂ ತಿಳಿಯದಿದ್ದರೂ ಇದರಿಂದ ನಮಗೆ ಮೆಲ್ಕೀಚೆದೆಕನು ಮಹಾಶಾಂತಿಯ ಅರಸನಾಗಿದ್ದನು ಮತ್ತು ಆ ದಿನಗಳಲ್ಲಿ ಆತನು ಪಿರಮಿಡ್‌ನಿಂದ ಹೆಚ್ಚು ದೂರವಲ್ಲದ ಸ್ಥಳದಲ್ಲಿ ವಾಸಿಸುತ್ತಿದ್ದನು ಎಂಬುದು ತಿಳಿದುಬರುತ್ತದೆ.


ಮೆಲ್ಕೀಚೆದೆಕನು ಒಬ್ಬ ಐಗುಪ್ತನಲ್ಲದಿದ್ದರೂ, ಪಿರಮಿಡ್ಡನ್ನು ನಿರ್ಮಿಸಲು ಐಗುಪ್ತ ಕಾರ್ಮಿಕರನ್ನು ಉಪಯೋಗಿಸಿಕೊಂಡಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ಐಗುಪ್ತದ ಚರಿತ್ರೆಗಳು ಕೆಲಮಟ್ಟಿಗೆ ಈ ವಿಚಾರಸರಣಿಯನ್ನು ಬೆಂಬಲಿಸುತ್ತದೆ. ಐಗುಪ್ತದ ಮೇಲೆ ಆ ದಿನಗಳಲ್ಲಿ ಕೆಲವು ಜನರಿಂದ ಒಂದು ವಿಚಿತ್ರವಾದ ದಾಳಿ ನಡೆಯಿತು ಮತ್ತು ಆ ಜನರ ಸಂಪ್ರದಾಯವನ್ನು ಕೇವಲ (Hyksos) (ಅಂದರೆ ಕುರುಬ ಅರಸರುಗಳು ಅಥವಾ ಶಾಂತಿರಾಜರು) ಸಂಪ್ರದಾಯವೆಂದು ಕರೆಯಲಾಗುತ್ತಿತ್ತು. ಈ ಆಕ್ರಮಣಕಾರರು ಐಗುಪ್ತದ ಸಾಮಾನ್ಯ ಸರ್ಕಾರವನ್ನು ತೊಂದರೆಪಡಿಸಲು ಪ್ರಯತ್ನಿಸಲಿಲ್ಲ. ಅವರು ಕೆಲವು ಸಮಯದವರೆಗೆ ಸಂಪ್ರದಾಯದಿಂದ ಕಂಡುಕೊಳ್ಳಲಾಗದ ಯಾವುದೋ ಉದ್ದೇಶದಿಂದ ಅಲ್ಲಿ ತಂಗಿದ್ದರು. ಆ ಉದ್ದೇಶವು ನೆರವೇರಿದ ನಂತರ ಅವರು ಬಂದಂತೆಯೇ ಶಾಂತರೀತಿಯಿಂದ ಐಗುಪ್ತದಿಂದ ಹಿಂತಿರುಗಿದರು. ಈ Hyksosಗಳು ಅಥವಾ ಶಾಂತಿಯ ಅರಸರುಗಳಲ್ಲಿ ಮೆಲ್ಕೀಚೆದೆಕನೂ ಇದ್ದಿರಬಹುದೆಂದು ಅವರು ಮಹಾ ಪಿರಮಿಡ್ಡನ್ನು – ದೇವರ ಬಲಿಪೀಠ ಮತ್ತು "ಸಾಕ್ಷ್ಯ"ವನ್ನು ಐಗುಪ್ತ ದೇಶದಲ್ಲಿ ಕಟ್ಟಿರಬಹುದೆಂದು ಊಹಿಸಲಾಗಿದೆ.

ಜೊಸೆಫಸ್ (Josephus) ಮತ್ತಿತರರು ಮನೆಥೊ (Manetho) ಎಂಬ ಐಗುಪ್ತ ಯಾಜಕನು ಮತ್ತು ಶಾಸ್ತ್ರಿಯನ್ನು ಉಲ್ಲೇಖಿಸುತ್ತಾ ಹೇಳುವುದೇನೆಂದರೆ "ನಮಗೆ ಬಹಳ ಹಿಂದೆ Timaus ಎಂಬ ರಾಜನಿದ್ದ. ಆತನ ಸಮಯದಲ್ಲಿ ದೇವತೆಯು ನಮ್ಮ ಮೇಲೆ ಅತೃಪ್ತಿಗೊಂಡಿತು. ಅದು ಹೇಗೆ ಎಂದು ನನಗೆ ತಿಳಿಯದು. ಪೂರ್ವದಿಂದ ಆಶ್ಚರ್ಯಕರವಾದ ರೀತಿಯಲ್ಲಿ ಕೆಲವು ಕೀಳುಮಟ್ಟದ ಕುಲದವರು (ಯುದ್ಧ ವೀರರುಗಳಲ್ಲ), Hyksosಗಳು ಬಂದರು. ಅವರಿಗೆ ನಮ್ಮ ದೇಶವನ್ನು ಆಕ್ರಮಣಮಾಡಿಕೊಳ್ಳುವ ಭರವಸೆ ಇತ್ತು ಮತ್ತು ಅದನ್ನು ಯಾವುದೇ ಯುದ್ಧವಿಲ್ಲದೆ ಸುಲಭವಾಗಿ ವಶಪಡಿಸಿಕೊಂಡರು. ನಮ್ಮನ್ನು ಆಳುವವರು ಅವರ ಕೈವಶರಾಗಿರುವಾಗ, ಅವರು ನಮ್ಮ ದೇವರುಗಳ ದೇವಾಲಯಗಳನ್ನು ನಾಶಪಡಿಸಿದರು.

## ಅದರ ವಿಚಿತ್ರವಾದ ಸ್ಥಳ
## Its Peculiar Location

ಮಹಾ ಪಿರಮಿಡ್ ನೈಲ್ ನದಿಯನ್ನು ವೀಕ್ಷಿಸುವಂತೆ ಒಂದು ಎತ್ತರವಾದ ಬಂಡೆಯ ಸಮತಲ ಪ್ರದೇಶದಲ್ಲಿ ಕೈರೋ ನಗರಕ್ಕೆ ಹೆಚ್ಚು ದೂರವಲ್ಲದ ಸ್ಥಳದಲ್ಲಿದೆ. ಅದರ ವಸ್ತುಸ್ಥಿತಿಯ ಬಗ್ಗೆ ಒಂದು ಮಹತ್ವವಾದ ಸಂಗತಿಯೆಂದರೆ, ನೈಲ್ ನದಿಯ ನದೀದಂಡೆಯು ಒಂದು ಕರಾವಳಿಯಂತೆ ಮಾಡುತ್ತದೆ. ಅದು ರೂಪದಲ್ಲಿ ನಿಜವಾಗಿ ನಾಲ್ಕನೆಯ ಒಂದು ಭಾಗದ ಆಕಾರದ ವೃತ್ತವಾಗಿದೆ, ಮಹಾ ಪಿರಮಿಡ್ ಅದರ ಒಳಗಣ ಕೋನವನ್ನು ಗುರುತಿಸುತ್ತದೆ.


ಕರಾವಳಿಯೊಂದಿಗಿನ ಪಿರಮಿಡ್‌ನ ಈ ಸಂಬಂಧವನ್ನು, ಸಂಯುಕ್ತ ಸಂಸ್ಥಾನದ ಕರಾವಳಿ ಸರ್ವೇಕ್ಷಣೆಯ ಮುಖ್ಯ ಹೈಡ್ರೋಗ್ರಾಫರ್ ಆಗಿದ್ದ ಮಾನ್ಯ ಹೆನ್ರಿ ಮೆಚೆಲ್ (Henry Mitchell) ಎಂಬಾತನು ಕಂಡಿಹಿಡಿದನು. ಆತನು ಸೂಯೆಜ್ ಕಾಲುವೆಯ ಪ್ರಗತಿ




**The Great Pyramid in the Center and at the Same Time at the Border of the Sector-Shaped Land of Lower Egypt**

ಮಧ್ಯ ಕೇಂದ್ರದಲ್ಲಿ ಮಹಾಪಿರಮಿಡ್ ಹಾಗೂ ಅದೇ ಕಾಲದಲ್ಲಿ ಹಾದು ಹೋಗುವ

ತ್ರಿಕೋನಾಕಾರದ ಈಜಿಪ್ಟ್‌ನ ಗಡಿಯ ತಗ್ಗು ಪ್ರದೇಶ




**Lower Egypt in the Geographical Center of the Land Surface of the Whole World ON THE EQUAL SURFACE PROJECTION**

ಇಡೀ ಭೂಮಂಡಲ ಪ್ರದೇಶದ ಮೇಲ್ಮೈನ ಭೌಗೋಳಿಕ ಕೇಂದ್ರದಲ್ಲಿರುವ

ಈಜಿಪ್ಟ್ ಕೆಳಭಾಗವು ಸಮಾನವಾಗಿ ಮುಂದೆ ಚಾಚಿರುವ ಮೇಲ್ಮೈ

ಪರಿಶೀಲನಾ ವರದಿಗಾಗಿ 1868ರಲ್ಲಿ ಐಗುಪ್ತಕ್ಕೆ ಹೋಗಿದ್ದನು. ಇಡೀ ಈಜಿಪ್ಟಿನ ಉತ್ತರ ಕರಾವಳಿಯಲ್ಲಿ ತಿರುವು (curvature) ಕ್ರಮಬದ್ಧತೆಯ ಬಗ್ಗೆ ಅವನ ಅವಲೋಕನವು ಭೌತಿಕ ಮೂಲದ ಕೆಲವು ಕೇಂದ್ರ ಬಿಂದುವು ಸೂಚಿತವಾಗಿದೆ ಎಂಬ ತೀರ್ಮಾನಕ್ಕೆ ನಡೆಸಿತು. ಈ ಭವ್ಯ ಕೇಂದ್ರವನ್ನು ಅರಸಲು ಹೊರಟಾಗ, ಅದು ಮಹಾ ಪಿರಮಿಡ್‌ನಲ್ಲಿ ಗುರುತಿಸಲ್ಪಟ್ಟಿದೆ ಎಂಬುದನ್ನು ಆತನು ಕಂಡುಕೊಂಡನು. ಇದು ಆತನು "ಆ ಸ್ಮಾರಕವು ಜನರು ನಿರ್ಮಿಸಿದ ಯಾವುದೇ ಕಟ್ಟಡಕ್ಕಿಂತಲೂ ಮಿಗಿಲಾದ ಒಂದು ಅತ್ಯಂತ ಪ್ರಮುಖವಾದ ಭೌತಿಕ ಪರಿಸ್ಥಿತಿಯಲ್ಲಿ ನಿಂತಿದೆ" ಎಂದು ಆತನು ಆಶ್ಚರ್ಯವ್ಯಕ್ತಪಡಿಸಿದನು.

ಪ್ರವೇಶ ಮಾರ್ಗದಿಂದ ಉತ್ತರಕ್ಕೆ ಎಳೆದ ಗೆರೆಯು ಐಗುಪ್ತ ಕರಾವಳಿಯ ಅತ್ಯಂತ ಉತ್ತರ ಬಿಂದುವಿನ ಮೂಲಕ ಹಾದುಹೋಗುತ್ತದೆ. ಮತ್ತು ಈಶಾನ್ಯ ಹಾಗೂ ವಾಯುವ್ಯದಲ್ಲಿನ ಮೂಲಗೆರೆಯನ್ನು ಮುಂದುವರೆದು ಎಳೆದ ಗೆರೆಗಳು ಕಡಲತೀರದ ಎರಡೂ ಪಾರ್ಶ್ವಗಳನ್ನು ಸುತ್ತುವರೆಯುತ್ತದೆ. ಈ ರೀತಿಯಲ್ಲಿ ಅದು ಕೆಳಗಣ ಐಗುಪ್ತದ ಬೀಸಣಿಗೆ ಆಕಾರವುಳ್ಳ ದೇಶವನ್ನು ಆಲಂಗಿಸಿಕೊಳ್ಳುತ್ತದೆ. (ಪುಟ 205ರಲ್ಲಿನ ಚಿತ್ರವನ್ನು ನೋಡಿರಿ) ಗೀಝಾದಿಂದ ಅತ್ಯಂತ ಉತ್ತರದಲ್ಲಿರುವ ಸಮುದ್ರ ತೀರದಲ್ಲಿರುವ ಬಂಡೆಯ ಮೇಲೆ ಕಟ್ಟಲ್ಪಟ್ಟಿದ್ದು ಮತ್ತು ಈ ಕ್ಷೇತ್ರದ ಅಥವಾ ಕೆಳಗಣ ಐಗುಪ್ತದ ತೆರೆದ ಬೀಸಣಿಗೆ ಆಕಾರದ ಮೇಲೆ ನೋಡುತ್ತಾ ಅದನ್ನು ನಿಜವಾಗಿ ಪ್ರವಾದಿಯಾದ ಯೆಶಾಯನು ವಿವರಿಸಿರುವಂತೆ ಅಲ್ಲಿನ ಗಡಿಯಲ್ಲಿದೆ ಮತ್ತು ಶಾಬ್ದಿಕವಾದ ಮಧ್ಯಭಾಗದಲ್ಲಿದೆ ಎಂದು ಹೇಳಬಹುದು. – "ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ (ಪಿರಮಿಡ್) ಇರುವುವು. ಅವು ಐಗುಪ್ತದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವುವು" (ಯೆಶಾಯ 19: 19–20). ಗಮನಿಸಲು ಅರ್ಹವಾದ ಮತ್ತೊಂದು ಸತ್ಯಸಂಗತಿಯೆಂದರೆ – ಮಹಾ ಪಿರಮಿಡ್ ಉತ್ತರ ದಕ್ಷಿಣ ಅಮೇರಿಕಾ ದೇಶಗಳು ಒಳಗೊಂಡಂತೆ ಭೌಗೋಳಿಕವಾಗಿ ಈ ಲೋಕದ ಮಧ್ಯದಲ್ಲಿರುವ ಭೂಮಿಯಲ್ಲಿದೆ ಎಂಬುದು ಅದನ್ನು ಕಟ್ಟಿದ ಶತಮಾನಗಳ ಕಾಲದವರೆಗೆ ಯಾರಿಗೂ ಗೊತ್ತಿದ್ದಿಲ್ಲ.

## ಅದರ ವೈಜ್ಞಾನಿಕ ಪಾಠಗಳು
## Its Scientific Lessons

ಮಹಾ ಪಿರಮಿಡ್ ನಮ್ಮೊಡನೆ ಮಾತನಾಡುತ್ತದೆ, ಸಂಕೇತ ಲಿಪಿಯು ಮೂಲಕವಲ್ಲ ಅಥವಾ ರೂಪರೇಖೆಗಳ ಮೂಲಕವಲ್ಲ. ಆದರೆ ಅದು ಇರುವ ಸ್ಥಳದ, ಅದರ ನಿರ್ಮಾಣದ, ಮತ್ತು ಅದರ ಅಳತೆಗಳ ಮೂಲಕವಾಗಿ. ಕಂಡು ಬಂದ ಒಂದೇ ಮೂಲ ಗುರುತುಗಳು ಮತ್ತು ಚಿತ್ರಗಳು ಅರಸನ ಕೋಣೆಯ ಮೇಲಿರುವ "ನಿರ್ಮಾಣ ಕೋಣೆ"ಯಲ್ಲಿದ್ದವು ಮತ್ತು ಪಿರಮಿಡ್‌ನ ಸೂಕ್ತ ಮಾರ್ಗಗಳಲ್ಲಿ ಮತ್ತು ಬೇರೆ ಯಾವುದಾದರೂ ಕೋಣೆಗಳಲ್ಲಿ ಏನೂ ಇರಲಿಲ್ಲ. ಮಹಾ ಪಿರಮಿಡ್‌ನ ವೈಜ್ಞಾನಿಕ ಪಾಠಗಳನ್ನು ನಾವು ಸ್ಥಳದ ಅಭಾವದಿಂದಾಗಿ ಬಿಟ್ಟುಬಿಡುತ್ತೇವೆ, ಯಾಕೆಂದರೆ ನೂರರಲ್ಲಿ ಒಬ್ಬ ಸಾಧಾರಣ ಓದುಗಾರನೂ ಅದರ ನಿರೂಪಣೆಯನ್ನು ಮೆಚ್ಚಿಕೊಳ್ಳುವಂತೆ ಅದರ ವೈಜ್ಞಾನಿಕ ಪದಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ಅವುಗಳು ನಮ್ಮ ನಿಯೋಗವಾಗಿರುವ ಸುವಾರ್ತೆಗಳನ್ನು ಪ್ರಕಟಿಸುವ ಭಾಗಗಳಾಗದೇ ಇರುವುದರಿಂದ ರುಜುವಾತುಗಳನ್ನು ಮೆಚ್ಚಿಕೊಳ್ಳುವದಿಲ್ಲ. ಆದುದರಿಂದ, ಇದು ಸಾಕಾಗುವಂತೆ, ನಾವು ಅದು ವಿಜ್ಞಾನಿಗಳಿಗೆ ಬೋಧಿಸುವಂಥ ರೀತಿಯನ್ನು ಮಾತ್ರವೇ ಸಲಹೆ ಮಾಡುತ್ತೇವೆ, ಉದಾಹರಣೆಗೆ: ನಾಲ್ಕು ಕಡೆಗಳ ತಳದ ಅಳತೆಯು ಗುಳಿಗಳ ಮಟ್ಟದಲ್ಲಿ ಸೇರಿಸಿರುವುದು ಅನೇಕ ಪಿರಮಿಡ್‌ಗಳ ಮೊಳದಷ್ಟಿದೆ, ಯಾಕೆಂದರೆ, ನಾಲ್ಕು ವರ್ಷಗಳಿಗೊಮ್ಮೆ ದಿನಾಂಕಗಳು ಇರುವಂತೆ ಅಧಿಕ ವರ್ಷದ (Leap Year) ಭಿನ್ನಾಂಕಗಳಿಗೆ, ಅಧಿಕ ತಿಂಗಳ ಭಿನ್ನಾಂಕವನ್ನೂ ಒಳಗೊಂಡಿದೆ. ಈಶಾನ್ಯ ದಿಕ್ಕಿನಿಂದ ವಾಯುವ್ಯ ದಿಕ್ಕಿನವರೆಗೆ ಮೂಲೆಯಿಂದ ಮೂಲೆಗಿನ (diagonally) ಅಳತೆಯು ಮತ್ತು ವಾಯುವ್ಯದಿಂದ ಈಶಾನ್ಯ ದಿಕ್ಕಿನ ಅಳತೆಯನ್ನು ಕೂಡಿಸಿ ವರ್ಷಗಳ ಪೂರ್ವಭಾವಿ ಆಯನಾಂಶದ (Precessional cycle) ಚಕ್ರದಲ್ಲಿರುವಂತೆ ಅನೇಕ ಅಂಗುಲಗಳನ್ನು ನೀಡುತ್ತದೆ. ಈ ಚಕ್ರವನ್ನು ಖಗೋಳ ಶಾಸ್ತ್ರಜ್ಞರು ಈಗಾಗಲೇ 25,827 ವರ್ಷಗಳು ಎಂದು ತೀರ್ಮಾನಿಸಿದ್ದಾರೆ ಮತ್ತು ಮಹಾ ಪಿರಮಿಡ್ ಅವರ ಈ ತೀರ್ಮಾನವನ್ನು ದೃಢಪಡಿಸುತ್ತದೆ. ಅದು ಹೇಳುವ ಸೂರ್ಯದ ದೂರವು ಪಿರಮಿಡ್‌ನ ಎತ್ತರ ಮತ್ತು ಕೋನದಿಂದ 91,840,270 ಮೈಲುಗಳು ಎಂದು ರುಜುವಾತಾಗಿದೆ. ಇದು ಕರಾರುವಕ್ಕಾಗಿ ಖಗೋಳ ಶಾಸ್ತ್ರಜ್ಞರು ಇತ್ತೀಚಿನ ದಿನಗಳವರೆಗೆ ಮುಟ್ಟಿದ ಸಂಖ್ಯೆಗೆ ಅನುಗುಣವಾಗಿದೆ.

ಖಗೋಳ ಶಾಸ್ತ್ರಜ್ಞರು ಇತ್ತೀಚಿನ ದಿನಗಳವರೆಗೆ ಈ ದೂರವನ್ನು ತೊಂಬತ್ತರಿಂದ ತೊಂಬತ್ತಾರು ಮಿಲಿಯನ್ ಮೈಲುಗಳೆಂದು ಲೆಕ್ಕಾಚಾರ ಮಾಡಿದ್ದರು ಮತ್ತೂ ಇತ್ತೀಚಿನ ಅವರ ಲೆಕ್ಕಾಚಾರ ಮತ್ತು ನಿರ್ಧಾರವು ತೊಂಬತ್ತೆರಡು ಮಿಲಿಯನ್ ಮೈಲುಗಳು. ಮಹಾ ಪಿರಮಿಡ್ ಸಹ ತನ್ನದೇ ಆದ ಮಾರ್ಗದಲ್ಲಿ ಭೂಮಿಯ ತೂಕ ಮತ್ತು ಅಳತೆಯ ಆಧಾರದ ಮೇಲೆ ಎಲ್ಲಾ ತೂಕ ಮತ್ತು ಅಳತೆಗಳ ಅತ್ಯಂತ ಸರಿಯಾದ ಮಾನದಂಡವನ್ನು ಸೂಚಿಸುತ್ತದೆ.

ಈ ಸಾಕ್ಷ್ಯದ ವೈಜ್ಞಾನಿಕ ಪುರಾವೆಗಳ ಮತ್ತು ಸ್ಥಳದ ಬಗ್ಗೆ ವಿಮರ್ಶಿಸುತ್ತಾ Rev Joseph Seiss, D.D. ಇವರ ಸಲಹೆ ಏನೆಂದರೆ: ಈ ಅದ್ಭುತವಾದ ರಚನೆಯಲ್ಲಿ ಇನ್ನೂ ಭವ್ಯವಾದ ಆಲೋಚನೆಗಳು ಒಳಗೊಂಡಿವೆ, ಅದರ ಐದು ಅಂಶಗಳಲ್ಲಿ ಒಂದು ವಿಶೇಷವಾಗಿ ಸರ್ವೋತ್ಕೃಷ್ಟವುಳ್ಳದ್ದಾಗಿದೆ, ಅದರಲ್ಲಿ ಅದರ ಎಲ್ಲಾ ಪಕ್ಕಗಳೂ ಮತ್ತು ಹೊರಗಣ ರೇಖೆಗಳೂ ಕೊನೆಗಾಣುತ್ತವೆ. ಅದರ ಅಗ್ರಮೂಲೆಯು ಅದರ ಗಂಭೀರವಾದ ತೋರುಬೆರಳನ್ನು ಮಧ್ಯಾಹ್ನದ ಸೂರ್ಯನ ಕಡೆಗೆ ಎತ್ತುತ್ತದೆ, ಮತ್ತು ಅದರ ತಳದಿಂದ ದೂರವು ಭೂಮಿಯಿಂದ ಸೂರ್ಯನವರೆಗಿನ ಸರಾಸರಿ ಅಂತರವನ್ನು ಹೇಳುತ್ತದೆ. ನಾವು ಪಿರಮಿಡ್ ಆ ಮಧ್ಯರಾತ್ರಿಯಲ್ಲಿ ಸೂಚಸಿದ ದಿನಾಂಕಕ್ಕೆ ಹಿಂತಿರುಗಿ ಹೋಗಿ ತೋರುಬೆರಳು ಏನನ್ನು ಸೂಚಿಸಿತೆಂದು ನೋಡುವವರಾದರೆ ನಾವು ಬಹಳ ಭವ್ಯವಾದ ಸೂಚನೆಯನ್ನು ನೋಡುತ್ತೇವೆ. ವಿಜ್ಞಾನವು ಕಡೆಗೂ ಸೂರ್ಯನು ಒಂದು ನಿಶ್ಚಲ ಕೇಂದ್ರವಲ್ಲ, ತನ್ನ ಸುತ್ತ ಸುತ್ತುವ ಗ್ರಹಗಳೊಂದಿಗೆ ಅದು ತನ್ನ ಕಕ್ಷೆಯಲ್ಲಿ ಚಲಿಸುತ್ತದೆ ಎಂಬುದಾಗಿ ಕಂಡುಹಿಡಿದಿದೆ. ಆದರೆ ಈಗ ಸೂರ್ಯನು ಸಹ ಚಲಿಸುತ್ತಾನೆ ಮತ್ತು ತನ್ನೊಡನೆ ಧೂಮಕೇತುಗಳು, ಗ್ರಹಗಳು, ಅದರ ಉಪಗ್ರಹಗಳು, ಮತ್ತು ಮತ್ತೊಂದು ಮತ್ತು ಅತಿ ವಿಶಾಲವಾದ ಹೆಚ್ಚು ಬಲವುಳ್ಳ ಕೇಂದ್ರದೊಡನೆ ಉಜ್ವಲವಾದ ಪರಿವಾರವನ್ನು ಸಾಗಿಸುತ್ತದೆ ಎಂಬುದು ದೃಢಪಟ್ಟಿದೆ. ಖಗೋಳ ಶಾಸ್ತ್ರಜ್ಞನು ಆ ಕೇಂದ್ರವು ಯಾವುದು ಮತ್ತು ಎಲ್ಲಿದೆ ಎಂಬುದರ ಬಗ್ಗೆ ಇನ್ನೂ ಒಮ್ಮತ ವ್ಯಕ್ತಪಡಿಸಿಲ್ಲ. ಕೆಲವರು ಹೇಗೂ ತಾವು ಅದರ ದಿಕ್ಕು ಸಪ್ತರ್ಷಿ (Pleiades) ಮತ್ತು ವಿಶಿಷ್ಟವಾಗಿ ಸಪ್ತರ್ಷಿ ಸಮೂಹ (Pleiadic) ನಕ್ಷತ್ರಗಳ ಮಧ್ಯದಲ್ಲಿರುವ (Alcyone) ಎಂದು ನಂಬಿದ್ದಾರೆ. ಪ್ರಸಿದ್ಧ ಜರ್ಮನ್ ಖಗೋಳ ಶಾಸ್ತ್ರಜ್ಞನಾದ ಪ್ರೊ॥ J. H. Mardlar ಎಂಬಾತನು ಈ ಅನ್ವೇಷಣೆಯನ್ನು ಮಾಡಿದ ಗೌರವಕ್ಕೆ ಪಾತ್ರನಾಗಿದ್ದಾನೆ. ಹಾಗಾದರೆ, Alcyone ವಿಜ್ಞಾನವು ಗ್ರಹಿಸುವಂತೆ "ಮಧ್ಯರಾತ್ರಿಯ ಸಿಂಹಾಸನ"ವಾಗಿ ಕಂಡುಬರುತ್ತಿದೆ. ಅದರಲ್ಲಿ ಸಂಪೂರ್ಣ ವ್ಯವಸ್ಥೆಯ ಗುರುತ್ವಾಕರ್ಷಣೆಯು ತನ್ನ ಕೇಂದ್ರೀಯ ಸ್ಥಾನವನ್ನು ಹೊಂದಿದ ಮತ್ತು ಅಲ್ಲಿಂದ ಸರ್ವಶಕ್ತನು ತನ್ನ ವಿಶ್ವವನ್ನು ಪಾಲಿಸುತ್ತಾನೆ. ಇಲ್ಲಿ ಒಂದು ಅದ್ಭುತವೂ ಅನುಗುಣವೂ ಆದ ಸತ್ಯಸಂಗತಿ ಏನೆಂದರೆ, ಮಹಾ ಪಿರಮಿಡ್‌ನ ನಿರ್ಮಾಣದ ದಿನಾಂಕದಲ್ಲಿ, ಶರದೃತುವಿನ ಸೂರ್ಯ ಸಮಭಾಜಕ ಕಾಲದಲ್ಲಿ, ಅನೇಕ ದೇಶಗಳ ಸಂಪ್ರದಾಯವಾಗಿ ಅದು ನೂತನ ವರ್ಷದ ಆರಂಭ* ಎಂಬುದಾಗಿ ಕಾಪಾಡಲ್ಪಟ್ಟಿದೆ. ಸಪ್ತರ್ಷಿ ಮಂಡಲ (Pleiades) ಪಿರಮಿಡ್‌ನ ಮಧ್ಯರೇಖೆಯ ಭಾಗದಲ್ಲಿ Alcyone (n Touru) ಖಂಡಿತವಾಗಿ ರೇಖೆಯ ಮೇಲಿದ್ದು ವಿತರಿಸಲ್ಪಟ್ಟಿದೆ. ಹಾಗಾದರೆ ಇಲ್ಲಿ, ಕೇವಲ ಮಾನವ ವಿಜ್ಞಾನವು ಸುಳಿವು ನೀಡುವಷ್ಟು ಸಮರ್ಥವಾಗಿಲ್ಲ ಮತ್ತು ಅದು ದೇವರ ಮಾತುಗಳಿಗೆ ಯೋಬನು ಸಪ್ತರ್ಷಿ ಮಂಡಲದ (Pleaides) ಸಿಹಿ ಪ್ರಭಾವವನ್ನು ನೀನು ಬಂಧಿಸಬಾರದೇಕೆ? ಎಂಬ ಪ್ರಶ್ನೆಗೆ ಸಂದೇಹರಹಿತ ಮತ್ತು ಪ್ರಬಲವಾದ ಅರ್ಥವು ಉಸುರುವಂತೆ ತೋರುತ್ತದೆ,

## ವಿಮೋಚನಾ ಯೋಜನೆಯ ಸಂಬಂಧವಾಗಿ ಅದರ ಸಾಕ್ಷ್ಯ

## Its Testimony Relating to the Plan of Redemption

ಮಹಾ ಪಿರಮಿಡ್‌ನ ಬೋಧನೆಗಳ ಪ್ರತಿಯೊಂದು ಲಕ್ಷಣವೂ ಮುಖ್ಯವಾದುದು ಮತ್ತು ಚಿತ್ತಾಕರ್ಷಕ ವುಳ್ಳದ್ದೂ ಆಗಿದೆ. ಅದರ ಸದ್ದಿಲ್ಲ ಆದರೂ ಅವರ ಸ್ಪಷ್ಟ ವಾಚಾಳಿತನದಿಂದ ದೇವರ ಯೋಜನೆಯು ಯುಗಾಂತರಗಳ ಯೋಜನೆಗಳ ಸ್ಪಷ್ಟವಾದ ಸೂಚನೆಗಳಲ್ಲಿ ನಮ್ಮ ಭಾರಿ ಆಸಕ್ತಿಯು ಕೇಂದ್ರೀಕೃತವಾಗಿದೆ. ನಾವು ಸತ್ಯವೇದದಲ್ಲಿ ದೇವರ ಯೋಜನೆಯನ್ನು ಮೊದಲೇ ಕಂಡುಕೊಳ್ಳದೇ ಇದ್ದರೆ ಅದರಲ್ಲಿ ವಿವರಿಸಿರುವಂತೆ ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಅದು ಅಲ್ಲಿ ವರ್ಣಿಸಿರುವುದನ್ನು ನೋಡಿ, ಅದರ ಸ್ಥೂಲ ವಿವರಣೆಯನ್ನು ಪುನಃ ಇಲ್ಲಿ ಸುಂದರವಾಗಿ

* ಯೆಹೂದ್ಯ ನಾಗರೀಕ ವರ್ಷವು ಸತ್ಯವೇದ ಅಧ್ಯಯನದ ಎರಡನೇ ಸಂಪುಟದಲ್ಲಿ ಹೇಳಿರುವಂತೆ ಪ್ರಾಯಶ್ಚಿತ್ತ ಸಂಧಾನ ದಿನದ ಹತ್ತು ದಿನಗಳ ಮುಂಚಿತವಾಗಿ ಪ್ರಾರಂಭ

ನೋಡುವುದು ನಮ್ಮ ನಂಬಿಕೆಯನ್ನು ಬಲಪಡಿಸುತ್ತದೆ. ಮತ್ತು ಇನ್ನೂ ಮುಂದೆ ಗಮನಿಸಿದರೆ, ಪ್ರಕೃತಿಯ ಸ್ವಭಾವದ ಸತ್ಯ ಮತ್ತು ಪ್ರಕಟನೆಯ ಸತ್ಯ ಇವೆರಡನ್ನೂ ಒಬ್ಬನೇ ಆದ ಮಹಾರಕ್ಷಕನು ಈ ಅದ್ಭುತವಾದ ಕಲ್ಲಿನ 'ಸಾಕ್ಷ್ಯದಲ್ಲಿ' ತನ್ನದಾಗಿ ಮಾಡಿಕೊಂಡು ಸಾಕ್ಷಿ ಹೇಳುತ್ತಾನೆ.

ಅದರ ಬೋಧನೆಯ ಈ ಅಂಶದಲ್ಲಿ, ಹೊರಗಿನಿಂದ ನೋಡಿದರೆ ಗ್ರೇಟ್ ಪಿರಮಿಡ್, ದೇವರ ಯೋಜನೆಯನ್ನು ಪೂರ್ಣಗೊಳಿಸುವುದನ್ನು ಪ್ರತಿನಿಧಿಸುವ ಸುಂದರವಾದ ಮಹತ್ವವನ್ನು ಹೊಂದಿದೆ, ಏಕೆಂದರೆ ಅದು ಸಹಸ್ರಮಾನದ ಕೊನೆಯಲ್ಲಿರುತ್ತದೆ. ಮುಕುಟ ಲಕ್ಷಣವು ಕ್ರಿಸ್ತನಾಗಿದ್ದಾನೆ, ಆತನು ಎಲ್ಲವುಗಳ ಮೇಲೆ ಅಂಗೀಕೃತ ಮುಖ್ಯಸ್ಥನಾಗಿದ್ದಾನೆ. ಮತ್ತು ಪರಸ್ಪರ ಕಲ್ಲುಗಳೂ ಭವ್ಯ ಕಟ್ಟಡಕ್ಕೆ ಜೋಡಿಸಲ್ಪಟ್ಟಿದೆ ಮತ್ತು ಅವು ಸಂಪೂರ್ಣವೂ, ಸಮರ್ಪಕವಾದವುಗಳೂ ಆಗಿವೆ. ಎಲ್ಲಾ ಉಳಿಯ ಕೆತ್ತನೆಗಳೂ, ಹೊಳಪಿಸುವಿಕೆಯೂ, ಮತ್ತು ಜೋಡಿಸುವ ಪ್ರಕ್ರಿಯೆಯು ಆಗ ಪೂರ್ಣಗೊಂಡಿರುತ್ತದೆ. ಎಲ್ಲವನ್ನೂ ಕಟ್ಟಿ ಒಟ್ಟಾಗಿ ಪರಸ್ಪರವಾಗಿ ಮತ್ತು ಪ್ರೀತಿಯಿಂದ ಶಿರಸ್ಸಿಗೆ ಕೂಡಿಸಲಾಗುವುದು. ಮಹಾ ಪಿರಮಿಡ್ ಸಮಗ್ರವಾಗಿ ದೇವರ ಯೋಜನೆಯ ಸಂಪೂರ್ಣತೆಯನ್ನು ಪ್ರತಿನಿಧಿಸುವುದಾದರೆ, ಅದರ ಮೇಲಿನ ಮೂಲೆ ಕಲ್ಲು ಕ್ರಿಸ್ತನನ್ನು ಪ್ರತಿನಿಧಿಸಬೇಕು. ಆತನನ್ನು ದೇವರು ಎಲ್ಲವುಗಳ ಮುಖ್ಯಸ್ಥನಾಗುವಂತೆ ಉನ್ನತ ಸ್ಥಿತಿಗೆ ಏರಿಸಿದ್ದಾನೆ. ಅದು ಸಂಕೇತಿಸಿದಂತೆಯೇ ಕ್ರಿಸ್ತನನ್ನು ಪ್ರತಿನಿಧಿಸುತ್ತದೆ ಎಂದು ಕ್ರಿಸ್ತನ* ಸಂಕೇತವಾಗಿ ಅದರ ಔಚಿತ್ಯತೆಯ ಕಾರಣದಿಂದ ಮಾತ್ರವಲ್ಲದೆ ಪ್ರವಾದಿಗಳು ಮತ್ತು ಅಪೊಸ್ತಲರು ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ಆ ಚಿಹ್ನೆಯ ಬಗ್ಗೆ ಹಲವಾರು ಉಲ್ಲೇಖಗಳಿಂದಲೂ ಸಹಾ ಸಂಕೇತಿಸುತ್ತದೆ.

ಯೆಶಾಯ 28:16 ಕ್ರಿಸ್ತನನ್ನು "ಅಮೂಲ್ಯವಾದ ಮೂಲೆಗಲ್ಲು" ಎಂದು ಸೂಚಿಸುತ್ತದೆ. ಜೆಕರ್ಯ 4:7ರಲ್ಲಿ ಅದು ಸಂಪೂರ್ಣಗೊಂಡ ಸೌಧದ ಮೇಲೆ ಇರುವುದನ್ನು ಸೂಚಿಸುತ್ತಾ ಉಲ್ಲಾಸದೊಡನೆ "ಆತನು ಕಲಶದ ಕಲ್ಲನ್ನು ಕೋಲಾಹಲದೊಡನೆ ಮೆರವಣಿಗೆ ಮಾಡುವನು; ಇದರ ಮೇಲೆ ದೇವರ ದಯೆ ಇರಲಿ, ದಯೆ ಇರಲಿ ಎಂಬ ಜಯಘೋಷವಾಗುವುದು" ಎಂದು ಹೇಳಿದ್ದಾನೆ. ಮಹಾ ಪಿರಮಿಡ್‌ನ ಮುಖ್ಯ (ಕಲಶದ) ಕಲ್ಲನ್ನು ಅಲ್ಲಿ ಇಟ್ಟಾಗ, ನಿರ್ಮಾಣಿಕರಲ್ಲಿ ಮತ್ತು ಅದರಲ್ಲಿ ಆಸಕ್ತರಿಗೆ ಬಹಳ ಸಂತೋಷವುಂಟಾಯಿತು ಮತ್ತು ಅವರೆಲ್ಲರೂ ಕಾರ್ಯದ ಮುಕ್ತಾಯದ ಈ ಕಿರೀಟಧಾರಣಾ ಸಮನಾದ ಲಕ್ಷಣವನ್ನು ನೋಡುವುದರಲ್ಲಿ ಬಲು ಅಸಕ್ತರಾಗಿದ್ದರು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಯೋಬನು ಸಹ 38:6,7ರಲ್ಲಿ ಈ ಮುಖ್ಯವಾದ ಮೂಲೆಗಲ್ಲನ್ನು ಇಡುವಾಗ ಉಂಟಾದ ಆನಂದಘೋಷದ ಬಗ್ಗೆ ಮಾತನಾಡುತ್ತಾನೆ. ಮತ್ತು ಆತನು ಶಿರಸ್ಸನ್ನು ಅಥವಾ ಕಿರೀಟಪ್ರಾಯವಾದ ಮೂಲೆಗಲ್ಲನ್ನು (ಕಲಶದ ಕಲ್ಲನ್ನು) ಉಳಿದ ನಾಲ್ಕು ಮೂಲೆಗಲ್ಲುಗಳ ಬಗ್ಗೆ ಮೊದಲು ಹೇಳುವುದರ ಮೂಲಕ ವಿಶೇಷಿಸುತ್ತಾ – "ಮುಂಜಾನೆ ನಕ್ಷತ್ರಗಳು ಒಟ್ಟಾಗಿ ಉತ್ಸಾಹ ಧ್ವನಿ ಎತ್ತುತ್ತಾ ದೇವಕುಮಾರರೆಲ್ಲರೂ ಆನಂದಘೋಷ ಮಾಡುತ್ತಾ ಇರಲು, ಭೂಲೋಕದ ಸುಣ್ಣಪಾದವು ಯಾವುದರಲ್ಲಿ ನೆಲೆಗೊಂಡವು? ಅದರ ಮೂಲೆಗಲ್ಲನ್ನು ಹಾಕಿದವರು ಯಾರು?" ಎಂದು ಕೇಳುತ್ತಾನೆ. (ಬದಿಯಲ್ಲಿರುವ ಮಾತುಗಳನ್ನೂ ನೋಡಿರಿ). ಪ್ರವಾದಿಯಾದ ದಾವೀದನು ಸಹಾ ನಮ್ಮ ಕರ್ತನನ್ನು ಸೂಚಿಸುತ್ತಾನೆ – ಐಗುಪ್ತದ "ಸಾಕ್ಷಿ" ಮತ್ತು; ಈ ಸಾಕ್ಷಿಯ ಬಗ್ಗೆ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು "ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು. ಇದು ಯೆಹೋವನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ, ಈ ದಿನವು (ಈ ಲೋಕದ ಶಿರಸ್ಸೂ ಮತ್ತು ಆಳುವಾತನೂ ಆಗಿರುವ ಕ್ರಿಸ್ತನ ಸಹಸ್ರಮಾನದ ದಿನವು) ಯೆಹೋವನಿಂದಲೇ ನೇಮಕವಾದದ್ದು; ಇದರಲ್ಲಿ ನಾವು ಉಲ್ಲಾಸದಿಂದ ಆನಂದಿಸೋಣ" (ಕೀರ್ತನೆ 118; 22–24) ಎಂಬ ಅನುಗುಣವಾದ ಮಾತುಗಳನ್ನು ಹೇಳುತ್ತಾನೆ. ಶಾರೀರಿಕ ಇಸ್ರಾಯೇಲ್ಯರು ಕ್ರಿಸ್ತನನ್ನು ತಮ್ಮ ಮುಖ್ಯವಾದ ಮೂಲೆಗಲ್ಲನ್ನಾಗಿ ಮಾಡಿಕೊಳ್ಳುವಲ್ಲಿ ವಿಫಲರಾದರು. ಹೀಗಾಗಿ ಅವರು ದೇವರ ವಿಶೇಷ ಮನೆಯವರಾಗುವುದರಿಂದ ತಿರಸ್ಕೃತರಾದರು – ಇದಕ್ಕೆ ಬದಲಾಗಿ ಆತ್ಮೀಕ ಇಸ್ರಾಯೇಲ್ಯರು ಕ್ರಿಸ್ತನನ್ನು ತಮ್ಮ ಶಿರಸ್ಸನ್ನಾಗಿ ಮಾಡಿಕೊಂಡರು ನಮ್ಮ ಕರ್ತನು ಈ ಪ್ರವಾದನೆಯನ್ನು ತನಗೆ ಅನ್ವಯಮಾಡಿಕೊಂಡದ್ದನ್ನು ಮತ್ತು ತಾನು ಆ ತಿರಸ್ಕೃತ ಕಲ್ಲಾಗಿದ್ದೇನೆ ಎಂಬುದನ್ನು ಅದನ್ನು ತಿರಸ್ಕರಿಸಿದ ಶಾಸ್ತ್ರಿ ಫರಿಸಾಯರಿಗೆ ತೋರಿಸಿಕೊಟ್ಟದ್ದನ್ನು ನಾವು ನೆನಪಿಸುತ್ತೇವೆ (ಮತ್ತಾಯ 21:42, 44; ಅ.ಕೃ 4:11).

---

* ಸಂಪುಟ 1, ಅಧ್ಯಾಯ 5 ನೋಡಿರಿ ಮತ್ತು 1ನೇ ಸಂಪುಟದ Chart of ages ನಕ್ಷೆಯಲ್ಲಿನ x, y, z, W ಇವುಗಳನ್ನೂ ಸಹ ನೋಡಿರಿ.

ಇವೆಲ್ಲವನ್ನೂ ಮಹಾ ಪಿರಮಿಡ್‌ನ ಮುಖ್ಯವಾದ (ಕಲಶದ) ಕಲ್ಲು ಸಮರ್ಪಕವಾದ ರೀತಿಯಲ್ಲಿ ನಿರೂಪಿಸುತ್ತದೆ ಅಲ್ಲವೇ! ಮುಖ್ಯವಾದ ಕಲ್ಲು ಮೊದಲಿಗೆ ಮುಗಿಯಲ್ಪಟ್ಟಿದ್ದು ಕೆಲಸಗಾರರಿಗೆ ಸಮಗ್ರ ರಚನೆಯ ಆದರ್ಶವಾಗಿಯೂ, ಮಾದರಿಯಾಗಿಯೂ ಇದೆ. ಮತ್ತು ಅದರ ಮೂಲೆಗಳು ಮತ್ತು ಅನುಪಾತಗಳು ಅದಕ್ಕೆ ಒಗ್ಗಿಕೊಳ್ಳುತ್ತದೆ. ಆದರೆ ನಾವು ಸಿದ್ಧವಾಗಿ ಊಹಿಸಬಹುದಾದುದೆಂದರೆ, ಈ ಮೇಲಿನ ಕಲ್ಲು ಸಮಗ್ರ ರಚನೆಯ ಆದರ್ಶವಾಗಿ ಗ್ರಹಿಸಲ್ಪಡುವ ಮೊದಲು ಅದು ನಿರಾಕರಿಸಲ್ಪಡುತ್ತದೆ, ಕಟ್ಟಡ ನಿರ್ಮಾಪಕರುಗಳಿಂದ ಅಲಕ್ಷಿಸಲ್ಪಡುತ್ತದೆ, ಅವರಲ್ಲಿ ಕೆಲವರು ಅದಕ್ಕೆ ಯಾವುದೇ ಸ್ಥಳವಿಲ್ಲವೆಂದು ಆಲೋಚಿಸಿದರು. ಅದರ ಐದು ಪಕ್ಕಗಳು, ಐದು ಮೂಲೆಗಳು ಮತ್ತು ಹದಿನಾರು ವಿವಿಧ ಕೋನಗಳು ಮೇಲಿನ ಕಲ್ಲಿನ ಅಗತ್ಯ ಬೀಳುವವರೆಗೆ ರಚಿಸಲು ಸೂಕ್ತವಾಗಿರಲಿಲ್ಲ, ಮತ್ತು ಬೇರೆ ಯಾವುದೇ ಕಲ್ಲೂ ಅದನ್ನು ಮಾಡಲಾಗದು. ಕಟ್ಟಡದ ಕಾರ್ಯವು ಪ್ರಗತಿಯಲ್ಲಿರುವ ಎಲ್ಲಾ ವರ್ಷಗಳಲ್ಲಿ ಮುಖ್ಯವಾದ ಮೂಲೆಗಲ್ಲು ಅದರ ಉಪಯೋಗ ಮತ್ತು ಸ್ಥಳದ ಬಗ್ಗೆ ಪರಿಚಯ ಇಲ್ಲದವರಿಗೆ ಕ್ರಿಸ್ತನಿರುವಂತೆ "ಎಡವುವ ಕಲ್ಲೂ" ಮತ್ತು "ಅಪರಾಧದ ಬಂಡೆಯೂ" ಆಗಿರುತ್ತದೆ ಮತ್ತು ಅನೇಕರಿಗೆ ಅವರು ಅದು ದೇವರ ಯೋಜನೆಯಂತೆ ಮೂಲೆಗಲ್ಲಾಗಿ ಉನ್ನತಿಗೆ ಏರಿಸಲ್ಪಡುವವರೆಗೆ ಹಾಗೆಯೇ ಮುಂದುವರೆಯುತ್ತದೆ.

ಪಿರಮಿಡ್‌ನ ಚಿತ್ರಣವು ಸಮರ್ಪಕತೆ ಮತ್ತು ಸರ್ವ ಸಂಪೂರ್ಣತೆಯನ್ನು ಪ್ರತಿನಿಧಿಸುತ್ತದೆ ಮತ್ತು ನಮ್ಮೊಡನೆ ದೇವರ ಯೋಜನೆಯ ಸಂಕೇತದೊಡನೆ ಮಾತನಾಡುತ್ತದೆ ಮತ್ತು "ಕಾಲವು ಪರಿಪೂರ್ಣವಾದಾಗ, ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿ ಕೊಂಡಿದ್ದನು. ಅದೇನೆಂದರೆ ಭೂಪರಲೋಕದಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ". ಒಂದು ಹೊಂದಾಣಿಕೆಯುಳ್ಳ ಕುಟುಂಬವಾಗಿ, ಅನೇಕ ತರಗತಿಗಳ ಜೀವಿಗಳಾದವರು – ಹೊಂದಾಣಿಕೆ ಯಾಗದವರು ಇಲ್ಲದಂತಾಗುವರು (ಎಫೆಸ 1:10; 2: 20–22.–Diaglott).

## ಮಹಾ ಪಿರಮಿಡ್ಡಿನ ಒಳಗಣ ನಿರ್ಮಾಣವು ವಿಮೋಚನೆ ಯೋಜನೆಯ ರೂಪರೇಖೆಯಾಗಿದೆ

## How the Internal Construction of the Great Pyramid Outlines the Plan of Redemption

ಈ ಮಹಾ ರಚನೆಯ ಹೊರಗಣ ಸಾಕ್ಷ್ಯವು ಈ ರೀತಿಯಲ್ಲಿ ಸಂಪೂರ್ಣವಾಗುವಾಗ, ಮತ್ತು ದೇವರ ಲಿಖಿತ ಪ್ರಕಟನೆಯ ಪ್ರಕಾರ, ಅದರ ಒಳಗಣ ನಿರ್ಮಾಣವು ಇನ್ನೂ ಹೆಚ್ಚು ಅದ್ಭುತವಾಗಿದೆ. ಅದರ ಹೊರಗಣ ರೂಪವು ದೇವರ ವಿಮೋಚನೆಯ (See Chart of Ages in Vol. I) ಸಂಪೂರ್ಣ ಯೋಜನೆಯನ್ನು ವಿವರಿಸುವಾಗ, ಅದರ ಒಳಗಣ ನಿರ್ಮಾಣವು ಆ ಯೋಜನೆಯ ಪ್ರತಿಯೊಂದು ಪ್ರಮುಖ ಲಕ್ಷಣಗಳನ್ನು ಅದು ಯುಗದಿಂದ ಯುಗಕ್ಕೆ ಅದರ ಭವ್ಯವಾದ ಮತ್ತು ಸಂಪೂರ್ಣವಾದ ನೆರವೇರಿಕೆಯ ತನಕ ಅಭಿವೃದ್ಧಿ ಹೊಂದಿಕೊಂಡಂತೆ ಗುರುತಿಸುತ್ತದೆ ಮತ್ತು ವಿವರಿಸುತ್ತದೆ. ಇಲ್ಲಿ ವಿವಿಧ ಮಟ್ಟದಲ್ಲಿರುವ ಅಥವಾ ಸಮತಲದಲ್ಲಿರುವ ಕಲ್ಲುಗಳು ನಮ್ಮ ಶಿರಸ್ಸಾಗಿರುವ ಕ್ರಿಸ್ತನ ಅಧೀನದಲ್ಲಿದ್ದುಕೊಂಡು, ದೇವರ ಪರಿಪೂರ್ಣ ಚಿತ್ತಕ್ಕೆ ಅನುಗುಣವಾಗಿರುವುದನ್ನು ಪ್ರತಿನಿಧಿಸುತ್ತದೆ ಎಂಬುದನ್ನು ನಾವೀಗಾಗಲೇ ಪರಿಶುದ್ಧ ಗ್ರಂಥದ ಸಾಕ್ಷ್ಯದಲ್ಲಿ ಕಂಡುಕೊಂಡಿದ್ದೇವೆ. ಕೆಲವರು ಮಾನವ ಸಮತಲದಲ್ಲಿ ಸಮರ್ಪಕತೆ ಹೊಂದಿಕೊಂಡರೆ, ಮತ್ತೆ ಕೆಲವರು ಆತ್ಮೀಕ, ದೈವಿಕ ಮತ್ತು ಸ್ವಾಭಾವಿಕ ಸಮತಲದಲ್ಲಿ ಸಮರ್ಪಕತೆ ಹೊಂದಿಕೊಳ್ಳುತ್ತಾರೆ. ಹೀಗಾಗಿ ಅರಸನ ಕೊಠಡಿಯ ನೆಲವನ್ನು ಕಲ್ಲಿನ ಕೆಲಸದ ಐವತ್ತನೆಯ ಪಥವೆಂದೂ, ರಾಣಿಯ ಕೊಠಡಿಯು ಇಪ್ಪತ್ತನೆಯ ಪಥವೆಂದೂ ಮತ್ತು ಮೊದಲನೆಯ ಏರುಮಾರ್ಗದ ಕೆಳಗಣ ಅಂತ್ಯವು, ಬೆಣೆಯಿಂದ (ಪ್ಲಗ್) ವಿಸ್ತರಿಸಿದ್ದಾದರೆ ಈಗ ತೋರಿಸುವಂತೆ ಪಿರಮಿಡ್‌ನ ತಳದ ಸಾಲನ್ನು ಮುಟ್ಟುತ್ತದೆ. ಹೀಗಾಗಿ ಅದರ ತಳದ ಸಾಲಿನಿಂದ ಪಿರಮಿಡ್‌ನ ಮೇಲ್ಭಾಗವು ಎಲ್ಲಾ ಮಾನವರಿಗಾಗಿ ಒದಗಿಸಿರುವ ದೇವರ ರಕ್ಷಣಾ ಯೋಜನೆಯ ಅಥವಾ ಪಾಪ ಮತ್ತು ಮರಣದಿಂದ ಮೇಲಕ್ಕೆತ್ತುವ ಸಂಕೇತವಾಗಿ ನಿಂತುಕೊಂಡಿರುವಂತೆ ತೋರುತ್ತದೆ, ತಳದ ಸಾಲು ಈ ರೀತಿಯಲ್ಲಿ ಸಾಂಕೇತಿಕ ಇಸ್ರಾಯೇಲ್ಯರಿಗೆ ದೇವರ ವಾಗ್ದಾನದ ದಿನಾಂಕವನ್ನು ದೃಢೀಕರಿಸುವ ದಿನಕ್ಕೆ, ಮೇಲೆಕ್ಕೆತ್ತುವ ಅಥವ ರಕ್ಷಿಸುವ ಪ್ರಕ್ರಿಯೆಗೆ ಅನುಗುಣವಾಗಿದೆ.


ಮುಂದಿನ ಚಿತ್ರದ ಮೂಲಕ ಈ ಅದ್ಭುತ ರಚನೆಯು ಒಳಗಣ ವ್ಯವಸ್ಥೆಯನ್ನು ತೋರಿಸುವುದಾಗಿದ್ದು ಅದರ ಜಾಗರೂಕ ಅಧ್ಯಯನವನ್ನು ಮಾಡುವಂತೆ ಸಲಹೆ ನೀಡಲಾಗಿದೆ. ಮಹಾ ಪಿರಮಿಡ್‌ಗೆ ಒಂದೇ ಒಂದು ಪ್ರವೇಶ ಹಾದಿಯಿದೆ. ಆ ಹಾದಿಯು ಕ್ರಮಬದ್ಧವಾದುದು. ಆದರೆ ಬಹಳ ತಗ್ಗಾಗಿಯೂ ಮತ್ತು ಇಳುಕಲಾಗಿಯೂ

ಇರುವುದು. ಇದು ಕಲ್ಲಿನಿಂದ ಕತ್ತರಿಸಲ್ಪಟ್ಟ ಒಂದು ಸಣ್ಣ ಕೋಣೆಗೆ ಅಥವಾ "ಭೂಗರ್ಭ ಕೊಠಡಿಗೆ" ನಡಿಸುವುದು. ಈ ಕೋಣೆಯು ವಿಚಿತ್ರವಾಗಿ ನಿರ್ಮಾಣಗೊಂಡಿದೆ. ಅದರ ಚಾವಣಿ ಬಲಿಷ್ಠವಾಗಿ ಸಿದ್ಧಪಡಿಸಲ್ಪಟ್ಟಿದೆ. ಆದರೆ ಪಕ್ಕಗಳು ಮಾತ್ರ ಆರಂಭಗೊಂಡು ತಳವು ಬಹಳ ಒರಟಾಗಿದೆ ಮತ್ತು ಪೂರ್ಣಗೊಂಡಿಲ್ಲ. ಇದು ಕೆಲವರ ಮನಸ್ಸುಗಳಿಗೆ, "ತಳವಿಲ್ಲದ ಗುಂಡಿಯು" ಅಭಿಪ್ರಾಯವನ್ನು ಸೂಚಿಸುತ್ತದೆ. ಈ ವಚನವನ್ನು ಪವಿತ್ರ ಗ್ರಂಥಗಳಲ್ಲಿ ವಿಪತ್ತು, ವಿಸ್ಮೃತಿ ಮತ್ತು ನಾಶನವನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ. ಈ ಪ್ರವೇಶ ದ್ವಾರವು ಪ್ರಸ್ತುತ ಮಾನವ ಜಾತಿಯ ಕೆಳಗಣ ಮಾರ್ಗವನ್ನು ಪ್ರತಿನಿಧಿಸುತ್ತದೆ. – ಅದೇ ಸಮಯದಲ್ಲಿ ಈ "ಭೂಗರ್ಭ ಕೊಠಡಿಯು" ತನ್ನ ವಿಚಿತ್ರ ರಚನೆಯ ದೆಸೆಯಿಂದ ಮಹಾವಿಪತ್ತನ್ನು, ತೊಂದರೆಯನ್ನು ಮತ್ತು ನಾಶನವನ್ನು "ಪಾಪದ ಸಂಬಳ"ವನ್ನು ಸ್ಪಷ್ಟಗೊಳಿಸುತ್ತದೆ. ಅದಕ್ಕೆ ಈ ಕೆಳಗಣಗಳ ಪಥವು ನಡೆಸುತ್ತದೆ.

"ಮೊದಲನೆಯ ಆರೋಹಣ ಮಾರ್ಗವು" ತನ್ನ ಅಳತೆಯಲ್ಲಿ "ಪ್ರವೇಶ ದ್ವಾರ"ದಷ್ಟೇ ಇರುವುದಾಗಿದ್ದು ಅದರಿಂದ ಕವಲೊಡೆಯುವುದು. ಅದು ಸಣ್ಣದಾಗಿದ್ದು, ತಗ್ಗಾಗಿದ್ದು ಏರಲು ಕಷ್ಟಕರವಾಗಿದೆ, ಆದರೆ ಅದರ ಮೇಲಿನ ತುದಿಯಲ್ಲಿ ದೊಡ್ಡದೂ, ಮನೋಹರವೂ ಆದ ಪ್ರವೇಶಾಂಗಣಕ್ಕೆ (ಹಜಾರ) ತೆರೆದುಕೊಳ್ಳುತ್ತದೆ ಮತ್ತು ಅದನ್ನು "ಗ್ರ್ಯಾಂಡ್ ಗ್ಯಾಲರಿ ಅಥವಾ ಮಹಾ ಕೈಸಾಲೆ" (Grand Gallery) ಎಂಬುದಾಗಿ ಕರೆಯುತ್ತಾರೆ. ಅದರ ಚಾವಣಿ ಅದಕ್ಕೆ ನಡೆಸುವ ಮಾರ್ಗದ ಏಳರಷ್ಟಿರುತ್ತದೆ. "ಕೆಳಗಣ ಏರು ಮಾರ್ಗ"ವು ನ್ಯಾಯಪ್ರಮಾಣವನ್ನು ಪ್ರತಿನಿಧಿಸುತ್ತದೆಂದು ಭಾವಿಸಲಾಗಿದೆ ಮತ್ತು ಇಸ್ರಾಯೇಲ್ ಒಂದು ದೇಶವಾಗಿ, ಐಗುಪ್ತದಿಂದ ಹೊರಗೆ ಹೋಗುವದನ್ನು ಪ್ರತಿನಿಧಿಸುತ್ತದೆ. ಅಲ್ಲಿಂದ ಅವರು ದೇವರ ನೀತಿ ನಿಯಮಗಳ ಅಡಿಯಲ್ಲಿ, ಆತನ ಪರಿಶುದ್ಧ ರಾಷ್ಟ್ರವಾಗುವಂತೆ, ಈ ಲೋಕದ ರಾಷ್ಟ್ರಗಳನ್ನು ಮತ್ತು ತಮ್ಮ ಕೆಳಮುಖ ಮಾರ್ಗವನ್ನು ಬಿಟ್ಟಿದ್ದಾರೆ ಮತ್ತು ಇನ್ನು ಮುಂದೆ ಅನ್ಯಜನರ ಮಾರ್ಗಕ್ಕಿಂತ ಬಲುಕಷ್ಟವಾದ ಮಾರ್ಗದಲ್ಲಿ ಮೇಲ್ಗಡೆಗೆ ನಡೆಯುವ ಧರ್ಮಶಾಸ್ತ್ರವನ್ನು ಕಾಪಾಡಿಕೊಳ್ಳುವ ಪ್ರಸ್ತಾಪಮಾಡಿದ್ದಾರೆ. ಮಹಾ ಕೈಸಾಲೆ (Grand Gallery)ಯು ಸುವಾರ್ತಾ ಕರೆಯ ಕಾಲವನ್ನು ಪ್ರತಿನಿಧಿಸುತ್ತದೆ ಎಂದು ಅರ್ಥ ಮಾಡಿಕೊಳ್ಳಲಾಗಿದೆ. ಅದು ಇನ್ನೂ ಮೇಲ್ಮುಖವಾಗಿದೆ ಮತ್ತು ಕಷ್ಟಕರವಾಗಿದೆ, ಅದರ ಹಿಂದಿರುವುದರಂತೆ ಅಡಚಣೆಯುಳ್ಳದ್ದಾಗಿರುವುದಿಲ್ಲ. ಈ ಮಾರ್ಗದ ಎತ್ತರ ಮತ್ತು ಹೆಚ್ಚಿನ ಅಗಲವು ಕ್ರೈಸ್ತಯುಗದ ಇನ್ನೂ ಭವ್ಯವಾದ ನಿರೀಕ್ಷೆಯನ್ನು ಉತ್ತಮವಾದ ಅನಿರ್ಬಂಧ ಸ್ಥಿತಿಯನ್ನು ಪ್ರತಿನಿಧಿಸುತ್ತದೆ.

"ಗ್ರ್ಯಾಂಡ್ ಗ್ಯಾಲರಿ"ಯ ನೆಲಮಟ್ಟದಲ್ಲಿ, ಅದರ ಕೆಳಗಣ ತುದಿಯಲ್ಲಿ, ಒಂದು ಸಮತಟ್ಟಾದ ಮಾರ್ಗವು ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ "ರಾಣಿಯ ಕೊಠಡಿ" ಎಂದು ಕರೆಯಲ್ಪಡುವ ಒಂದು ಸಣ್ಣ ಕೊಠಡಿಯ ಮಾರ್ಗಕ್ಕೆ ಅದು ನಡೆಸುತ್ತದೆ. "ಗ್ರ್ಯಾಂಡ್ ಗ್ಯಾಲರಿ"ಯ ಮೇಲಣ ತುದಿಯಲ್ಲಿ ಮತ್ತೊಂದು ತಗ್ಗಿನ ಹಾದಿಯಿದೆ. ಅದು "ಮುಂದಿನ ಕೋಣೆ" (Ante-Chamber) ಎಂದು ಕರೆಯಲ್ಪಡುವ ಸಣ್ಣ ಕೋಣೆಗೆ ನಡೆಸುತ್ತದೆ. ಅದು ವಿಚಿತ್ರವಾಗಿ ರಚಿಸಲ್ಪಟ್ಟಿದೆ ಮತ್ತು ಕೆಲವರಿಗೆ ಇದು ಶಾಲೆಯನ್ನು, ಶಿಕ್ಷಣ ಮತ್ತು ಪರೀಕ್ಷೆಯ ಸ್ಥಳವನ್ನು ಸೂಚಿಸುತ್ತದೆ.

ಆದರೆ, ಮಹಾ ಪಿರಮಿಡ್‌ನ ಮುಖ್ಯ ಕೊಠಡಿಯು, ಗಾತ್ರ ಮತ್ತು ಅದರ ಸ್ಥಳದ ಮುಖ್ಯತೆ ಇವೆರಡರಿಂದಾಗಿ, ಸ್ವಲ್ಪ ದೂರದಲ್ಲಿದೆ ಮತ್ತು ಮತ್ತೊಂದು ಕೆಳಗಣ ಮಾರ್ಗದಿಂದ ಅದು ಮುಂಗೋಣೆ (Ante Chamber) ಯಿಂದಲೇ ಪ್ರತ್ಯೇಕಿಸಲ್ಪಟ್ಟಿದೆ. ಈ ಕೋಣೆಯನ್ನು "ಅರಸನ ಕೊಠಡಿ" ಎಂದು ಕರೆಯುತ್ತಾರೆ. ಅದರ ಮೇಲೆ ಹಲವಾರು ಸಣ್ಣ ಕೊಠಡಿಗಳಿವೆ. ಅದನ್ನು "ನಿರ್ಮಾಣ ಕೊಠಡಿ" (Construction chambers) ಎಂಬುದಾಗಿ ಕರೆಯುತ್ತಾರೆ. ಅವಕ್ಕೆ ಏನಾದರೂ ಅರ್ಥವಿರುವುದಾದಲ್ಲಿ, ಅವುಗಳ ಅರ್ಥವು, ಮಾನವನಿಗೆ ಸಂಬಂಧಿಸಿರುವುದಿಲ್ಲ, ಅಥವಾ ನಡೆದಾಡುವ ಯಾವ ಜೀವಿಗೂ ಸಂಬಂಧಿಸಿರುವುದಿಲ್ಲ, ಆದರೆ ಆತ್ಮಿಕ ಜೀವಿಗಳಿಗೆ ಸಂಬಂಧಿಸಿದ್ದಾಗಿದೆ. ಯಾಕೆಂದರೆ ರೇಖಾಚಿತ್ರದಲ್ಲಿ ಗಮನಿಸುವಾಗ ಮೇಲಣ ಪಕ್ಕಗಳು ಚೌಕಟ್ಟುಳ್ಳದ್ದಾಗಿ ಪೂರ್ಣಗೊಂಡಿವೆ, ಅದಕ್ಕೆ ಯಾವುದೇ ನೆಲದ ಮೇಲ್ಪದರ ಇರುವುದಿಲ್ಲ. "ಅರಸನ ಕೊಠಡಿ"ಯಲ್ಲಿ ಒಂದು ಖಜಾನೆ ಅಥವಾ ಕಲ್ಲು ಪೆಟ್ಟಿಗೆ ಇದೆ. ಇದು ಮಹಾ ಪಿರಮಿಡ್‌ನಲ್ಲಿರುವ ಏಕೈಕ ಪೀಠೋಪಕರಣವಾಗಿದೆ. 'ಅರಸನ ಕೊಠಡಿ'ಗೆ ಮುಕ್ತ ವಾಯು ಸಂಚಾರವನ್ನು ಎರಡು ಗಾಳಿಮಾರ್ಗಗಳಿಂದ ಒದಗಿಸಲಾಗಿದೆ, ಅದು ಅದರ ಗೋಡೆಯನ್ನು ವಿರುದ್ಧ ದಿಕ್ಕಿನಲ್ಲಿ ತೂತುಮಾಡಿ ಹೊರಗಣ ಭಾಗಕ್ಕೆ ವಿಸ್ತರಿಸುವಂತೆ – ಕಟ್ಟಡಗಾರರು ಈ ಉದ್ದೇಶಕ್ಕಾಗಿ ಬಿಟ್ಟಿದ್ದಾರೆ. ನಮ್ಮ ಮುಂದಿನ ಶೋಧನೆಗಾಗಿ ಇನ್ನೂ ಕೆಲವು ಕೋಣೆಗಳೂ ಮತ್ತು ಮಾರ್ಗಗಳೂ


CHAMBER and PASSAGE
SYSTEM of GREAT PYRAMID
Enlarged from Frontispiece
ಗ್ರೇಟ್ ಪಿರಮಿಡ್‌ನ ರಚನೆಯ
ಕೊಠಡಿ ಹಾಗೂ ಮಾರ್ಗವನ್ನು
ಚಿತ್ರದಲ್ಲಿ ದೊಡ್ಡದಾಗಿ
ಮಾಡಲಾಗಿದೆ
10th
20th
30th
36th
40th
50th
60th
Horizontal Masonry Courses
from the Base Upwards
ಸಮಾನಾಂತರ ಕಟ್ಟಡವು
ಅಡಿಪಾಯದಿಂದ ಮೇಲ್ಮುಖವಾಗಿದೆ
Al Mamoun's
Forced Hole
Entrance Passage
ಪ್ರವೇಶ ಮಾರ್ಗ
BASAL PLANE
ತಳಹದಿಯ ಸಮಕ್ಷೇತ್ರ
NATURAL ROCK
Leveled on Top Previous to Building
ಕಟ್ಟಡ ಕಟ್ಟಲು ಸ್ವಾಭಾವಿಕ ಬಂಡೆಯನ್ನು ಸಮಗೊಳಿಸಿರುವುದು
FIRST ASCENDING PASSAGE
ಮೊದಲನೇ ಏರುಮಾರ್ಗ
1542 Pyramid Inches
0 Year
A.D.
B.C.
Descending Entrance Passsage
GRAND GALLERY
ಮಹಾದ್ವಾರ ಮಂಟಪ
1881 Pyramid Inches
HORIZONTAL PASSAGE
ಸಮಾನಾಂತರ ಮಾರ್ಗ
The Well
ಬಾವಿ
GROTTO
in Natural Rock
ಸ್ವಾಭಾವಿಕ ಬಂಡೆಯಲ್ಲಿರುವ
ಸುಂದರ ಗುಹೆ
The Well
ಬಾವಿ
The Well
ಬಾವಿ
King's Ch.
ರಾಜನ
ಕೊಠಡಿ
Ant. Ch.
Queen's
Ch.
ರಾಣಿಯ
ಕೊಠಡಿ
VERTICAL
AXIS
ಲಂಬ ಅಕ್ಷ
BASAL PLANE
ತಳಹದಿಯ ಸಮಕ್ಷೇತ್ರ
SUBTERRANEAN
CHAMBER
ಭೂಗತ ಕೊಠಡಿ
SCALE OF BRITISH INCHES
1000
500
0
500
1000
2000
3000

ಇದ್ದಿರಬಹುದೆಂದು ಕೆಲವರು ಊಹಿಸುತ್ತಾರೆ. ಆದರೆ ನಾವು ಈ ಅಭಿಪ್ರಾಯದಲ್ಲಿ ಪಾಲು ತೆಗೆದುಕೊಳ್ಳುವುದಿಲ್ಲ, ಈಗಾಗಲೇ ಕಂಡುಹಿಡಿದಿರುವ ಮಾರ್ಗಗಳು ಮತ್ತು ಕೋಣೆಗಳು ಇದು ದೇವರ ಸಮಗ್ರ ಯೋಜನೆಯನ್ನು ಕಾಣುವುದಕ್ಕಾಗಿರುವ ಆತನ ಉದ್ದೇಶವನ್ನು ಪೂರ್ಣವಾಗಿ ನೆರವೇರಿಸುತ್ತದೆ ಎಂದೆನಿಸುತ್ತದೆ.

"ಗ್ರ್ಯಾಂಡ್ ಗ್ಯಾಲರಿ"ಯ ಕೆಳಗಣ ಅಥವಾ ಉತ್ತರ ಕೊನೆಯ ಪಶ್ಚಿಮ ದಿಕ್ಕಿನಿಂದ, ಕೆಳಗಡೆಗೆ ವಿಸ್ತರಿಸಿ ಒಂದು ಡೊಂಕಾದ ಮಾರ್ಗವಿದೆ. ಅದಕ್ಕೆ "ಬಾವಿ" ಎಂದು ಕರೆಯುತ್ತಾರೆ ಮತ್ತು ಅದು ಕೆಳಹೋಗುವ "ಪ್ರವೇಶ ದ್ವಾರ"ಕ್ಕೆ ನಡೆಸುತ್ತದೆ. ಅದರ ಪಥವು ಒಂದು ಸ್ವಾಭಾವಿಕ ಬಂಡೆಯ ಸುಂದರವಾದ ಗವಿಯ ಮೂಲಕ ಹಾದುಹೋಗುತ್ತದೆ. ಈ ಹಾದಿ ಮತ್ತು "ಗ್ರ್ಯಾಂಡ್ ಗ್ಯಾಲರಿ"ಯ ಸೇರುವಿಕೆಯು ಬಹಳಷ್ಟು ಕ್ರಮ ವಿಲ್ಲದ್ದಾಗಿದೆ. ಮೂಲದಲ್ಲಿ 'ರಾಣಿಯ ಕೊಠಡಿ'ಗೆ ಹೋಗುವ ಮಾರ್ಗವು 'ಗ್ರ್ಯಾಂಡ್ ಗ್ಯಾಲರಿ'ಯ ನೆಲದಹಾಸುಗಲ್ಲುಗಳಿಂದ ಮುಚ್ಚಿಹೋಗಿತ್ತೆಂದು ತೋರಿಬರುತ್ತದೆ. ಮತ್ತು ಒಂದು ಕಲ್ಲು ಚಪ್ಪಡಿ ಬಾವಿಯ ಬಾಯಿಗೆ ಮುಚ್ಚಿದೆ. ಈಗ 'ಗ್ರ್ಯಾಂಡ್ ಗ್ಯಾಲರಿಯ' ಪೂರ್ಣವಾದ ಕೆಳಗಣ ಕೊನೆಯು ಸೀಳಿಹೋಗಿದ್ದು 'ರಾಣಿಯ ಕೊಠಡಿ'ಗೆ ಮಾರ್ಗವನ್ನು ತೆರೆದಿದೆ ಮತ್ತು 'ಬಾವಿಯ' ಬಾಯನ್ನು ತೆರೆದಿದೆ. ಅಲ್ಲಿಗೆ ಹೋಗಿದ್ದವರು ಮತ್ತು ಅದನ್ನು ಪರೀಕ್ಷೆ ಮಾಡಿದವರು ಬಾವಿಯ ಬಾಯಲ್ಲಿ ಯಾವುದೋ ಒಂದು ಸ್ಫೋಟವಾಗಿ ಅದರ ತಳಭಾಗವನ್ನು ಸಿಡಿಸಿದ್ದಿರಬಹುದೆಂದು ಹೇಳುತ್ತಾರೆ. ಆದಾಗ್ಯೂ, ಅಂಥಾಃ ಸ್ಫೋಟ ಎಂದೂ ಆಗಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ. ಆದರೆ, ಆ ವಸ್ತುಗಳನ್ನು ಕಟ್ಟಡ ಕಟ್ಟುವವರು ಬೇಕೆಂತಲೇ ಸ್ಫೋಟದಿಂದುಂಟಾಗ ಬಹುದಾದ ಇಂಗಿತಗಳನ್ನು ನೀಡಲಿ ಎಂಬ ಉದ್ದೇಶದಿಂದ ಬಿಟ್ಟುಹೋಗಿದ್ದಿರಬಹುದು, ಈ ಬಗ್ಗೆ ನಂತರದಲ್ಲಿ ಉಲ್ಲೇಖಿಸಲಾಗುವುದು. ವಾಸ್ತವವಾಗಿ, ಈಗ ಯಾವುದೇ ಕಲ್ಲುಗಳು ಈಗ ಕಂಡು ಬರುತ್ತಿಲ್ಲ ಮತ್ತು ಅವುಗಳನ್ನು ತೆಗೆಯುವುದು ಬಹಳ ಕಷ್ಟದ ಕಾರ್ಯವಾಗಿದೆ.

'ಗ್ರ್ಯಾಂಡ್ ಗ್ಯಾಲರಿ'ಯ ಮೇಲಣ ಅಥವಾ ದಕ್ಷಿಣ ಕೊನೆಯಲ್ಲಿರುವ 'ಮುಂಗೋಣೆ' (Ante-Chamber)ಯ ಮತ್ತು 'ರಾಜನ ಕೊಠಡಿ' (Kings Chamber)ನ ನೆಲರೇಖೆಯು 'ಗ್ರ್ಯಾಂಡ್ ಗ್ಯಾಲರಿ'ಯಲ್ಲಿ ವಿಸ್ತಾರಗೊಂಡು ಒಂದು ಆಕಸ್ಮಿಕ ತಡೆಯಾಗಿ ಅಥವಾ ಅದರ ಉತ್ತರ ಕೊನೆಯ ಎತ್ತರದ ಮೆಟ್ಟಲಾಗಿ ಮಾಡಲ್ಪಟ್ಟಿದೆ. ಮೆಟ್ಟಲುಗಳು ದಕ್ಷಿಣ ಗೋಡೆಯಿಂದ ಅರವತ್ತೊಂದು ಇಂಚಿನವರೆಗೆ ಚಾಚಿಕೊಂಡಿದೆ, ಗ್ರ್ಯಾಂಡ್ ಗ್ಯಾಲರಿಯ ದಕ್ಷಿಣ ಕೊನೆಗೆ ಒಂದು ವೈಶಿಷ್ಟ್ಯತೆ ಇದೆ. ಅದು ಲಂಬವಾಗಿಲ್ಲ, ಆದರೆ ಉತ್ತರದ ಕಡೆಗೆ ವಾಲಿದೆ. – ಮೇಲ್ತುದಿಯಲ್ಲಿ 20 ಇಂಚುಗಳು – ಡಾ॥ ಎಡ್ಗರ್‌ರವರ ವರದಿ (Dr. J Edgar's Report) – ಅದೇ ತುಟ್ಟ ತುದಿಯಲ್ಲಿ ಒಂದು ಕಿಂಡಿ ಅಥವಾ ಹಾದಿ ಇದ್ದು ಅದು 'ಕಿಂಗ್ಸ್ ಚೇಂಬರ್'ನ ಮೇಲಿರುವ 'ನಿರ್ಮಾಣ ಕೊಠಡಿ' (Construction Chamber) ಎಂದು ಕರೆಯಲ್ಪಡುವ ಕೊಠಡಿಗೆ ಜೋಡಿಸಲ್ಪಟ್ಟಿದೆ.

ಪಿರಮಿಡ್‌ನ, ಸಮಗ್ರ ಸೌಧದ ಹಾದಿಗಳು ಮತ್ತು ನೆಲವು ಸುಣ್ಣಕಲ್ಲಿನಿಂದ ಮಾಡಲ್ಪಟ್ಟಿರುವುದು. ವಾಸ್ತವವಾಗಿ, ಅದರ ಸಂಪೂರ್ಣ ರಚನೆ ಎನ್ನಬಹುದು. ಆದರೆ 'ಕಿಂಗ್ ಚೇಂಬರ್', 'ಆಂಟೆ–ಚೇಂಬರ್', ಮತ್ತು ಅವುಗಳ ನಡುವಣ ಹಾದಿಗಳು, ಮತ್ತು ಅದರ ನೆಲ ಮತ್ತು ಚಾವಣಿ ಮಾತ್ರ ಗ್ರಾನೈಟಿನಿಂದ ಮಾಡಲ್ಪಟ್ಟಿವೆ. ಸೌಧದಲ್ಲಿ ಬೇರೆಡೆ ಇರುವ ಒಂದೇ ಗ್ರಾನೈಟ್ ತುಂಡು ಎಂದರೆ 'ಪ್ಲಗ್'. ಇದನ್ನು 'ಮೊದಲನೆಯ ಮೇಲೇರುವ ಮಾರ್ಗ'ದ ಕೆಳತುದಿಗೆ ಬಲವಾಗಿ ಬೆಣೆಗೂಟದಿಂದ ಭದ್ರಪಡಿಸಲಾಗಿದೆ. ಮೂಲದಲ್ಲಿ ನಿರ್ಮಾಣಿಕರಿಂದ ಬಿಟ್ಟಿರುವಂತೆ, 'ಮೊದಲನೆಯ ಏರುಮಾರ್ಗ'ವನ್ನು ಅದರ ಕೆಳಗಣ ಕೊನೆಯಲ್ಲಿ ಹತ್ತಿರವಾಗಿ ಜೋಡಿಸಲ್ಪಟ್ಟ ಮೂಲೆಗಳುಳ್ಳ ಕಲ್ಲಿನಿಂದ ಮೊಹರು ಮಾಡಲಾಗಿದೆ. ಅದು ಅಲ್ಲಿ 'ಪ್ರವೇಶದ್ವಾರ'ದೊಂದಿಗೆ ಕೂಡಿಕೊಳ್ಳುತ್ತದೆ. ಇದನ್ನು ಬಹಳ ನಾಜೂಕಾಗಿ ಮಾಡಲಾಗಿದ್ದು, "ಮೊದಲನೆಯ ಏರು ಮಾರ್ಗ"ವು ತಕ್ಕ ಸಮಯದಲ್ಲಿ ಕಲ್ಲು ಬೀಳುವವರೆಗೆ ಗೊತ್ತಿರಲಿಲ್ಲ. ಈ 'ಮೊದಲನೆಯ ಆರೋಹಣ ಮಾರ್ಗ'ದ ಕೆಳಗಣ ಕೊನೆಯಲ್ಲಿನ ಹತ್ತಿರದಲ್ಲಿ, ಮತ್ತು ಮುಚ್ಚುವ ಕಲ್ಲಿನ ಹಿಂದೆ ಗ್ರಾನೈಟ್ 'ಪ್ಲಗ್' ಇದ್ದು ಅದು ಕವಲೊಡೆದ ಆಕಾರದಲ್ಲಿದೆ, ಮತ್ತು ವಿಶದವಾಗಿ ಅಲ್ಲಿ ಉಳುಕೊಳ್ಳುವಂತೆ ಉದ್ದೇಶಿಸಲಾಗಿದೆ, ಯಾಕೆಂದರೆ ಅದು ಇದುವರೆಗೆ ಅದನ್ನು ತೆಗೆದುಹಾಕುವ ಎಲ್ಲಾ ಪ್ರಯತ್ನಗಳನ್ನೂ ತಡೆಗಟ್ಟಿದೆ.

ಇತಿಹಾಸಕಾರರು ಪ್ರಮಾಣೀಕರಿಸುವಂತೆ "ಪ್ರವೇಶ ದ್ವಾರ"ವು ಹಿಂದಿನವರಿಗೆ ಚೆನ್ನಾಗಿ ಗೊತ್ತಿದ್ದರೂ, Al Mamaoun ಎಂಬ ಅರೆಬಿಯಾ ದೇಶದ ಖಲೀಫನಿಗೆ ಚರಿತ್ರೆಯ (traditions) ಪ್ರಕಾರ ಅದು ಪಿರಮಿಡ್‌ನ ಉತ್ತರ ಭಾಗದಲ್ಲಿದೆ ಎಂಬುದರ ಹೊರತಾಗಿ ವಿಶದವಾಗಿ

ಅದರ ಸರಿಯಾದ ಸ್ಥಳ ಬಗ್ಗೆ ಹೆಚ್ಚಾಗಿ ತಿಳಿದಿರಲಿಲ್ಲ. ಕ್ರಿ.ಶ. 825ರಲ್ಲಿ ಆತನು ಬಹಳ ಖರ್ಚುಮಾಡಿ ಅದ್ಭುತವಾದ ನಿಧಿಯನ್ನು ಪಡಕೊಳ್ಳುವ ನಿರೀಕ್ಷೆಯಿಂದ ರೇಖಾ ಚಿತ್ರದಲ್ಲಿ ತೋರಿಸಿರುವಂತೆ ಒಂದು ಪ್ರವೇಶವನ್ನು ಬಲಪ್ರಯೋಗ ಮಾಡಿ ತೆಗೆಸಿದನು. ಆದರೆ ಅದರಲ್ಲಿ ಈಗ ಅವುಗಳನ್ನು ಮೆಚ್ಚುಕೊಳ್ಳುತ್ತಿರುವಂತೆ ಬಹಳವಾಗಿ ಬೌದ್ಧಿಕ ನಿಕ್ಷೇಪಗಳು ಇದ್ದರೂ, ಅರಬ್ಬರು ಬಯಸಿದಂತಹ ಯಾವುದೇ ರೀತಿಯಲ್ಲಿ ಅದು ಇರಲಿಲ್ಲ. ಆದರೆ, ಅವರ ಶ್ರಮವು ಪೂರ್ಣವಾಗಿ ವ್ಯರ್ಥವಾಗಲಿಲ್ಲ; ಅವರು ಕೆಲಸ ಮಾಡುತ್ತಿರುವಾಗ, ಮೇಲಣ ಹಾದಿಯನ್ನು ಮುಚ್ಚಿದ್ದ ಕಲ್ಲು ಅದರ ಸ್ಥಳದಿಂದ ಕರಕರಗುಟ್ಟುತ್ತಾ "ಪ್ರವೇಶ ದ್ವಾರ"ದಲ್ಲಿ ಬಿದ್ದು ರಹಸ್ಯವೊಂದನ್ನು ಹೊರಹಾಕಿತು. ಈ ರೀತಿಯಲ್ಲಿ "ಮೊದಲ ಅರೋಹಣ ಮಾರ್ಗ"ವು ಬಯಲಾಯಿತು. ಅರಬರು ತಾವು ಕಡೆಗೂ ಗೌಪ್ಯವಾದ ಸಂಪತ್ತಿನ ಮಾರ್ಗವನ್ನು ಕಂಡುಹಿಡಿದೆವೆಂದು ಭಾವಿಸಿದರು. ಆದರೆ, ಅವರಿಗೆ ಗ್ರಾನೈಟ್ ಪ್ಲಗ್ಗನ್ನು ತೆಗೆಯಲಾಗಲಿಲ್ಲ, ಅವರು ಪಕ್ಕದಲ್ಲಿ ಮೆದುವಾದ ಸುಣ್ಣದ ಕಲ್ಲನ್ನು ಕೊರೆಯುವುದರಿಂದ ಬಹಳ ಸುಲಭವಾಗಿ ಒಂದು ಮಾರ್ಗವನ್ನು ಬಲವಂತವಾಗಿ ತೆಗೆಸಿದರು.

## ಯುಗಾಂತರಗಳ ಯೋಜನೆಯ ಕುರಿತಾಗಿ ಮಹಾಪಿರಮಿಡ್ಡಿನ ಸಾಕ್ಷ್ಯ


## The Great Pyramid's Testimony Concerning the Plan of the Ages

ಮಾನ್ಯ ರಾಬರ್ಟ್ ಮೆಂಜೀಸ್ ಎಂಬ ಸ್ಕಾಟ್ಲ್ಯಾಂಡಿನ ಯುವಕನು ಪ್ರೊ॥ ಸ್ಮಿತ್ ಎಂಬುವವರಿಗೆ ಬರೆದ ಪತ್ರದಲ್ಲಿ ಪಿರಮಿಡ್‌ನ ಧಾರ್ಮಿಕ ಅಥವಾ ಮೆಸ್ಸೀಯನ ಲಕ್ಷಣಗಳ ಬೋಧನೆಯನ್ನು ಈ ಮೊದಲು ಸಲಹೆ ಮಾಡಿದ್ದನ್ನು ಹೀಗೆ ಹೇಳಿದ್ದಾರೆ:

"ಗ್ರ್ಯಾಂಡ್ ಗ್ಯಾಲರಿ"ಯ ಉತ್ತರ ಪ್ರಾರಂಭದಿಂದ ಮೇಲಣ ಬೆಳವಣಿಗೆಯನ್ನು ನಮ್ಮ ಕರ್ತನ ಜೀವನದ ವರ್ಷಗಳು ಒಂದು ಇಂಚಿಗೆ ಒಂದು ವರ್ಷದ ಲೆಕ್ಕದಂತೆ ಪ್ರಾರಂಭವಾಗುತ್ತವೆ ಎಂದು ಹೇಳಲಾಗಿದೆ. ಹೀಗೆ ಮೂರು ಮತ್ತು ಮೂವತ್ತು ಇಂಚುಗಳ ವರ್ಷಗಳು ನಮ್ಮನ್ನು ಸರಿಯಾಗಿ ಬಾವಿಯ ಬಾಯಿಯ ಎದುರಿಗೆ ತರುತ್ತದೆ".


ಹೌದು, ಹೇಳುವುದಾದರೆ ಆ "ಬಾವಿಯೇ" ಈ ಕಥೆಗೆಲ್ಲಾ ಕೀಲಿಕೈಯಾಗಿದೆ. ಅದು ನಮ್ಮ ಕರ್ತನ ಮರಣ ಮತ್ತು ಹೂಳುವಿಕೆಯನ್ನು ಪ್ರತಿನಿಧಿಸುವುದು ಮಾತ್ರವಲ್ಲ, ಆತನ ಪುನರುತ್ಥಾನವನ್ನು ಸಹಾ ಪ್ರತಿನಿಧಿಸುತ್ತದೆ. ಈ ಕಡೆಯದನ್ನು ಈಗಾಗಲೇ ಗಮನಿಸಿರುವ ಲಕ್ಷಣದಲ್ಲಿ ತೋರಿಸಲಾಗಿದೆ. "ಬಾವಿಯ" ಬಾಯಿಯು ಮತ್ತು ಅದರ ಸುತ್ತಮುತ್ತಣ ಪರಿಸರವು ಒಂದು ಸ್ಫೋಟವೋ ಎಂಬಂತೆ ಕೆಳಗಿನಿಂದ ಅದನ್ನು ಸಿಡಿಸಿದೆ ಎಂದು ತೋರಿಬರುತ್ತದೆ. ಈ ರೀತಿಯಲ್ಲಿ ನಮ್ಮ ಕರ್ತನು ಮರಣ ಬಂಧನವನ್ನು ಸಿಡಿಸಿದನು. ಮತ್ತು ಆ ಮೂಲಕ ಜೀವವನ್ನೂ, ಅಮರತ್ವವನ್ನೂ ಬೆಳಕಿಗೆ ತಂದು – ನೂತನ ಜೀವದ ಮಾರ್ಗವನ್ನು ಬೆಳಕಿಗೆ ತಂದನು (ಇಬ್ರಿಯ 10:12). "ಯಾಕೆಂದರೆ, ಮರಣವು ಆತನನ್ನು ಹಿಡುಕೊಂಡಿರುವುದು ಅಸಾಧ್ಯವಾಗಿತ್ತು" (ಅ.ಕೃ. 2: 24) ಎಂಬಂತೆ ಇದು ಈ "ಬಾವಿಯ" ಮೇಲಣ ತೆರೆಯುವಿಕೆಯು ಒಡೆದುಹೋದ ಬಂಡೆಗಳ ಸುತ್ತುಗಟ್ಟನ್ನು ತೋರ್ಪಡಿಸುತ್ತದೆ. ಬಾವಿಯು ಈ ಪಿರಮಿಡ್‌ನ ಪ್ರತಿಯೊಂದು ಮೇಲಣ ಮಾರ್ಗಗಳಿಗೆ ಹೋಗಲು ಒಂದೇ ಪ್ರವೇಶ ಮಾರ್ಗವಾಗಿರುವಂತೆ, ನಮ್ಮ ವಿಮೋಚಕನ ಮರಣ ಮತ್ತು ಪುನರುತ್ಥಾನದ ದೆಸೆಯಿಂದ, ಪತನಗೊಂಡಿರುವ ಕುಲದವರಿಗೆ ಯಾವುದೇ ಮಟ್ಟದಲ್ಲಿ ಜೀವವನ್ನು ಪಡೆಯಲು ಇದೊಂದೇ ಮಾರ್ಗವಾಗಿದೆ. ಮೊದಲನೇ ಏರುಮಾರ್ಗವು ಅಲ್ಲಿರುವುದರಿಂದ, ಆದರೆ ಅದರ ಮೂಲಕ ಹಾದುಹೋಗಲು ದುಸ್ತರವಾಗಿದುದರಿಂದ, ಯೆಹೂದ್ಯರ ಅಥವಾ ಒಡಂಬಡಿಕೆಯ ನಿಯಮವು ಜೀವವನ್ನು ಕೊಡುವ ಅಥವಾ ಅರ್ಪಿಸುವ ಮಾರ್ಗವಾಗಿರದೆ, ಪ್ರಯೋಜನವಿಲ್ಲದ ಅಥವಾ ಜೀವಕ್ಕೆ ಮಾರ್ಗಕ್ಕೆ ದುಸ್ತರವಾದದ್ದಾಗಿದೆ. ಪತನಗೊಂಡ ಯಾವುದೇ ಕುಲವು ಎಂದಿಗೂ ಅದರ ನಿಗದಿತ ಮಾರ್ಗದಲ್ಲಿ ನಡೆಯುವುದರ ಮೂಲಕ ಜೀವವನ್ನು ತಲುಪಲಾಗಲಿಲ್ಲ ಅಥವಾ ತಲುಪಲಿಲ್ಲ. ಯಾಕೆಂದರೆ, "ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ" (ರೋಮಾ. 3:20). ಆ ಬಾವಿಯು ಪ್ರತಿನಿಧಿಸುವ "ಈಡುಬಲಿ" ಒಂದರ ಮೂಲಕ ಮಾತ್ರವೇ ಶಿಕ್ಷಿಸಲ್ಪಟ್ಟ ಕುಲವು ದೇವರ ಯೋಜನೆಯ ಭವ್ಯವಾದ ಒದಗಿಸುವಿಕೆಯನ್ನು, ಶಾಶ್ವತ ಜೀವವನ್ನು ಪಡಕೊಳ್ಳಬಹುದಾಗಿದೆ.

"ಗ್ರ್ಯಾಂಡ್ ಗ್ಯಾಲರಿ" ಕ್ರೈಸ್ತ (ಯುಗ) ಹಂಚಿಕೆಯನ್ನು ಪ್ರತಿನಿಧಿಸುತ್ತದೆ ಎಂಬ ಸಲಹೆಗೆ ಅನೇಕ ವರ್ಷಗಳ ಹಿಂದೆಯೇ ಪ್ರೊ॥ ಸ್ಮಿತ್‌ರವರು ತಮ್ಮ ಖಗೋಳಿಕ ಅವಲೋಕನದ ಮೂಲಕ ಪಿರಮಿಡ್‌ನ




**SECTION (Vertical and Longitudinal) LOOKING WEST OF LOWER OR NORTHERN END OF GRAND GALLERY IN GREAT PYRAMID**

ಮಹಾಪಿರಮಿಡ್‌ನಲ್ಲಿ ಮಹಾದ್ವಾರದ ಉತ್ತರದ ಕೆಳಭಾಗ ತುದಿ ಅಥವಾ ಪಶ್ಚಿಮ ಕೆಳಭಾಗದ ತುದಿಯನ್ನು (ಉದ್ದನೆ ಮತ್ತು ನೀಳವಾಗಿ) ವಿಭಾಗಿಸಿರುವುದು




**ENLARGED PERSPECTIVE VIEW OF THE BROKEN OUT RAMP STONE AND THE ENTRANCE TO THE WELL (so-called)**

ಮುಂದುವರಿಯಲ್ಪಟ್ಟಿರುವ ಇಳಿಜಾರಿನ ಬಂಡೆಯ ದೃಶ್ಯದ ದೃಷ್ಟಿಕೋನವನ್ನು ಹಾಗೂ ಬಾವಿಯ ಪ್ರವೇಶ ದ್ವಾರವನ್ನು ದೊಡ್ಡದಾಗಿ ತೋರಿಸಲಾಗಿದೆ.

ನಿರ್ಮಾಣದ ದಿನಾಂಕವನ್ನು ಕ್ರಿ.ಪೂ. 2170 ಎಂಬುದಾಗಿ ನಿರ್ಧರಿಸಿದರು. ಮಾನ್ಯ Menezie ಎಂಬುವವರು "ಗ್ರ್ಯಾಂಡ್ ಗಾಲರಿ"ಯ ನೆಲರೇಖೆಯ ಇಂಚುಗಳು ವರ್ಷಗಳನ್ನು ಪ್ರತಿನಿಧಿಸುತ್ತದೆ ಎಂಬ ಸಲಹೆ ಕೊಟ್ಟಾಗ, "ಆ ವಿಚಾರ ಸರಣಿಯು ಸರಿಯಾಗಿದ್ದರೆ, ಆ ನೆಲರೇಖೆಯನ್ನು ಹಿಮ್ಮುಖವಾಗಿ ಗ್ರ್ಯಾಂಡ್ ಗ್ಯಾಲರಿಯ ಕೆಳಗಣ ಅಂಚಿನಿಂದ 'ಮೊದಲ ಮೇಲೇರುವ ಹಾದಿ'ಯವರೆಗೆ ಅದು 'ಪ್ರವೇಶದ್ವಾರ'ಕ್ಕೆ ಕೂಡುವವರೆಗೆ ಅಳೆಯುವಾಗ, ಮತ್ತು ಅಲ್ಲಿಂದ ಪ್ರವೇಶ ದ್ವಾರದೊಂದಿಗೆ ಮೇಲ್ಗಡೆಗೆ ಪಿರಮಿಡ್‌ನ ಪ್ರವೇಶದೆಡೆಗೆ ಹೋದಲ್ಲಿ ಆ ಮಾರ್ಗದಲ್ಲಿ ಅದಕ್ಕೆ ಅನುಗುಣವಾಗುವಂತೆ ಮತ್ತು ಆ ರೀತಿಯಲ್ಲಿ ಪಿರಮಿಡ್‌ನ ನಿರ್ಮಾಣದ ದಿನಾಂಕವನ್ನು ಮತ್ತು ಇಂಚು, ವರ್ಷದ ವಿಚಾರಸರಣಿಯನ್ನು ಸಾಬೀತುಪಡಿಸುವಂತೆ ಯಾವುದಾದರೂ ಗುರುತು ಅಥವಾ ಸೂಚನೆಯು ಕಂಡುಬರಬೇಕು" ಎಂದು ಯಾರೋ ಒಬ್ಬರಿಗೆ ಕಂಡುಬರುತ್ತದೆ. ಇದು ಅಸಮಂಜಸವಲ್ಲದಿದ್ದರೂ, ಒಂದು ನಿರ್ಣಾಯಕ ಪರೀಕ್ಷೆಯಾಗಿದೆ ಮತ್ತು ಪಿರಮಿಡ್‌ನ್ನು ಭೇಟಿ ಮಾಡುವಂತೆ, ಅಲ್ಲಿನ ಮಾರ್ಗಗಳ, ಕೊಠಡಿ ಮುಂತಾದವುಗಳ ಕರಾರುವಕ್ಕಾದ ಅಳತೆಗಳನ್ನು ಮಾಡುವಂತೆ ಒಬ್ಬ ಸಿವಿಲ್ ಇಂಜಿನಿಯರಿನ ಸೇವೆಯನ್ನು ಬಳಸಿಕೊಳ್ಳಲಾಯಿತು. ಅದು 1872ರಲ್ಲಿ. ಆ ಮಹಾಶಯನ ವರದಿಯು ಕಡೆಯ ಶ್ರೇಣಿಯವರೆಗೆ ದೃಢತೆಯುಳ್ಳದ್ದಾಗಿತ್ತು. ಆತನ ಅಳತೆಯು ನೆಲರೇಖೆಯು ಪ್ರವೇಶ ದ್ವಾರದ* ಗೋಡೆಗಳಲ್ಲಿ ಬಹಳ ಸೂಕ್ಷ್ಮವಾಗಿ ಹಾಕಿದ ಗೆರೆಗಳ ಪ್ರಕಾರ ಕೇವಲ 2170½ ಇಂಚುಗಳು ಆಗಿದೆ. ಹೀಗಾಗಿ ಅದರ ನಿರ್ಮಾಣದ ದಿನಾಂಕವು ದುಪ್ಪಟ್ಟಾಗಿ ದೃಢೀಕರಿಸಲ್ಪಟ್ಟಿದೆ. ಅದರ ಮಾರ್ಗಗಳನ್ನು ಚರಿತ್ರೆಯ ಮತ್ತು ಕಾಲಗಣನೆಯ ಸುರುಳಿಗಳಾಗಿ ತೋರಿಸಲ್ಪಟ್ಟಿದ್ದು ಅದನ್ನು "ಐಗುಪ್ತ ದೇಶದಲ್ಲಿ ದೇವರಿಗೆ ಸಾಕ್ಷ್ಯವಾಗಿದೆ ಎಂದು ಇನ್ನೂ ಸಾಮಾನ್ಯವಾಗಿ ಕೇಳಲ್ಪಡಬೇಕಾಗಿದೆ.

ಪ್ರೊ॥ ಸ್ಮಿತ್‌ರವರು ಸಲ್ಲಿಸಿದ ಎಲ್ಲಾ ಕರಾರುವಾಕ್ಕಾದ ಅಳತೆಗಳಿಗೆ ಧನ್ಯವಾದಗಳು. ಇದುವರೆಗೆ ಬಹಳ ಕುತೂಹಲಕಾರಿಯಾಗಿದ್ದ ಇನ್ನೂ ಬಿಡುಗಡೆ ಗೊಳಿಸಬೇಕಾದ ಸಾಕ್ಷ್ಯದ ಲಕ್ಷಣಗಳನ್ನು ತಲುಪುವಂತೆ ಇದು ಮಾಡಿದೆ.

ನಾವು ಮೊದಲಿಗೆ ಈಗಾಗಲೇ ನಾವು ಹೇಳಿರುವ ಗ್ರೇಟ್ ಪಿರಮಿಡ್‌ನ ಸಾಕ್ಷ್ಯವನ್ನು ಮೆಚ್ಚಿಕೊಂಡಿರುವಾಗ, ನಾವು ಒಮ್ಮೆಲೇ ಹೇಳಿರುವುದೇನೆಂದರೆ, ಇದು ಸತ್ಯವೇದವನ್ನು ಒಂದು ಕಲ್ಲಿನಲ್ಲಿ ಖಂಡಿತವಾಗಿಯೂ ರುಜುವಾತುಪಡಿಸುವುದಾದರೆ; ಇದು ವಿಶ್ವದ ಮಹಾ ಶಿಲ್ಪಿಯ ರಹಸ್ಯ ಯೋಜನೆಯಾಗಿದ್ದರೆ; ಆತನ ಪೂರ್ವ ಜ್ಞಾನ ಮತ್ತು ವಿವೇಕ ಎಂಬುದಾಗಿ ಎಂದು ದಾಖಲಿಸಬಹುದಾಗಿದ್ದರೆ ಅದು ಆತನ ಲಿಖಿತ ಬರಹಗಳಿಗೆ ಅನುಗುಣವಾಗಿದೆ ಮತ್ತು ಹಾಗೆಯೇ ಆಗಬೇಕಾಗಿದೆ. ವಾಸ್ತವವಾಗಿ, ಪಿರಮಿಡ್‌ನ ರಹಸ್ಯಗಳು ಪ್ರಪಂಚದ ಇತಿಹಾಸದ ಆರು ಸಾವಿರ ವರ್ಷಗಳ ಅಂತ್ಯದವರೆಗೆ ಕಾಪಾಡಿಸಲ್ಪಟ್ಟಿತು, ಆದರೆ ಈಗ ಸಹಸ್ರಮಾನದ ಉದಯವು ಹತ್ತಿರವಾಗುತ್ತಿರುವಾಗ ಅದು ಅದರ ಸಾಕ್ಷ್ಯವನ್ನು ನೀಡಲು ಪ್ರಾರಂಭಿಸಿದೆ ಮತ್ತು ಇದು ಲಿಖಿತ ಬರಹಗಳಿಗೆ ಸಂಪೂರ್ಣವಾಗಿ ಅನುಗುಣವಾಗಿದೆ. ಅದರ ಅನೇಕ ಸಾಕ್ಷ್ಯಗಳು ದೇವರ ಭವ್ಯ ಯೋಜನೆಗಳಿಗೆ ಸಂಬಂಧಿಸಿವೆ. ಅದರಂತೆ ಅವುಗಳು ಲೋಕದ ಅಸ್ತಿವಾರವು ಹಾಕಲ್ಪಟ್ಟಿದಂದಿನಿಂದ ರಹಸ್ಯವಾಗಿಯೇ ಕಾಪಾಡಲ್ಪಟ್ಟವು. ಈಗ ಮಾತ್ರವೇ ಅವು ತನ್ನ ಸಂಪೂರ್ಣತೆ ಮತ್ತು ಭವ್ಯತೆಯೊಂದಿಗೆ ಪ್ರಕಾಶಿಸಲು ಪ್ರಾರಂಭಿಸಿವೆ.

ನಾವು ಈಗಾಗಲೇ ಈ ಹಿಂದಿನ ಸಂಪುಟಗಳಲ್ಲಿ ಮತ್ತು ಈ ಸಂಪುಟದ ಹಿಂದಿನ ಅಧ್ಯಾಯಗಳಲ್ಲಿ ಲಿಖಿತ ವಾಕ್ಯಗಳ ಸ್ಪಷ್ಟವಾದ ಸಾಕ್ಷ್ಯಗಳನ್ನು ಪ್ರಸ್ತುತಿಪಡಿಸಿದ್ದೇವೆ ಮತ್ತು ನಾವೀಗ ನೂತನ ಯುಗದ ಹೊಸ್ತಿಲಿನಲ್ಲಿದ್ದೇವೆ. ಮಿಲಿಯಾಂತರ ದಿನದ ಉದಯದಲ್ಲಿದ್ದೇವೆ. ಅದರ ಭೂಲೋಕದ ಆಡಳಿತವು "ಈ ಲೋಕದ ಅಧಿಪತಿ" ಮತ್ತು ಆತನಲ್ಲಿ ನಿಷ್ಠಾವಂತರ ನಿಯಂತ್ರಣದಿಂದ, "ರಾಜ್ಯಕ್ಕೆ ಭಾದ್ಯನು" (ಕೊಂಡುಕೊಂಡಿರುವನು) ಮತ್ತು ಆತನ ನಂಬಿಕೆಯು ಭಕ್ತರ ನಿಯಂತ್ರಣಕ್ಕೆ ಬದಲಾಗುವುದು ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಈ ಬದಲಾವಣೆಯ ಫಲಿತಾಂಶವು ಒಂದು ದೊಡ್ಡ ಆಶೀರ್ವಾದವಾಗಿದೆಯಾದರೂ, ಆ ಕಾಲವಿನ್ನೂ ವರ್ಗಾಯಿಸಬೇಕಾಗಿದೆ. ಪ್ರಸ್ತುತದಲ್ಲಿರುವ ಇಹಲೋಕಾಧಿಪತಿಯು "ಬಲಿಷ್ಠನಾದ ಮನುಷ್ಯ ನಾಗಿದ್ದು" (ಸೈತಾನನು) ಆತನನ್ನು ಬಂಧಿಸಿ ಆತನ ಮನೆವಾರ್ತೆತನದವರನ್ನು ಅಧಿಕಾರದಿಂದ ಹೊರಗಟ್ಟ ಲಾಗುವುದು (ಮತ್ತಾಯ 12:29; ಪ್ರಕಟನೆ 20:2) ಮತ್ತು ಆ ಸಮಯವು ತೀವ್ರ ಕಷ್ಟಕರವಾಗಿರುವುದು. ನಾವು

* [ಪ್ರಾರಂಭದ ಅಂಶವನ್ನು ಕ್ರಿ.ಪೂ. 2 ಎಂದು ಗುರುತಿಸುವುದರಿಂದ ಈ ಅಳತೆಯು ಏಪ್ರಿಲ್ 2172ನ್ನು ಸೂಚಿಸುತ್ತದೆ. ಆದರೆ ಅ ಪ್ರಾರಂಭಿಕ ನಿರ್ದಿಷ್ಟ ಕಾಲವು ಕ್ರಿ.ಶ 33ರ ವಸಂತ ಕಾಲವನ್ನು ಗುರುತಿಸುತ್ತದೆ

ಪರಿಗಣಿಸಿರುವ ಸತ್ಯವೇದದ ಕಾಲ-ಪುರಾವೆಗಳು ಕ್ರಿಸ್ತನ ಎರಡನೆಯ ಆಗಮನದಿಂದಲೇ ಅಂದರೆ 1874ರ ಅಕ್ಟೋಬರ್‌ನಿಂದ ಯುಕ್ತವಾಗಿದೆ, ಆಗ ದೇಶಗಳ ನ್ಯಾಯನಿರ್ಣಯವು ಕರ್ತನ ದಿನದ ಜ್ಞಾನಪ್ರಕಾಶದ ಪ್ರಭಾವದೊಡನೆ ಪ್ರಾರಂಭವಾಗುವುದು. ಇದನ್ನು ಮಹಾ ಪಿರಮಿಡ್‌ನಲ್ಲಿ ಈ ರೀತಿಯಾಗಿ ತೋರಿಸಲಾಗಿದೆ:

ಮಹಾಪಿರಮಿಡ್‌ನ ಪ್ರವೇಶದ್ವಾರದಿಂದ "ಅವರೋಹಣ ಮಾರ್ಗ"ವು "ಪಿಟ್" ಅಥವಾ "ಭೂಗರ್ಭದ ಕೊಠಡಿ"ಗೆ ನಡೆಸುವುದಾಗಿದ್ದು ಇದು ಸಾಮಾನ್ಯವಾಗಿ ಇಹಲೋಕಾಧಿಪತಿಯ ಅಧೀನದಲ್ಲಿರುವ ಲೋಕದ ಕ್ರಮವನ್ನು, ಮಹಾಸಂಕಟದ ಕಾಲವನ್ನು ಈ ಗುಂಡಿಯು (ದಿ ಪಿಟ್) ಪ್ರತಿನಿಧಿಸುವುದಾಗಿದೆ. ಅದರ ಕೆಡುಕನ್ನು ಅಂತ್ಯಗೊಳಿಸಲಾಗುವುದು. ನಮ್ಮ ಬಳಿಯಲ್ಲಿ ನಿಖರವಾದ ದಿನಾಂಕವಿದ್ದರೆ, ಪಿರಮಿಡ್‌ನಿಂದ ಪ್ರಾರಂಭವಾಗುವ ಬಿಂದುವು ಇರುವುದಾದರೆ, ಈ ಕಾಲವನ್ನು ಅಳೆಯುವುದು ಮತ್ತು ಈ ಆಪತ್ತಿನ ಗುಂಡಿಯಿಂದ ಯಾವಾಗ ತಲುಪುವುದೆಂದು ನಿರ್ಧರಿಸುವುದು ಸುಲಭವಾಗುತ್ತದೆ. 'ಗ್ರ್ಯಾಂಡ್ ಗ್ಯಾಲರಿ'ಯೊಂದಿಗಿರುವ 'ಮೇಲೇರುವ ಮಾರ್ಗ'ವು ಕೂಡುವ ಸ್ಥಳದಲ್ಲಿ ನಮಗೆ ಈ ದಿನಾಂಕದ ಗುರುತು ದೊರೆಯುತ್ತದೆ. ಆ ಅಂಶವು ಕ್ರಿಸ್ತನ ಜನನವನ್ನು ಅಲ್ಲಿಂದ ಇನ್ನೂ ಮುಂದಕ್ಕೆ 33* ಅಂಗುಲಗಳ ಮುಂದಕ್ಕೆ ಆತನ ಮರಣವನ್ನು ಸೂಚಿಸುತ್ತದೆ. ಹಾಗಾದರೆ, ನಾವು ಹಿಮ್ಮುಖವಾಗಿ 'ಮೊದಲ ಆರೋಹಣ ಮಾರ್ಗ'ದ ಕೆಳಕ್ಕೆ ಅದು 'ಪ್ರವೇಶದ್ವಾರ'ಕ್ಕೆ ಕೂಡುವ ಸ್ಥಳದವರೆಗೆ ಅಳೆಯುವುದಾದರೆ ನಮಗೆ ಅವರೋಹಣ (ಇಳಿಮಾರ್ಗ) ಮಾರ್ಗವನ್ನು ಗುರುತಿಸುವ ದಿನಾಂಕ ದೊರೆಯುತ್ತದೆ. ಈ ಅಳತೆಯು 1542 ಅಂಗುಲಗಳು, ಮತ್ತು ಕ್ರಿ.ಪೂ. 1542 [?] ವರ್ಷವನ್ನು ಆ ಬಿಂದುವಿನಲ್ಲಿನ ದಿನಾಂಕವಾಗಿ ಸೂಚಿಸುತ್ತದೆ. ನಂತರ ಆ ಬಿಂದುವಿನಿಂದ ಪ್ರವೇಶಮಾರ್ಗದ ಕೆಳಗಡೆ ಅಳತೆ ಮಾಡಲಾಗಿ, ಗುಂಡಿಯ ಪ್ರವೇಶದ ಅಳತೆಯನ್ನು ನೋಡಲಾಗಿ, ಅದು ಈ ಯುಗವು ಮುಗಿಯಲಿರುವಾಗ ಸಂಕಟ ಮತ್ತು ನಾಶನವನ್ನು, ಶಕ್ತಿಯಿಂದ ಕೆಡುಕಿನ ನಾಶನವನ್ನು ಪ್ರತಿನಿಧಿಸುತ್ತದೆ. ಅದು 3547 (3388.5) ಅಂಗುಲಗಳು ಎಂದು ಕಂಡುಕೊಳ್ಳುತ್ತೇವೆ. ಇವು 3547 [3388.5] ವರ್ಷಗಳ ಮೇಲಿನ ದಿನಾಂಕದ ಮೇಲಿನ ಕ್ರಿ.ಪೂ 1542 [?] ನ್ನು ಸಂಕೇತಿಸುತ್ತವೆ, ಈ ಲೆಕ್ಕಾಚಾರವು ಕ್ರಿ.ಶ.1915ನ್ನು ಸಂಕಟದ ಸಮಯದ ಪ್ರಾರಂಭ ವೆಂಬದಾಗಿ ಗುರುತಿಸುತ್ತದೆ. ಕ್ರಿ.ಪೂ 1542[?]ಕ್ಕೆ ಕ್ರಿ.ಶ. 1915 ವರ್ಷಗಳನ್ನು ಕೂಡಿಸುವಾಗ ಒಟ್ಟು 3457 [ನಿಜವಾಗಿ 3388.5] ವರ್ಷಗಳಾಗುತ್ತವೆ. ಹೀಗಾಗಿ ಪಿರಮಿಡ್ ಅಕ್ಟೋಬರ್ 1914 ಅದು ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂತಹ ಸಂಕಟದ ಪ್ರಾರಂಭ ದಿನವಾಗಿ ಸಾಕ್ಷಿಹೇಳುತ್ತದೆ – ಇಲ್ಲ, ಅನಂತರದಲ್ಲಿ ಎಂದೂ ಹೀಗಾಗುವುದಿಲ್ಲ. ಹಾಗಾಗಿ, ಈ 'ಸಾಕ್ಷ್ಯವು' ಈ ವಿಷಯದ ಬಗ್ಗೆ ಪೂರ್ಣವಾಗಿ ಸತ್ಯವೇದದ ಸಾಕ್ಷ್ಯವನ್ನು ಸಮಾನಾಂತರವಾದ ದೈವಿಕ ಪ್ರಕಟಣೆಯನ್ನು ದೃಢೀಕರಿಸುತ್ತದೆ. ಇದನ್ನು ಸತ್ಯವೇದ ಅಧ್ಯಯನ 2ನೇ ಸಂಪುಟದ 7ನೇ ಅಧ್ಯಾಯ (Scriptural Studies Vol. II, Chapter vii) ದ ಸಮಾನಾಂತರ ಹಂಚಿಕೆಯಲ್ಲಿ ತೋರಿಸಲಾಗಿದೆ.

ಯಾರೂ ಕೂಡಾ ಆ 'ಸುಗ್ಗಿಯ ನಾಲ್ವತ್ತು ವರ್ಷಗಳು' 1874ರ ಶರತ್ಕಾಲದಲ್ಲಿ ಪ್ರಾರಂಭ ವಾಯಿತೆಂದು ಅನುಮಾನಪಡಕೂಡದು. ಯಾಕೆಂದರೆ ಆಗ ಸಂಕಟವು ಇನ್ನೂ ಅಶುಭವಾದ ಮತ್ತು ಸಹಿಸಲಾಗದ ಸ್ಥಿತಿಯನ್ನು ಮುಟ್ಟಿರಲಿಲ್ಲ. ಮತ್ತು ಇನ್ನೂ ಕೆಲವು ವಿಷಯಗಳಲ್ಲಿ, ಆ ದಿನಾಂಕದಿಂದ ಸುಗ್ಗಿಯ ಕಾಲವು ಜ್ಞಾನದ ಅಭಿವೃದ್ಧಿಯ ಕಾಲವಾಗಿತ್ತು. ಮಹಾ ಪಿರಮಿಡ್‌ನ ಹೊರರೂಪ, ವಿವರಣೆಗಳೂ, 'ಗುಂಡಿಯ' ರೇಖಾಚಿತ್ರವೂ ಒಳಗೊಂಡಂತೆ ಎಲ್ಲವೂ ಈ ಅನ್ವಯಕ್ಕೆ ಯಾವುದೇ ಉಲ್ಲೇಖವಿಲ್ಲದಂತೆ ಪ್ರೊ॥ ಸ್ಮಿತ್‌ರವರಿಂದ ಕರಡು ಸರಣಿ ರಚಿಸಲ್ಪಟ್ಟಿತ್ತೆಂಬುದನ್ನೂ ನೆನಪಿನಲ್ಲಿಡಿರಿ.

ಇವುಗಳಲ್ಲದೆ, ಸಂಕಟದ ಸಮಯದ ಬಗ್ಗೆ ತೀರ್ಪು ಹೆಸರುಮಾತ್ರದ ಸಭೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಅದು ಪರಾಭವಗೊಳಿಸುವಿಕೆಗೆ ಸಿದ್ಧತೆಯಾಗಿದೆ, ಮತ್ತು ಬಂಡವಾಳ ಮತ್ತು ಕಾರ್ಮಿಕರ ಸ್ವಾರ್ಥತೆಯ ಕಚ್ಚಾಟದಲ್ಲಿ ಇವೆರಡೂ ಈಗ ತೊಂದರೆಯನ್ನು ಹೆಚ್ಚಿಸಲು ಸಂಘಟಿತವಾಗಿದೆ ಎಂಬುದನ್ನು ಕರ್ತನ ಮಾತುಗಳು ಸ್ಪಷ್ಟವಾಗಿ ತೋರಿಸಿಕೊಡುತ್ತವೆ ಎಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಈ ಅತ್ಯಂತ ಕೆಳಗಣ ಕೋಣೆ ಅಥವಾ 'ಗುಂಡಿಯ ಆಕಾರ' ಮತ್ತು ಅದರ ಪೂರ್ಣಗೊಳಿಸುವಿಕೆಯು ವಿಶಿಷ್ಟವಾಗಿ ಮಹತ್ವವುಳ್ಳದ್ದಾಗಿದೆ. ಅದರ ಮೇಲ್ಭಾಗ ಮತ್ತು ಪಕ್ಕದ ಭಾಗಗಳು ಕ್ರಮಬದ್ಧವಾಗಿದ್ದರೂ, ಅದಕ್ಕೆ

* [ಆವರಣ ತೋರಿಸಿರುವ ಎಲ್ಲಾ ಅಂಕಿಗಳೂ ಎಡ್ಗರ್ ಅವರ ಅಳತೆಗಳಾಗಿವೆ]

ನೆಲವಿಲ್ಲ – ಅದು ಒರಟಾಗಿದೆ, ಪೂರ್ಣಗೊಂಡಿಲ್ಲದ ತಳವು ಕೆಳಕೆಳಗೆ ಅದರ ಪೂರ್ವದಿಕ್ಕಿಗೆ ಕೆಳಗೆ ಕೆಳಗೆ ಇಳಿಯುತ್ತಿದ್ದು "ತಳವಿಲ್ಲದ ಗುಂಡಿ" ಎಂಬ ಹೆಸರನ್ನು ಕೆಲವೊಮ್ಮೆ ಅದಕ್ಕೆ ಅನ್ವಯಿಸಲಾಗುತ್ತದೆ. ಈ ಕೋಣೆಯು ಬಿಡುಗಡೆ ಮತ್ತು ಸ್ವಾತಂತ್ರ್ಯವನ್ನಲ್ಲದೆ ತೊಂದರೆಯ, ಉನ್ನತಿಯ ಹಾಗೂ ಅವನತಿಯ ಬಗ್ಗೆಯೂ ಮಾತನಾಡುತ್ತದೆ. 'ಪ್ರವೇಶ ಮಾರ್ಗ'ವು ಸಣ್ಣದಾಗಿರುವುದರಿಂದ ಒತ್ತಾಯಪೂರ್ವಕಾಗಿ ಬಗ್ಗಿದ ದೆಸೆಯಿಂದ ಉಳುಕಿದವನಾಗಿ ಮತ್ತು ಬಳಲಿದವನಾಗಿ ಯಾತ್ರಿಕನು ಅದನ್ನು ತಲುಪುವಾಗ ಆತನು ಇಲ್ಲಿ ಒಂದು ಹೆಜ್ಜೆ ಕೆಳಗಡೆ ಮಹಾ ಆಳವನ್ನು, ಸಮವಿಲ್ಲದ ಮತ್ತು ತುಂಡಾದ "ತ್ರಾಸದಾಯಕ ನೆಲದ" ಮೇಲೆ ಆತನು ಒಂದು ಮಹಾ ಎತ್ತರವನ್ನೂ ಕಾಣುತ್ತಾನೆ. ಈ ಕೋಣೆಯ ಒಂದು ಭಾಗವು ಅದರ ಮಾರ್ಗಕ್ಕಿಂತ ಎತ್ತರವಾಗಿದೆ. ಆತನ ಮಾನಸಿಕ ಶರೀರ ರಚನೆಗೆ ಇದೊಂದು ವಿಸ್ತಾರವಾದ ಕೋಣೆಯಾಗಿದೆ ಎಂಬ ಸಲಹೆ ನೀಡುತ್ತದೆ.

ಇದು ಸತ್ಯಕ್ಕೆ ಸಹ ಎಷ್ಟೋ ಹತ್ತಿರವಾಗಿದೆ. ಬಿಡುಗಡೆಯ ಉತ್ಸಾಹವು ನಾಗರೀಕ ದೇಶದ ಸಮೂಹಗಳಿಗೆ ಮುಟ್ಟಿದೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವಲ್ಲವೇ? ಸಮೂಹಗಳಿಂದ ಅನುಭವಿಸಿದ ಮತ್ತು ಕೇಳಿಕೊಂಡ ಬಿಡುಗಡೆಗಳ ಸುಸಂಗತವಾದ ಮತ್ತು ಅಸಂಗತವಾದ ಸಂಗತಿಗಳನ್ನು ಪರಿಗಣನೆ ಮಾಡಲು ನಾವಿಲ್ಲಿ ತಡೆ ಮಾಡಿರುವುದಿಲ್ಲ. – ತುದಿಯನ್ನು ಏರಿಸುವುದರ ಮೂಲಕ ಮತ್ತು ತಳವನ್ನು ನಿರುತ್ಸಾಹಗೊಳಿಸುವ ಮೂಲಕ ಇವೆರಡನ್ನೂ ಈ ಕೋಣೆಯಲ್ಲಿ ಸಲಹೆ ಮಾಡಲಾಗಿದೆ. ನಾವು ಕೇವಲ ನಮ್ಮ ಕಾಲದ ಬೆಳಕು – ಕರ್ತನ ದಿನವು – ಬಿಡುಗಡೆಯ ಚೈತನ್ಯವನ್ನು ಪ್ರೇರೇಪಿಸುತ್ತದೆ ಎಂಬ ಸತ್ಯವನ್ನು ಮಾತ್ರವೇ ಗಮನಿಸುತ್ತೇವೆ. ಮತ್ತು ಬಿಡುಗಡೆಯ ಚೈತನ್ಯವು ಹೆಮ್ಮೆಯ ಸಂಪರ್ಕಕ್ಕೆ ಬರುವಾಗ, ಸಂಪತ್ತು ಮತ್ತು ಅಧಿಕಾರವು ಇನ್ನೂ ಅವರ ನಿಯಂತ್ರಣದಲ್ಲಿರುವಾಗ, ತೊಂದರೆಗೆ ಕಾರಣವಾಗುವುದು. ದೇವರ ವಚನಗಳು ಸಂಭವನೀಯವಾಗಿ ಬಹಳ ಹೆಚ್ಚಾಗಿರುತ್ತದೆಂದು ನಮಗೆ ಇವು ದೃಢಪಡಿಸುತ್ತವೆ. ಇನ್ನೂ ಅಗಣನೀಯವಾಗಿ ಪ್ರಾರಂಭವಾಗಿದ್ದರೂ, ಅರಸರುಗಳು ಮತ್ತು ಚಕ್ರವರ್ತಿಗಳು ಹಾಗೂ ರಾಜಕೀಯ ಮುತ್ಸದ್ದಿಗಳು ಮತ್ತು ಬಂಡವಾಳಶಾಹಿಗಳು, ಎಲ್ಲಾ ಜನರೂ ಅದು ಬರುವುದನ್ನು ನೋಡುತ್ತಾರೆ ಮತ್ತು ಮನುಷ್ಯರು ಭಯ ಹಿಡಿದವರಾಗಿ ಲೋಕಕ್ಕೆ ಏನು ಸಂಭವಿಸುವುದೋ ಎಂದು ಎದುರು ನೋಡುತ್ತಾರೆ. ಏಕೆಂದರೆ ಆಕಾಶದ ಶಕ್ತಿಗಳು ಕದಲವುದು, ಮತ್ತು ಅಂತಿಮವಾಗಿ ತೆಗೆಯಲ್ಪಡುವುದು, ಪ್ರಸ್ತುತ ಕೆಡುಕಿನ ಲೋಕದಲ್ಲಿನ ನಾಗರೀಕ, ಸಾಮಾಜಿಕ ಮತ್ತು ಧಾರ್ಮಿಕವಾದ ಕೇಡಿನ ವ್ಯವಸ್ಥೆಗಳು ಅಲ್ಲಿ ವಿಸ್ಮೃತಿಯಲ್ಲಿ, ನಾಶನದಲ್ಲಿ ಮುಳುಗುವುದು. ಇದನ್ನು ಭೂಗರ್ಭ ಕೊಠಡಿ ಅಥವಾ 'ಗುಂಡಿ' (ಪಿಟ್) ಸಹ ಸಂಕೇತಿಸುತ್ತದೆ. ನಾವು ಈ ಗುಂಡಿಯನ್ನು ಅಗಾಧವಾದ ಸಂಕಟದ ಸಂಕೇತವಾಗಿದೆ ಎಂದು ಭಾವಿಸುವುದು ಮಾತ್ರವಲ್ಲ ಇದು ಪ್ರಸ್ತುತ ಸಂಗತಿಗಳ ಕ್ರಮವನ್ನು ತೆಗೆದುಹಾಕುತ್ತದೆ ಮತ್ತು ನಾಶಗೊಳಿಸುತ್ತದೆ (ಯಾಕೆಂದರೆ, ಉತ್ತಮ ಕ್ರಮದೊಂದಿಗೆ ಅದರ ಅಸಂಗತತೆಯು ದೇವರ ರಾಜ್ಯದಲ್ಲಿ ಸ್ಥಾಪಿತವಾಗಬೇಕಾಗಿದೆ). ಅದಲ್ಲದೆ ಕೆಳಮುಖದ ಕ್ರಮವನ್ನು ಹಿಂಬಾಲಿಸುವ ಪ್ರತಿಯೊಬ್ಬರ ಕೆಲವೊಂದು ಅಂತ್ಯದ ಸಂಕೇತವಾಗಿದೆ ಮತ್ತು ಸಹಸ್ರಮಾನದ ಸಂಪೂರ್ಣ ಜ್ಞಾನೋದಯದಲ್ಲಿದ್ದರೂ ಅವರ ಪಾಪಗಳನ್ನು ತೊಡೆದುಹಾಕಲು ಮತ್ತು ನೀತಿಯನ್ನು ಹಿಂಬಾಲಿಸಲು ತಿರಸ್ಕರಿಸುತ್ತಾರೆ.

ಈ ಸಂಬಂಧದಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸಿರಿ: 'ಪ್ರವೇಶದ ಹಾದಿ'ಯು ಕೆಳಗಡೆಗೆ ಅದು 'ಗುಂಡಿ'ಯ ಹತ್ತಿರವಾಗುವವರೆಗೆ ವಿಧಿಬದ್ಧವಾದ ಇಳಿಜಾರನ್ನು ಹೊಂದಿದೆ. ನಂತರದಲ್ಲಿ ಅದು ಇಳಿಜಾರಾಗುವುದು ನಿಂತುಹೋಗುತ್ತದೆ ಮತ್ತು ಸಮಮಟ್ಟವಾಗಿ ಸಾಗುತ್ತದೆ. ಭೂಗರ್ಭದ ಕೊಠಡಿಯಿಂದ ಅಥವಾ 'ಗುಂಡಿ'ಯಿಂದ ಸಮಮಟ್ಟದ ಕೂಡುವಿಕೆಯತನಕ ಮಾರ್ಗದ ಕೋನವಾಗುವ ಭಾಗದವರೆಗೆ ಹಿಮ್ಮುಖವಾಗಿ ಅಳತೆಮಾಡುವಲ್ಲಿ ಆ ದೂರವು 324 ಅಂಗುಲಗಳೆಂದು ನಮಗೆ ಕಂಡುಬರುತ್ತದೆ; ಇದರ ಪರಿಣಾಮವಾಗಿ ಮಾರ್ಗದ ಮಟ್ಟ ಭಾಗದ ಪ್ರಾರಂಭವು 1915ರಿಂದ 324 [351] ವರ್ಷಗಳ ಹಿಂದೆ ಎಂದು ಗುರುತಿಸುತ್ತದೆ. ಅಂದರೆ, 1590(?)ನೇ ವರ್ಷ, ಇದು ಆ ದಿನಾಂಕದಲ್ಲಿ (ಕ್ರಿ.ಶ. 1591ರಲ್ಲಿ) ಏನೋ ಒಂದು ಪ್ರಕಟವಾಗಿದೆ ಮತ್ತು ಅದು ನಾಗರೀಕತೆಯ ಮೇಲೆ ಬಹಳಷ್ಟು ಪ್ರಭಾವವನ್ನು ಬೀರಿದೆ ಮತ್ತು ಇದು ಯಾವುದೋ ಮಟ್ಟದಲ್ಲಿ ತನ್ನ ಕೆಳದಿಕ್ಕಿನ ಪ್ರವೃತ್ತಿಯನ್ನು ಪ್ರಮಾಣೀಕರಿಸಿದೆ ಎಂಬುದು ತೋರಿಬರುತ್ತದೆ. ಆ ಸಮಯದಲ್ಲಿ ಏನು ಪ್ರಕಟವಾಯಿತು? ಆ ದಿನಾಂಕದಿಂದ ಗುರುತಿಸಲ್ಪಟ್ಟ ಅಂತಹ ಯಾವ ಮಹಾ ಆಂದೋಲನದ ಅಂಥಾಃ ಪ್ರಭಾವವಿದೆ?

ದುರದೃಷ್ಟವಶಾತ್, ಈ ಅವರೋಹಣ (ಇಳಿ) ಮಾರ್ಗ ಭಾಗದ ಸರಿಯಾದ ಅಳತೆ ನಮಗೆ ಕಂಡುಬರುವುದಿಲ್ಲ ಮತ್ತು ನಾವು ಪ್ರೊ॥ ಸ್ಮಿತ್‌ರವರ ರೇಖಾಚಿತ್ರಗಳು ಕಾಗದದ ಅಳತೆಗಳನ್ನು ಸಮರ್ಥಿಸಲು ಮತ್ತು ಅವುಗಳ ಮೇಲೆ ವಿಶ್ವಾಸವಿಡುವಂತೆ ಸಾಕಾಗುವಷ್ಟು ನಿಖರವಾಗಿಲ್ಲ ಎಂಬುದು ನಮಗೆ ಮನದಟ್ಟಾಗಿದೆ. ದೃಢಪಡದ ಅಳತೆಯು 324 ಪಿರಮಿಡ್ ಇಂಚುಗಳು (Py. Inches). ಅದನ್ನು ಹಿಮ್ಮುಖವಾಗಿ ಅಳೆದಾಗ ಕ್ರಿ.ಶ. 1590ನೇ ವರ್ಷದ ಬಗ್ಗೆ ಅಥವಾ ಷೇಕ್ಸ್‌ಪಿಯರ್ ದಿನದ (Shekespeare's day) ಬಗ್ಗೆ ಸೂಚಿಸುತ್ತದೆ. ಆದರೆ ನಾವು ಈ ಸಲಹೆಗೆ ಯಾವುದೇ ತೂಕ ನೀಡುವುದಿಲ್ಲ.

ಒಂದು ಸಂಗತಿ ನಿಶ್ಚಯವಾಗಿದೆ, ಕೆಳಗಣ ಆವರೋಹಣಮಾರ್ಗವು ಲೋಕದ ಕ್ರಮವನ್ನು ಪ್ರತಿನಿಧಿಸುತ್ತದೆ, ಆರೋಹಣ ಮಾರ್ಗವು 'ಕರೆಯಲ್ಪಟ್ಟ ಸಭೆ'ಯ ಕ್ರಮವನ್ನು ಪ್ರತಿನಿಧಿಸುತ್ತದೆ. ಕೆಳಗಿನಿಂದ ಸಮಮಟ್ಟವಾದ ಹಾದಿಯು ನಂತರದಲ್ಲಿ ನೈತಿಕ ಅಥವಾ ರಾಜಕೀಯ ಜ್ಞಾನೋದಯವನ್ನು ಅಥವಾ ಕೆಳಗಣ ಮಾರ್ಗಕ್ಕೆ ಅನುಕೂಲಕರವಾಗಿ ತಡೆಯನ್ನೊಡುವ ಅಭಿಪ್ರಾಯವನ್ನುಂಟುಮಾಡುತ್ತದೆ.

ಹದಿನಾರನೆಯ ಶತಮಾನದ ಪ್ರೊತಸ್ತಾಂತ ಸುಧಾರಣೆಯು ನಿಜವಾಗಿಯೂ ಲೋಕದ ಅಭ್ಯುಧಯವನ್ನು ಎಲ್ಲಾ ರೀತಿಯಲ್ಲಿ, ಪರೋಕ್ಷವಾಗಿ ನಿರ್ವಹಿಸಿದೆ. ಅದು ಅದರ ತಿಳಿಗೇಡಿತನ ಮತ್ತು ಮೂಢನಂಬಿಕೆಯ ನೈತಿಕ ವಾತಾವರಣವನ್ನು ಬೇಧಿಸಿದೆ. ಮತ್ತು ರೋಮನ್ ಕೈಥೋಲಿಕರಿಂದಲೂ, ಪ್ರೊತಸ್ತಾಂತರಿಂದಲೂ ವಿಶ್ವದ ಪ್ರಗತಿಯ ನೂತನ ಶಕವನ್ನು ಗುರುತಿಸಿರುವುದಾಗಿ ಒಪ್ಪಿಗೆ ಪಡೆದಿದೆ.

ಕೆಲವರು ಮಾಡುವಂತೆ ನಾವು ನಮ್ಮ ದಿನಗಳಲ್ಲಿ ಎಲ್ಲವೂ ಕೆಳಮುಖವಾಗಿರದೆ ಮೇಲ್ಮುಖವಾಗಿದೆ ಎಂದು ಹೇಳಿಕೊಳ್ಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಾವು ನಮ್ಮ ದಿನಗಳಲ್ಲಿ ಹಲವಾರು ಸಂಗತಿಗಳನ್ನು ನೋಡುತ್ತೇವೆ, ಅವುಗಳಿಗೆ ನಾವು ನಾಗರೀಕರು ಎಂದು ಸಮ್ಮತಿಸಲು ಸಾಧ್ಯವಿಲ್ಲ. ಅವುಗಳು ದೈವಿಕ ಚಿತ್ತಾನುಸಾರವಾಗಿವೆ ಎಂದೂ ಹೇಳುವುದಿಲ್ಲ, ನಾವು ಈ ಪ್ರಪಂಚದಲ್ಲಿ ಪ್ರಚಲಿತವಾಗಿರುವ ಮಾನವೀಯ ದೃಷ್ಟಿಕೋನದ ಸರಹದ್ದನ್ನು ನೋಡುತ್ತೇವೆ. ಅದು ನಮ್ಮ ಕರ್ತನಾದ ಯೇಸುಕ್ರಿಸ್ತನ ಧರ್ಮದಿಂದ ದೂರವಿರುವಾಗ, ಹಿಂದಿನ ತಿಳಿಗೇಡಿ ಮೂಢನಂಬಿಕೆಗಳಲ್ಲಿ ಬಹಳಷ್ಟು ಮುಂದುವರೆದಿದೆ.

ನಿಜವಾಗಿಯೂ, ಈ ಲೋಕದ ಸಾಮಾಜಿಕ ಅಭಿವೃದ್ಧಿಯೇ "ವಿಕಾಸವಾದ"ಕ್ಕೆ ಎಡೆಮಾಡಿ ಕೊಟ್ಟಿರುವುದಾಗಿ ಈ ಲೋಕದ ಸಾಮಾಜಿಕ ಬೆಳವಣಿಗೆಯಾಗಿದೆ, ಎಂದು ಅನೇಕರು ತಿಳಿದು ಈ ಪ್ರಪಂಚವು ತ್ವರಿತವಾಗಿ ಉತ್ತಮವಾಗಿ ಸಾಗುತ್ತಿದೆ, ಅದಕ್ಕೆ ರಕ್ಷಕನ ಮತ್ತು ಆತನ ವಿಮೋಚನಾ ಕಾರ್ಯದ ಅವಶ್ಯಕತೆ ಇಲ್ಲ ಮತ್ತು ಪುನಃ ಸಂಧಾನದ ಕಾರ್ಯದಿಂದ ಯಾವ ರಾಜ್ಯವೂ ಬರಲಿರುವುದಿಲ್ಲ ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಅತಿ ಶೀಘ್ರದಲ್ಲಿಯೇ ಈ ಬಡ ಲೋಕವು ಏಳಿಗೆ ಮತ್ತು ಶುದ್ಧ ಸ್ವಾರ್ಥತೆಯ ಆಧಾರದಲ್ಲಿ ಅತೃಪ್ತಿಯು ಹೆಚ್ಚಳವಾಗಿದೆ ಮತ್ತು ಅದು ಸಂಭವನೀಯವಾಗಿ ಅರಾಜಕ ಸ್ಥಿತಿಯಾಗಿದೆ ಎಂದು ಅರಿತುಕೊಳ್ಳುತ್ತಾರೆ. ದೇವಜನರು ಮಾತ್ರವೇ ಆತನ ವಾಕ್ಯದಿಂದ ಮಾರ್ಗದರ್ಶನ ಹೊಂದುತ್ತಿರುವರು ಹಾಗೂ ಅದರ ಸರಿಯಾದ ಬೆಳಕಿನಲ್ಲಿ ಈ ಸಂಗತಿಗಳನ್ನು ನೋಡುತ್ತಾರೆ.

ಆದರೆ, ಮೇಲಣ ಅಳತೆಗಳು ಅವುಗಳ ಸಾಮರಸ್ಯಕರ ಸಾಕ್ಷ್ಯಗಳನ್ನು ನೀಡುತ್ತಿರುವಾಗ ಮತ್ತೊಂದು ಅಳತೆಯು ಸತ್ಯವೇದ ವಿವರಣೆಯ ಸಾಮರಸ್ಯಕ್ಕೆ ಬಹಳಷ್ಟು ಹೊರತಾಗಿದೆ ಎಂದು ತೋರಿಬರುತ್ತದೆ. ಅವುಗಳೆಂದರೆ, "ಮೊದಲ ಆರೋಹಣ ಮಾರ್ಗ" – ಇದು ಬಹುಶಃ ಇಸ್ರಾಯೇಲ್ಯರು ಐಗುಪ್ತದಿಂದ ವಿಮೋಚನೆ ಗೊಂಡಂದಿನಿಂದ ಯೇಸುಕ್ರಿಸ್ತನ ಜನನದ ಕಾಲದವರೆಗಿನ* ಅವಧಿಯನ್ನು ಪ್ರತಿನಿಧಿಸುವುದಾಗಿದೆ. ಈ ಸಮಯದ ಸತ್ಯವೇದದ ವಿವರಣೆಯನ್ನು ಈಗಾಗಲೇ ನೀಡಲಾಗಿದೆ.** ಅದರ ಯಥಾರ್ಥತೆಯನ್ನು ಹಲವು ಸಾರಿ ನಿರೂಪಿಸಲಾಗಿದ್ದು ಆ ಬಗ್ಗೆ ನಾವು ಅನುಮಾನಪಡಲಾಗದು. ಅದು ಐಗುಪ್ತದಿಂದ ಇಸ್ರಾಯೇಲ್ಯರು ವಿಮೋಚನೆಗೊಂಡಂದಿನಿಂದ ಕ್ರಿ.ಶ. 1

---

* ಈ ಅವಧಿಯು ಸಂಪುಟ II ಅಧ್ಯಾಯ VIIರಲ್ಲಿರುವುದಕ್ಕೆ ಒಂದೇ ಸಮವಾಗಿಲ್ಲ. ನಾವು ಅದನ್ನು ಯೆಹೂದ್ಯರ ಕಾಲವೆಂದು ಕರೆದಿದ್ದೇವೆ. ವಿಮೋಚನೆಯ 198 ವರ್ಷಗಳ ಹಿಂದೆ ಯಾಕೋಬನ ಮರಣದಲ್ಲಿ ಪ್ರಾರಂಭವಾಗಿ ನಂತರದಲ್ಲಿ ಮತ್ತು ಅವರು ನಿರಾಕರಿಸಿದ ಕರ್ತನ ಮರಣದವರೆಗೆ ಮುಕ್ತಾಯಗೊಳ್ಳಲಿಲ್ಲ. ಆತನು ಶಿಲುಬೆಗೆ ಹಾಕಲ್ಪಡುವ ಐದು ದಿನಗಳ ಹಿಂದೆಯೇ ಅವರ ಮನೆಗಳನ್ನು ಪಾಳುಬೀಳಿಸಿತು

** ಸಂಪುಟ II, ಪುಟಗಳು 230 –232

ರವರೆಗೆ, ಅಂದರೆ, ಕರಾರುವಕ್ಕಾಗಿ 1614 ವರ್ಷಗಳನ್ನು ತೋರಿಸುತ್ತದೆ. ಅದೇ ಸಮಯದಲ್ಲಿ 'ಮೊದಲ ಆರೋಹಣ ಮಾರ್ಗ'ದ ನೆಲರೇಖೆಯು 1542 ಅಂಗುಲಗಳೆಂದು ಅಳತೆ ಮಾಡಲಾಗಿದೆ. ನಂತರದಲ್ಲಿ, ನಾವು ನಮ್ಮ ಕರ್ತನ ಮತ್ತು ಪ್ರವಾದಿಯ ಮಾತುಗಳಿಂದ ನಿಸ್ಸಂದೇಹವಾಗಿ ತಿಳಿದಿರುವ ಧರ್ಮಶಾಸ್ತ್ರದ ಕಾಲ, ಮತ್ತು ಶಾರೀರಿಕ ಇಸ್ರಾಯೇಲ್ಯರ ಮೇಲಣ ಕೃಪೆ, ಇವುಗಳು ಕರ್ತನ ಜನನದಲ್ಲಿ ಮುಗಿದುಹೋಗಲಿಲ್ಲ, ಆದರೆ ಆತನ ಮರಣದ ಮೂರುವರೆ ವರ್ಷಗಳ ನಂತರದಲ್ಲಿ, ಅವರ ಎಪ್ಪತ್ತು ವಾರಗಳ ಕೃಪೆಯ ಅಂತ್ಯವು ಕ್ರಿ.ಶ. 36ರಲ್ಲಿ ಮುಗಿಯಿತು*. ಇದು ಆ ಕಾಲವನ್ನು ಐಗುಪ್ತದಿಂದ ವಿಮೋಚನೆಯಿಂದ ಅವರ ಕೃಪೆಯ ಅಂತ್ಯದವರೆಗೆ 1650 (1614 + 36) ವರ್ಷಗಳನ್ನಾಗಿ ಮಾಡುತ್ತದೆ. ಆದರೂ, ಒಂದು ಅರ್ಥದಲ್ಲಿ ನೂತನ ಹಂಚಿಕೆಯ ಭವ್ಯತೆ ಮತ್ತು ಆಶೀರ್ವಾದವು ಕ್ರಿಸ್ತನ ಜನನದಿಂದ ಪ್ರಾರಂಭವಾಯಿತು (ಲೂಕ 2:10–14; 25–38). ಆದಾಗ್ಯೂ ಮಹಾ ಪಿರಮಿಡ್ ಯಾವುದೋ ಒಂದು ರೀತಿಯಲ್ಲಿ ಇಸ್ರಾಯೇಲ್ಯರಿಗೆ ಪೂರ್ಣ ವಿಸ್ತಾರವಾದ ಕೃಪೆಯನ್ನು ನೀಡುತ್ತದೆ. ಕಡೆಯಲ್ಲಿ ಇದು ಬಹಳ ಚತುರತೆಯಿಂದ ನೀಡಲ್ಪಟ್ಟಿದೆ ಎಂದು ತೋರಿಬರುತ್ತದೆ. "ಗ್ರಾನೈಟ್ ಪ್ಲಗ್"ನ ನಿಖರವಾದ ಉದ್ದವು ಈ ಅವಧಿಯನ್ನು ಪೂರೈಸುವ ಪರಿಮಿತಿಯಲ್ಲಿತ್ತು ಎಂದು ಸಾಬೀತುಪಡುತ್ತದೆ. ನಂತರದಲ್ಲಿ ಆ ಪ್ಲಗ್, ಯಾರೂ ಅದನ್ನು ಸ್ಥಳಾಂತರಿಸಲು ಸಾಧ್ಯವಾಗದಂತೆ ಯಾಕೆ ಅಷ್ಟೊಂದು ಸುರಕ್ಷಿತವಾಗಿ ಯಾಕೆ ಜೋಡಿಸಲ್ಪಟ್ಟಿತ್ತು ಎಂಬುದನ್ನು ನಾವು ನೋಡುತ್ತೇವೆ. ಮಹಾ ಪ್ರವೀಣ ನಿರ್ಮಾಪಕನು ಅದರ ಸಾಕ್ಷ್ಯವನ್ನು ಕೇಳಲಿಕ್ಕೋಸ್ಕರ ಮತ್ತು ಅದರ ಯೋಜನೆ ಮತ್ತು ಘಟನಾವಳಿಗಳ ಬಗ್ಗೆ ಇಂದು ನಾವು ಸತ್ಯವೇದವನ್ನು ಸಮರ್ಥಿಸುವುದಕ್ಕೋಸರವೇ ಅದನ್ನು ಅಲ್ಲಿರುವಂತೆ ಇಟ್ಟಿದ್ದನು.

ಈ ಮಾರ್ಗವನ್ನು ಅದರ 'ಪ್ಲಗ್'ನೊಂದಿಗೆ ಅಳೆಯುವುದಕ್ಕೆ, ನಾವು ಅಳೆಯುವುದನ್ನೇ ದೂರದರ್ಶಕವೇನೋ ಎಂಬಂತೆ ಪರಿಗಣಿಸಬೇಕು, ಅದರಿಂದ ಆ 'ಪ್ಲಗ್ಗ'ನ್ನು ಅದರ ಮೇಲಿನ ತುದಿ ಅದರ ಕೆಳಗಣ ತುದಿ ಮೂಲದಲ್ಲಿ ಗುರುತಿಸಿದ ಜಾಗದವರೆಗೆ ಎಳೆಯಬೇಕು. 'ಗ್ರ್ಯಾಂಡ್ ಗ್ಯಾಲರಿ'ಯ 'ಉತ್ತರ ಪ್ರವೇಶದಿಂದ' ಗ್ರಾನೈಟಿನ 'ಪ್ಲಗ್'ನ ಕೆಳಗಣ ತುದಿಗೆ ಹೋಗುವ ದೂರವು 1470 ಅಂಗುಲಗಳು ಆಗುತ್ತವೆ. ಇದಕ್ಕೆ ನಾವು 'ಪ್ಲಗ್ಗಿನ' ಉದ್ದ 179 ಅಂಗುಲಗಳನ್ನು ಕೂಡಿಸುವುದಾದರೆ ಒಟ್ಟು 1649 ಅಂಗುಲಗಳಾಗುತ್ತವೆ. ಇದು 1649 ವರ್ಷಗಳನ್ನು ಪ್ರತಿನಿಧಿಸುತ್ತದೆ. ಮತ್ತು 1650ವರ್ಷದೊಂದಿಗೆ ಒಂದು ಅಂಗುಲದ ವ್ಯತ್ಯಾಸವನ್ನು ಸತ್ಯವೇದದ ಕಾಲಗಣನೆಯಲ್ಲಿ ಸುಲಭವಾಗಿ ಲೆಕ್ಕಹಾಕಬಹುದು. ಇದಕ್ಕೆ 'ಗ್ರಾನೈಟಿನ ಪ್ಲಗ್'ನ ಒಂದು ತುದಿಯನ್ನು ಕೆಲವರು ಅದರ ಸ್ಥಳದಿಂದ ಬಲಾತ್ಕರಿಸಲು ಪ್ರಯತ್ನಿಸಿದಾಗ ಅದು ಗಣನೀಯವಾಗಿ ಕಡಿದು ಹೋದದ್ದನ್ನು ನಾವು ನೆನಪಿಗೆ ತಂದುಕೊಳ್ಳ ಬೇಕಾಗುವುದು.

ಈ ರೀತಿಯಲ್ಲಿ ಶಿಲಾ 'ಸಾಕ್ಷ್ಯವು' ಕರಾರುವಕ್ಕಾಗಿ ಸತ್ಯವೇದದ ಸಾಕ್ಷ್ಯವನ್ನು ಸಮರ್ಥಿಸುತ್ತದೆ ಮತ್ತು ಐಗುಪ್ತದಿಂದ ಇಸ್ರಾಯೇಲ್ಯರ ವಿಮೋಚನೆಯಿಂದ ಅವರ ರಾಷ್ಟ್ರೀಯ ಕೃಪೆಯವರೆಗೆ** ಅಂದರೆ ಕ್ರಿ.ಶ. 36ರವರೆಗೆ 1650 ವರ್ಷಗಳಾಗುತ್ತವೆ. ಆದರೆ, ಯಾರೂ ಈ ಅವಧಿಯನ್ನು ಕ್ರೈಸ್ತ ಮತ್ತು ಯೆಹೂದ್ಯ ಹಂಚಿಕೆಗಳಲ್ಲಿ ಸಮಾನಾಂತರವಾಗಿ ತೋರಿಸಿರುವುದರೊಂದಿಗೆ ತಪ್ಪಾಗಿ ಲೆಕ್ಕಮಾಡುವುದು ಬೇಡ. ಅದು ಎರಡೂ ಕಾಲಗಳು ಒಂದೊಂದು 1845 ವರ್ಷಗಳು ಎಂದು ತೋರಿಸುತ್ತವೆ. ಒಂದು ಯಾಕೋಬನ ಮರಣದಿಂದ ಕ್ರಿ.ಶ. 33ರವರೆಗೆ ಮತ್ತೊಂದು ಕ್ರಿ.ಶ. 33ರಿಂದ 1878ರವರೆಗೆ.

ಇದು ಐಗುಪ್ತದ ವಿಮೋಚನೆಯಿಂದ ಕರ್ತನ ಜನನದವರೆಗಿನ ಅವಧಿಯನ್ನು ಮರೆಮಾಚುವ (ಸೂಕ್ತ ಸಮಯದಲ್ಲಿ ಸತ್ಯವೇದದ ಸಾಕ್ಷ್ಯಕ್ಕೆ ಸಮರ್ಥನೆ ಯಾಗಲಿದೆ) ಮತ್ತು ಅವಧಿಯ ವಿಸ್ತಾರವನ್ನು ಒದಗಿಸುವ ಒಂದು ಚತುರ ಮಾರ್ಗ ಮಾತ್ರವಲ್ಲ, ಆದರೆ ಜಾಗರೂಕ ಓದುಗನು ಇದನ್ನು ಈ ರೀತಿಯಾಗಿ ಎರಡು ಕಾರಣಗಳಿಗಾಗಿ ಮಾಡಿದ್ದಿರಬಹುದೆಂದು ಮನಸಾರೆ ಕಂಡುಕೊಳ್ಳುತ್ತಾನೆ. ಮೊದಲನೆಯದು, ಯೆಹೂದ್ಯ (ಯುಗ) ಹಂಚಿಕೆಯು ಮತ್ತು ಕೃಪೆಯು ಐಗುಪ್ತದಿಂದ ಇಸ್ರಾಯೇಲ್ಯರ ವಿಮೋಚನೆಗೆ ಮುನ್ನವೇ ಯಾಕೋಬನ ಮರಣದಲ್ಲಿ ಪ್ರಾರಂಭವಾದುದು ಮಾತ್ರವಲ್ಲ, ಕ್ರೈಸ್ತ ಹಂಚಿಕೆಯ ಸಮಾನಾಂತರವಾಗಿ ಅದು ನಮ್ಮ ಕರ್ತನ ಈ ಐಹಿಕ ಜೀವನದ ಮೂವತ್ತು ಮೂರುವರ್ಷಗಳಲ್ಲಿ ಸೇರಿಕೊಂಡು ಮುಂದುವರೆಯಿತು ಎಂಬುದು ಮತ್ತು ಎರಡನೆಯದಾಗಿ, ಮೊದಲನೆಯ "ಆರೋಹಣ ಮಾರ್ಗ"ವನ್ನು ವರ್ಷ–ಅಂಗುಲಗಳಲ್ಲಿ ಸಾಕಷ್ಟು ಮಟ್ಟಿಗೆ

*** ಸಂಪುಟ II , ಅಧ್ಯಾಯ IIನ್ನು ನೋಡಿರಿ

**** ಸಂಪುಟ II, ಅಧ್ಯಾಯ IIIನ್ನು ನೋಡಿರಿ.

ಯೆಹೂದ್ಯರ ಕಾಲವನ್ನು ಪ್ರತಿನಿಧಿಸುವಂತೆ ಮಾಡಿರುವುದು. ಪಿರಮಿಡ್‌ಅನ್ನು ಇನ್ನೂ ಉದ್ದವಾಗಿ ಮಾಡುವ ಅಗತ್ಯವುಂಟಾಗಿರುತ್ತಿತ್ತು. ಹಾಗೇನಾದರೂ ಆಗಿದ್ದರೆ ಅದರ ವೈಜ್ಞಾನಿಕ ಲಕ್ಷಣಗಳು ಮತ್ತು ಪಾಠಗಳು ನಾಶವಾಗಿರುತ್ತಿತ್ತು.

ನಾವೀಗ "ಮೊದಲನೆಯ ಆರೋಹಣ ಮಾರ್ಗ"ದ ಕೊನೆಯಲ್ಲಿರುವ "ಭವ್ಯ ಮೊಗಸಾಲೆ" (ಗ್ರ್ಯಾಂಡ್ ಗ್ಯಾಲರಿ)ಯನ್ನು ಪರೀಕ್ಷಿಸೋಣ ಮತ್ತು ಅದರ ಸಾಂಕೇತಿಕ ಸಾಕ್ಷ್ಯವನ್ನು ಸಹ ಗಮನಿಸೋಣ. ಅದು 'ಮೊದಲ ಆರೋಹಣ ಮಾರ್ಗ'ಕ್ಕಿಂತ ಏಳು ಪಟ್ಟು ಎತ್ತರವಾಗಿದೆ. ಅದರ ಮೃದುವಾದ, ಹೆಚ್ಚು ಹೊಳಪಿಸಿರುವ, ಒಮ್ಮೆ ಸುಂದರವಾಗಿದ್ದ ಕೆನೆ ಬಣ್ಣದ ಸುಣ್ಣಕಲ್ಲುಗಳ ಗೋಡೆಗಳಲ್ಲಿ ಒಂದರ ಮೇಲೊಂದು ಚಾಚಿಕೊಂಡಿರುವ ಏಳು ಶ್ರೇಣಿಗಳಿವೆ. ಅದು ಬಹಳ ಕಿರಿದಾಗಿದ್ದರೂ ಇಪ್ಪತ್ತೆಂಟು ಅಡಿ ಎತ್ತರವಿದೆ, ಮತ್ತು ಎಲ್ಲಾ ಕಡೆಗಳಲ್ಲಿಯೂ ಕೇವಲ ಆರು ಅಡಿ ಅಗಲವಿದೆ, ಆದರೆ ನೆಲದಲ್ಲಿ ಮೂರು ಅಡಿಗೆ ಮತ್ತು ಮೇಲ್ಛಾವಣಿಯಲ್ಲಿ ಇನ್ನೂ ಕಡಿಮೆ ಸಂಕುಚಿತಗೊಂಡಿದೆ. ಹದಿನೈದನೆಯ ಶತಮಾನದ ಪ್ರೊ॥ ಗ್ರೀವ್ಸ್ ಎಂಬುವವರು ಅದನ್ನು ಹೀಗೆ ವಿವರಿಸಿದ್ದಾರೆ :–

"ಇದೊಂದು ವೈಭವಯುತವಾದ ಕೆಲಸವಾಗಿದೆ, ಕಲೆಯ ಕುತೂಹಲಕತೆಯಿಂದಲೂ, ವಸ್ತುಗಳ ಸಿರಿವಂತಿಗೆಯಿಂದಲೂ ಅತ್ಯಂತ ಬೆಲೆಬಾಳುವ ಮತ್ತು ಸೊಗಸಾದ ಕಟ್ಟಡಗಳಿಗೆ ಕೆಳಮಟ್ಟದಲ್ಲ. ಈ ಉಪ್ಪರಿಗೆ (ಗ್ಯಾಲರಿ) ಅಥವಾ ಮೊಗಸಾಲೆ (ಕಾರಿಡಾರ್) ಅಥವಾ ಬೇರೆ ಯಾವುದರ ಬಗ್ಗೆಯಾದರೂ ನಾನು ತಿಳಿಸುವಾಗ ಅದು ಶ್ವೇತವರ್ಣದ ಅಮೃತ ಶಿಲೆಯಿಂದ (ಸುಣ್ಣ ಕಲ್ಲಿನಿಂದ) ಕಟ್ಟಲ್ಪಟ್ಟಿದೆ. ಅದನ್ನು ಸಮವಾಗಿ ವಿಶಾಲವಾದ ಚೌಕಾಕಾರದ ತುಂಡುಗಳನ್ನಾಗಿ ಕಡಿಯಲಾಗಿದೆ. ಕಲ್ಲು ಹಾಸಿಗೆಯಲ್ಲಿರುವ ಅಂಥಾಃ ವಸ್ತುಗಳು ಮೇಲ್ಛಾವಳಿಗೆ ಅದೇ ರೀತಿಯಲ್ಲಿರುತ್ತದೆ ಮತ್ತು ಪಕ್ಕದ ಗೋಡೆಗಳು ಕೂಡಾ ಅದೇ ರೀತಿಯ ಪಾರ್ಶ್ವವುಳ್ಳದ್ದಾಗಿವೆ. ಜೋಡಿಸುವ ಸ್ಥಳದ ಹಣಿಗೆಯು ಬಹಳ ಹತ್ತಿರವಿದ್ದು ಅವುಗಳನ್ನು ಕುತೂಹಲಕಾರಿ ಕಣ್ಣುಗಳಿಗೆ ವ್ಯತ್ಯಾಸವನ್ನು ಗ್ರಹಿಸಲಾರದಾಗಿದೆ. ಅದು ಮಾರ್ಗವನ್ನು ಜಾರುವುದಾಗಿ, ಕಷ್ಟಕರವಾಗಿ ಮಾಡುವುದಾದರೂ ಪೂರ್ಣ ರಚನೆಗೆ ಸೊಬಗನ್ನು ಕೂಡಿಸುತ್ತದೆ ಮತ್ತು ಅದು ದಿನ್ನೆಯೂ ಏರುವಿಕೆಯ ಉಬ್ಬೂ ಆಗಿದೆ.... ಸುಣ್ಣಕಲ್ಲಿನ ಎರಕ ಹೊಯ್ಯುವಿಕೆ ಮತ್ತು ಅಣಿಗೊಳಿಸುವಿಕೆಯಲ್ಲಿ ಎರಡೂ ಪಕ್ಕದ ಗೋಡೆಗಳಲ್ಲಿ ಒಂದು ವಾಸ್ತುಶಿಲ್ಪವಿದೆ. ನನ್ನ ತೀರ್ಮಾನದಲ್ಲಿ ಅದು ಬಹಳ ಮನೋಹರವಾಗಿದೆ, ಎಲ್ಲಾ ಕ್ರಮಗಳೂ, ಪಂಕ್ತಿಗಳೂ ಕೇವಲ ಏಳು ಆಗಿವೆ (ಕಲ್ಲುಗಳು ಅಷ್ಟು ದೊಡ್ಡವು) ಮತ್ತು ಇಡಲ್ಪಟ್ಟಿವೆ ಮತ್ತು ಒಂದರ ಮೇಲೊಂದು ಮೂರು ಅಂಗುಲಗಳಷ್ಟು ಬಾಗಿದೆ. ಅತ್ಯಂತ ಮೇಲಿನ ಶ್ರೇಣಿಯ ತಳವು ಮುಂದಿನದರ ತುದಿಯ ಮೇಲೆ ಬಾಗಿಕೊಂಡಿದೆ. ಉಳಿದವುಗಳು ಕೆಳಗಿಳಿಯುವಾಗ ಅದೇ ಕ್ರಮದಲ್ಲಿರುತ್ತವೆ".

ಮತ್ತು ಪ್ರೊ॥ ಸ್ಮಿತ್‌ರವರು ಅವುಗಳನ್ನು ಚಿತ್ರದ ಮೂಲಕ ಸೊಗಸಾಗಿ ಪ್ರತಿನಿಧಿಸುವುದು ಸಾಧ್ಯವಿಲ್ಲ ಎಂದು ಸ್ವಚ್ಛವಾಗಿ ಈ ರೀತಿಯಾಗಿ ಹೇಳುತ್ತಾರೆ –

"ಕಿರಿದಾದ ಅಗಲ, ಎತ್ತರದ ಕಮಾನು ಮತ್ತು ಉದ್ದನೆಯ ನೆಲದ ಅತ್ಯಂತ ವಿಚಿತ್ರವಾದ ಇಳಿಜಾರಿನ ಕಾರಣದಿಂದಾಗಿ ಅದು ಸಾಂಪ್ರದಾಯಿಕ ಚಿತ್ರಗಳ ವ್ಯಾಪ್ತಿಗಿಂತ ಮೇಲಿರುತ್ತದೆ; ಒಂದು ನೆಲವನ್ನು ಅದರ ಉತ್ತರ ತುದಿಯಿಂದ ದಕ್ಷಿಣ ದಿಕ್ಕಿಗೆ ನೋಡಿದಾಗ, ಕತ್ತಲೆಯ ಮೂಲಕ ಸ್ಪಷ್ಟವಾಗಿ ಎಂದೆಂದಿಗೂ ಏರುತ್ತಾ, ಏರುತ್ತಾ ಇರುವಂತೆ ಕಾಣುತ್ತದೆ; ಮತ್ತು ಲಂಬ ಸಮತಲದಲ್ಲಿ ಚಿತ್ರಿಸಲು ಯಾವುದೇ ಕಲಾವಿದನ ದೃಷ್ಟಿಕೋನವು ಆ ಮಹಡಿಯ ಒಂದು ಸಣ್ಣ ಭಾಗಕ್ಕಿಂತ ಹೆಚ್ಚಿನದನ್ನು ಇಡೀ ಕ್ಯಾನ್ವಾಸ್‌ನ ಮೂಲಕ ಮೇಲಕ್ಕೆ ಮೇಲಕ್ಕೆ ಹೋಗಿ ತುದಿಯನ್ನು ಮುಟ್ಟುವುದನ್ನು ಚಿತ್ರದ ಮೂಲಕ ಪ್ರತಿನಿಧಿಸಲು ನಿರೀಕ್ಷಿಸಲಾರನು. ಗ್ಯಾಲರಿಯ ದಕ್ಷಿಣ ತುದಿಯಿಂದ ಉತ್ತರದ ಕಡೆಗೆ ನೋಡುವಾಗ, ನೀವು ತಕ್ಷಣ ನೆಲವನ್ನು ಕಾಣದೇ ಹೋಗುತ್ತೀರಿ, ಮತ್ತು ನಿಮ್ಮ ಕಣ್ಣುಗಳ ಮಟ್ಟದಲ್ಲಿ, ಈ ದೂರದಲ್ಲಿ, ಕಡಿದಾದ ಅವರೋಹಣದ ಛಾವಣಿಯ ಒಂದು ಭಾಗ ಕಾಣಿಸುತ್ತದೆ. ಇಲ್ಲದಿದ್ದರೆ, ಅದು ಎತ್ತರವಾದ, ಗಾಢವಾದ, ಅಂಧಕಾರದ ಗೋಡೆಗಳು ಗಂಭೀರವಾಗಿ ವ್ಯಾಪಿಸಿಕೊಂಡಿದೆ, ಅದು ನಿಮ್ಮನ್ನು ಎರಡೂ ಬದಿಯಲ್ಲಿ ಹಾದುಹೋಗುತ್ತದೆ; ಆದರೆ ಎಲ್ಲವೂ ಅಹಿತವಾಗಿ ಇಳಿಜಾರಾಗಿದೆ, ಒಂದು ದಿಕ್ಕಿನಲ್ಲಿ ಶ್ರಮ, ಇನ್ನೊಂದು ದಿಕ್ಕಿನಲ್ಲಿ ಅಪಾಯ ಮತ್ತು ಎಲ್ಲೆಡೆ ಶಕ್ತಿಯ ಪರ್ವತ ಇರುತ್ತದೆ" ಎಂದು ಹೇಳುತ್ತದೆ.

ಈ 'ಗ್ರ್ಯಾಂಡ್ ಗ್ಯಾಲರಿ'ಯಲ್ಲಿ ದೀರ್ಘವಾದ ಸುವಾರ್ತಾಯುಗದಲ್ಲಿರುವ ಜಯಶಾಲಿಗಳಾದ ಚಿಕ್ಕ ಹಿಂಡಿನ ಮತ್ತು ಸತ್ಯವಾದ ಕ್ರೈಸ್ತ ಸಭೆಯ ಕ್ರಮದ ಹಾದಿಯ ಬಗ್ಗೆ ಎಂಥಾಃ ಅದ್ಭುತವಾದ ದೃಷ್ಟಾಂತವು ನೀಡಲ್ಪಟ್ಟಿದೆ! ಅದು ಒಮ್ಮೆ ಸುಂದರವಾದ, ಕೆನೆ ಬಿಳುಪಿನ ಗೋಡೆಗಳು ಮತ್ತು ಮೇಲ್ಛಾವಣಿ, ನಿಯಮಿತವಾಗಿ ಒಂದರ ಮೇಲೊಂದು ಚಾಚಿಕೊಂಡು ಕುಳಿತಿರುವ

ಕಲ್ಲುಗಳು, ಎಲ್ಲವೂ ಮೇಲ್ಮುಖವಾಗಿ ವಾರೆಯಾಗಿರುವುದು ಕೆಲವರು ಊಹಿಸವಂತೆ ನಾಮಾಂಕಿತ ಸಭೆಯ ಚರಿತ್ರೆಯನ್ನು ನೀಡುವುದಿಲ್ಲ – ಇಲ್ಲದಿದ್ದರೆ ಕ್ರಮವಾಗಿಯೂ ಮೇಲ್ಮುಖವಾಗಿಯೂ ಇರುವದನ್ನು ತೋರಿಸುತ್ತಿರಲಿಲ್ಲ. ಆದರೆ, ಅದು ಸುವಾರ್ತಾಯುಗದಲ್ಲಿ ದೇವರ ಮಹಾಅನುಗ್ರಹವನ್ನು ದಯಪಾಲಿಸಿದೆ ಎಂದು ತಿಳಿಸುತ್ತದೆ, ಸುವಾರ್ತಾಯುಗದಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟವರಿಗೆ ಷರತ್ತುಬದ್ಧವಾಗಿ ದೊರೆಯುವ ಕೆಲವೊಂದು ಸ್ವಾತಂತ್ರ್ಯಗಳಿಗೆ ಮತ್ತು ಸವಲತ್ತುಗಳಿಗೆ ಇರುವ 'ಮಹಾ ಕರೆಯ' ಬಗ್ಗೆ ನಮಗೆ ತಿಳಿಸುತ್ತದೆ. ಇದು ಬಾವಿಯಿಂದ ತೆರೆಯಲ್ಪಟ್ಟ ಈಡುಬಲಿಯ ನಿಮಿತ್ತ ಮುಕ್ತಗೊಂಡಿದೆ.

ಈ 'ಗ್ರ್ಯಾಂಡ್ ಗ್ಯಾಲರಿ'ಯ ಅತ್ಯುನ್ನತ ಎತ್ತರವು, ಸಾಗುವ ಮಾರ್ಗದ ಎತ್ತರಕ್ಕಿಂತ ಏಳುಪಟ್ಟು ಹೆಚ್ಚಾಗಿದ್ದು ಯೆಹೂದ್ಯ ಹಂಚಿಕೆಯನ್ನು ಪ್ರತಿನಿಧಿಸುತ್ತದೆ. (ಏಳು ಎಂಬುದು ಸಂಪೂರ್ಣತೆಯ, ಪರಿಪೂರ್ಣತೆಯ ಸಂಕೇತವಾಗಿದೆ) ಮತ್ತು ಅಬ್ರಹಾಮನ ವಾಗ್ದಾನದಲ್ಲಿರುವ ಆಶೀರ್ವಾದದ ಪೂರ್ಣತೆಯನ್ನೂ ಪ್ರತಿನಿಧಿಸುತ್ತದೆ. ಇದು ನಿಜವಾಗಿಯೂ ಸುವಾರ್ತಾ ಸಭೆಯ ಮುಂದೆ ಇಡಲ್ಪಟ್ಟಿದೆ. 'ಗ್ರ್ಯಾಂಡ್ ಗ್ಯಾಲರಿ'ಯ ಕೊನೆಯಲ್ಲಿರುವ 'ಅರಸನ ಕೊಠಡಿ'ಯು, ಪ್ರಸ್ತುತ ಮಹಾ ಕರೆಯು ನಂಬಿಗಸ್ತರನ್ನು ನಡೆಸುವ ಸಂತತಿಯ ಅಂತ್ಯವನ್ನು ಪ್ರತಿನಿಧಿಸುತ್ತದೆ, ಮತ್ತು ಈ 'ಅರಸನ ಕೊಠಡಿ'ಯು ನಾವು ಸಧ್ಯದಲ್ಲಿಯೇ ನೋಡುವಂತೆ ಸಭೆಯ ಅಂತಿಮ ವಿಧಿಯ ಸಂಕೇತವಾಗಿದೆ, ಗ್ಯಾಲರಿಯ ಪ್ರವೇಶದಲ್ಲಿರುವ 'ಈಡುಬಲಿ'ಯನ್ನು ಪ್ರತಿನಿಧಿಸುವ 'ಬಾವಿ'ಯಿಂದ ಅಲ್ಲಿ ಪ್ರವೇಶಿಸುವವರೆಲ್ಲರೂ ಗ್ರಹಿಸುವಂತೆ ನಮ್ಮ ನೀತಿನಿರ್ಣಯವನ್ನು ಸುಂದರವಾಗಿ ಸಾಂಕೇತಿಸಲ್ಪಟ್ಟಿದೆ. ಈ ರೀತಿಯಲ್ಲಿ ಮಹಾ ಪಿರಮಿಡ್ ನಮಗೆ "ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾ. 8:1) ಎಂದು ತಿಳಿಸುತ್ತದೆ.

ಸುವ್ಯಕ್ತವಾಗಿ ಕೊನೆ ಇಲ್ಲದ 'ಗ್ರ್ಯಾಂಡ್ ಗ್ಯಾಲರಿ'ಯ ಉದ್ದವು ಸುವಾರ್ತಾ ಯುಗದಲ್ಲಿ ಸಭೆಯ ವ್ಯಕ್ತಿಗತ ಸದಸ್ಯರಿಗೆ ಯಾವ ರೀತಿಯಲ್ಲಿ ಉದ್ದವಾಗಿತ್ತೆಂದು ಕಂಡುಬರುತ್ತದೆಂದು ತೋರಿಸುತ್ತದೆ. ಅದರ ಕಿರಿದಾಗಿರುವಿಕೆಯು 'ಜೀವಕ್ಕೆ ಹೋಗುವ ದಾರಿ ಇಕ್ಕಟ್ಟು' ಎಂದು ಪ್ರತಿನಿಧಿಸುತ್ತದೆ. ಮತ್ತು ಅದರ ಕಡಿದಾಗಿರುವಿಕೆಯು, ಮಾರ್ಗದಲ್ಲಿ ಮುಂದುವರೆಯುವಾಗ ಬೆನ್ನಟ್ಟುವ ಕಷ್ಟವನ್ನು ಮತ್ತು ತಮ್ಮ ಅಡ್ಡದಾರಿಗೆ ಹೋಗುವ ಹೆಜ್ಜೆಗಳನ್ನು ಎಚ್ಚರಿಕೆಯಿಂದ ಗಮನಿಸಲು ಸೋತು ಹೋಗುವವರಿಂದ ಉಂಟಾಗುವ ನಿರಂತರವಾದ ಗಂಡಾಂತರವನ್ನು ಪ್ರತಿನಿಧಿಸುತ್ತದೆ, ಆದಾಗ್ಯೂ, ದೇವರ ಕೃಪೆಯೆಂಬ ಈ ಗೋಡೆಗಳ ಸರಹದ್ದಿನೊಳಗೆ ಒಳ್ಳೆಯದಾಗಿ ಕೃಪೆಯಲ್ಲಿ ಬೆಳೆಯಲು ಮತ್ತು ಕಷ್ಟಕರವಾದ ಹಾದಿಯ ಹತ್ತುವಿಕೆಯಲ್ಲಿ ಮುಂದುವರೆಯುವವರೆಲ್ಲರ – ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರ ಸುರಕ್ಷತೆ ಮತ್ತು ರಕ್ಷಣೆಯಾಗಿರುತ್ತದೆ.


'ಗ್ರ್ಯಾಂಡ್ ಗ್ಯಾಲರಿ'ಯಿಂದ ಮೇಲಕ್ಕೆ ನೋಡುವಾಗ, ಅದಕ್ಕೆ ಒಂದು ಕೊನೆ ಹಾಗೂ ಪ್ರಾರಂಭ ವುಂಟೆಂಬುದನ್ನು ನಾವು ನೋಡುತ್ತೇವೆ. ಈ ರೀತಿಯಲ್ಲಿ ಸುವಾರ್ತಾ ಯುಗದಲ್ಲಿ ವಿಸ್ತರಿಸಲ್ಪಟ್ಟ ಹೆಚ್ಚಾದ ಮಹಾ ಮತ್ತು ಕೃಪಾಪೂರಿತವಾದ ಸವಲತ್ತುಗಳು ಯಾವುದೋ ಸಮಯದಲ್ಲಿ ಮುಗಿದುಹೋಗುತ್ತವೆ, ಕ್ರಿಸ್ತನೊಡನೆ ಆತನ 'ಮದಲಗಿತ್ತಿ'ಯಾಗುವ ಅದ್ಭುತವಾದ ಸಹಭಾಗತ್ವವು ಚಿಕ್ಕ ಹಿಂಡಿನ ಸಾಕಷ್ಟು ಮಂದಿ ಕರೆಯನ್ನು ಸ್ವೀಕರಿಸುವಾಗ ಮುಗಿದುಹೋಗುತ್ತದೆ. ಇದನ್ನೇ ಈ ಕಲ್ಲಿನ 'ಸಾಕ್ಷ್ಯ'ವು ದೃಷ್ಟಾಂತದ ಮೂಲಕ ನಮಗೆ ತೋರಿಸಿಕೊಡುತ್ತದೆ ಮತ್ತು ಲಿಖಿತ ವಾಕ್ಯಗಳು ಬಹಳ ಸರಳವಾಗಿ ಮಾಡುತ್ತವೆ, ನಾವು ಕಂಡುಕೊಂಡಂತೆ 'ಮಹಾಕರೆ'ಯ ಬಹಮಾನಕ್ಕಾಗಿ ಓಡುವ ಸವಲತ್ತು ಸುವಾರ್ತಾ ಯುಗಕ್ಕೆ ಮಾತ್ರವೇ ಎಂಬುದನ್ನು ತೋರಿಸುತ್ತವೆ. ನಮ್ಮ ನಾಯಕನಾದ ಕ್ರಿಸ್ತನಿಗೆ ಮೊದಲು – ಇದು ಈ ಹಿಂದೆ ಯಾರಿಗೂ ದಯಪಾಲಿಸಲ್ಪಡಲಿಲ್ಲ. ನಮ್ಮ ನಾಯಕನಾದ ಯೇಸುವು ಇದನ್ನು ಪಡೆದವರಲ್ಲಿಯೂ, ಅದರ ಸಮರ್ಪಣೆಯೆಂಬ ಷರತ್ತನ್ನು ಒಪ್ಪಿಕೊಳ್ಳುವದರಲ್ಲಿಯೂ ಮತ್ತು ಆ ಬಹುಮಾನಕ್ಕೆ ಪ್ರವೇಶಿಸುವವರಲ್ಲಿಯೂ ಮೊದಲಿಗನಾಗಿದ್ದಾನೆ. 'ಗ್ರ್ಯಾಂಡ್ ಗ್ಯಾಲರಿ'ಯ ದಕ್ಷಿಣ ತುದಿಯು ಸಕಾರಾತ್ಮಕವಾಗಿ ಕೊನೆಯನ್ನು ಅಥವಾ ಕರೆಯ ಮಿತಿಯನ್ನು ಗುರುತುಪಡಿಸುತ್ತದೆ ಮತ್ತು ಉತ್ತರ ತುದಿಯು ಆ ಕೃಪೆಯ ಕೊಡುಗೆಯನ್ನು ಗುರುತಿಸುತ್ತದೆ.

'ಗ್ರ್ಯಾಂಡ್ ಗ್ಯಾಲರಿ'ಯು ನಮ್ಮ ದೇವರ 'ಮಹಾಕರೆ'ಯನ್ನು ಪ್ರತಿನಿಧಿಸುವುದರಿಂದ, ನಾವು ಅದರಾಚೆ ನೋಡುವವರಾಗೋಣ ಮತ್ತು ಈ ಕರೆಯು ನಮ್ಮಲ್ಲಿನ ಪ್ರತಿಯೊಬ್ಬರನ್ನು ಯಾವುದಕ್ಕೆ ನಡೆಸುತ್ತದೆಂಬುದನ್ನು ಗಮನಿಸೋಣ. ನಾವು ಪರಿಶುದ್ಧ ಗ್ರಂಥದಲ್ಲಿ ಈಗಾಗಲೇ ನಾವುಗಳು ಕ್ರಿಸ್ತನೊಂದಿಗೆ ಶ್ರಮೆಯನ್ನನುಭವಿಸುವುದಕ್ಕಾಗಿ, ಆತನೊಂದಿಗೆ ಮರಣ ಹೊಂದುವುದಕ್ಕಾಗಿ, ನಂತರದಲ್ಲಿ ಆತನೊಂದಿಗೆ ಮಹಿಮೆಯನ್ನು ಪ್ರವೇಶಿಸುವುದಕ್ಕಾಗಿಯೂ

ಕರೆಯಲ್ಪಟ್ಟಿದ್ದೇವೆಂಬುದನ್ನು ನೋಡಿದ್ದೇವೆ. ಇವೆಲ್ಲವೂ ವಿಚಿತ್ರವಾದ ರೀತಿಯಲ್ಲಿ ಸಾಂಕೇತಿಸಲ್ಪಟ್ಟಿವೆ ಮತ್ತು ಇದರಿಂದ 'ಗ್ರ್ಯಾಂಡ್ ಗ್ಯಾಲರಿ'ಯ ಕೊನೆಯಲ್ಲಿರುವ 'ಅರಸನ ಕೊಠಡಿ'ಗೆ ಪ್ರವೇಶವನ್ನು ಪಡಕೊಂಡಿದ್ದೇವೆ ಎಂಬುದು ಎದ್ದುಕಾಣುವಂತೆ ಸಾಂಕೇತಿಸಲ್ಪಟ್ಟಿವೆ ಎಂಬುದನ್ನೂ ನಾವು ನೋಡಿದ್ದೇವೆ. 'ಮಹಾಕರೆ'ಯನ್ನು ಸ್ವೀಕರಿಸಿರುವವರು ಪರಲೋಕದ ಮಹಿಮೆಯನ್ನು ಪ್ರವೇಶಿಸುವ ಮಾರ್ಗವು 'ಅರಸನ ಕೊಠಡಿ'ಯಲ್ಲಿ ಚಿತ್ರೀಕರಿಸಲ್ಪಟ್ಟಿದೆ. ಆದರೆ ಅದು ನೇರವಾಗಿಯಲ್ಲ. ಮೊದಲಿಗೆ ಅವರು ಎಲ್ಲಾ ಅಂಶಗಳಲ್ಲೂ ಪರೀಕ್ಷೆಗೆ ಒಳಪಟ್ಟು ದೇವರ ಚಿತ್ತಕ್ಕೆ ವಿಧೇಯ ರಾಗಿದ್ದಾರೆಂಬುದು ತೋರಿಬರಬೇಕು. ಇಲ್ಲವಾದರೆ ಅವರು ಉಳಿದಿರುವ ವಿಶ್ರಾಂತಿಗೆ ಪ್ರವೇಶಿಸಲಾರರು. ಇದುವೇ, ಮಹಾ ಬಹುಮಾನಕ್ಕಾಗಿ ಓಡುವವರೆಲ್ಲರಿಗೆ ದೇವರ ವಾಕ್ಯದ ಬೋಧನೆ ಮತ್ತು ಅನುಭವವಾಗಿದೆ ಮತ್ತು ಇದು ಮಹಾ ಪಿರಮಿಡ್ಡಿನಲ್ಲಿ ವಿಶದಗೊಳಿಸಲ್ಪಟ್ಟಿದೆ. ಕರೆಯು ಪ್ರತಿಷ್ಠೆಪಡಿಸುವುದಕ್ಕೂ ಮತ್ತು ಸಮರ್ಪಣೆಯ ಪಾಠಗಳಿಗೂ ನಡೆಸುವಂತೆ 'ಗ್ರ್ಯಾಂಡ್ ಗ್ಯಾಲರಿ'ಯು ಸಹ ಇದನ್ನು ಸಂಕೇತಿಸುವ ಕೆಲವೊಂದು ಕೆಳಗಣ ಮಾರ್ಗಗಳಿಗೆ ನಡೆಸುತ್ತದೆ. ಅದರ ಮೇಲಣ ತುದಿಗೆ ಬಂದ ನಂತರ, ಯಾತ್ರಿಕನು 'Ante Chamber'ಗೆ ಹೋಗುವ ಬಾಗಿಲ ಬಳಿ ಅಥವಾ ಮಾರ್ಗದಲ್ಲಿ ಬಹಳ ಬಗ್ಗಿಕೊಂಡು ಕೆಳಕ್ಕೆ ಇಳಿಯಬೇಕಾಗುತ್ತದೆ. ಈ ಇಳಿಯೋಣವು ಪ್ರತಿಷ್ಠೆಪಡಿಸುವಿಕೆ ಅಥವಾ ಮಾನವ ಚಿತ್ತದ ಮರಣ, ಸ್ವಾರ್ಥತ್ಯಾಗದ ಪ್ರಾರಂಭ ಇವುಗಳನ್ನು ಸಂಕೇತಿಸುತ್ತದೆ. ದೈವಿಕ ಸ್ವಭಾವವನ್ನು ಪಡಕೊಳ್ಳುವವರೆಲ್ಲರನ್ನೂ ಇವುಗಳಿಗೆ ಕರೆಯು ಲಾಗುವುದು. ಈ ಸ್ವಾರ್ಥತ್ಯಾಗವು ಎಷ್ಟೆಂಬುದು ಕರೆಯನ್ನು ಸ್ವೀಕರಿಸಿದವರಿಗೆ ಮತ್ತು ಮಾನವ ಚಿತ್ತವನ್ನು ಒಪ್ಪಿಸಿಕೊಟ್ಟವರಿಗೆ ಮಾತ್ರವೇ ಗೊತ್ತಾಗುವುದು.

ಪ್ರತಿಷ್ಠೆಪಡಿಸುವಿಕೆಯನ್ನು ಚಿತ್ರಿಸುವ ಈ ಕೆಳಗಣ ಮಾರ್ಗವನ್ನು ಹಾದು ಹೋಗುವಾಗ ನಾವು 'Ante Chamber' ಎಂದು ಕರೆಯಲ್ಪಡುವಲ್ಲಿ ಇರುತ್ತೇವೆ. ಇಲ್ಲಿ ನೆಲವು ಸುಣ್ಣದ ಕಲ್ಲಾಗಿರುವುದರಲ್ಲಿ ಮುಕ್ತಾಯ ಗೊಳ್ಳುತ್ತದೆ. ಈ ಬಿಂದುವಿನಿಂದ ಮುಂದಕ್ಕೆ ಹೆಜ್ಜೆಯು ಗಟ್ಟಿಯಾದ ಗ್ರಾನೈಟಿನ ಮೇಲಿರುತ್ತದೆ. ಇದನ್ನು ನೂತನ ಸ್ಥಾಯಿ, 'ನೂತನ ಸೃಷ್ಟಿ'ಗಳ ಸ್ಥಾಯಿ ಎಂಬುದಾಗಿ ಅರ್ಥ ವಿವರಣೆ ಮಾಡಲಾಗುತ್ತದೆ. ಆದರೆ ನೂತನ ಸ್ಥಾಯಿಯನ್ನು ನೂತನ ಸೃಷ್ಟಿಯಾಗಿ ಪ್ರವೇಶಿಸಲು ಗ್ರಾನೈಟ್ ನೆಲದ ಮೇಲೆ ಕಾಲಿಟ್ಟಾಗ, ಗ್ರಾನೈಟಿನ ಬಲುದೊಡ್ಡ ಅಡ್ಡಿಯು ಗಮನಕ್ಕೆ ಬರುತ್ತದೆ. ಅದನ್ನ 'ಗ್ರಾನೈಟ್ ಲೀಫ್' ಎಂಬುದಾಗಿ ಹೇಳುತ್ತಾರೆ. ಇದು 'ಡ್ರಾಪ್–ಡೋರ್'ನಂತೆ ಭಾಗಶಃ ಮಾರ್ಗವನ್ನು ಮುಚ್ಚಿ ಇದೇ ತಾನೇ ಹಾದುಹೋದ ನಾಲವತ್ತನಾಲ್ಕು ಅಂಗುಲಗಳ ಎತ್ತರದ ಕೆಳಗಣ ಮಾರ್ಗವನ್ನು ಉಳಿಸುತ್ತದೆ. ನಾವು ಅದರಲ್ಲಿ ಪುನಃ ಬಾಗಿ ನಡೆಯಬೇಕು, ಆಗ ನಾವುಗಳು 'Ante Chamber'ನಲ್ಲಿ ಪ್ರತಿನಿಧಿಸುವ ಸವಲತ್ತುಗಳಲ್ಲಿ ಆನಂದಿಸಬಹುದು. ಈ 'ಗ್ರಾನೈಟ್ ಲೀಫ್' ದೇವರ ಚಿತ್ತವನ್ನು ಪ್ರತಿನಿಧಿಸುತ್ತದೆ, ಮತ್ತು ಇದೀಗ ತಾನೇ ಕೆಳಗಣ ಮಾರ್ಗವನ್ನು ಹಾದು ಹೋದವನಿಗೆ ಆತನ ಚಿತ್ತವನ್ನು ಒಪ್ಪಿಸಿಕೊಟ್ಟಿದ್ದನ್ನು ಪ್ರತಿನಿಧಿಸುವ "ನೀನು ನಿನ್ನ ಸ್ವಂತಚಿತ್ತವನ್ನು, ಯೋಜನೆಗಳನ್ನು, ಮತ್ತು ವ್ಯವಸ್ಥೆಗಳನ್ನು ತ್ಯಾಗ ಮಾಡಿದರಷ್ಟೇ ಸಾಲದು, ಅದನ್ನು ನೀನು ಮಾಡಬಹುದು, ಮತ್ತು ಬೇರೆ ಚಿತ್ತವನ್ನು ಯೋಜನೆಯನ್ನು ತೆಗೆದುಕೊಳ್ಳಬೇಕು. ನಿನ್ನ ಚಿತ್ತವನ್ನು ತ್ಯಾಗ ಮಾಡಿದರಷ್ಟೇ ಸಾಲದು. ಆದರೆ ನೀನು ಈಗ ದೈವಿಕ ಚಿತ್ತಕ್ಕೆ ಬಾಗಲೇ ಬೇಕು, ಮತ್ತು ನಿನ್ನದರ ಬದಲಾಗಿ ಅದನ್ನು ಒಪ್ಪಿಕೊಳ್ಳಬೇಕು ಮತ್ತು ನಿನ್ನನ್ನು ನೂತನ ಸೃಷ್ಟಿ, ದೇವರ ಸ್ವಭಾವದ ಬಾಧ್ಯಸ್ತನು ಎಂದು ಲೆಕ್ಕಿಸುವ ಮೊದಲು ದೇವರ ಸೇವೆಯಲ್ಲಿ ಚುರುಕಾಗಿರಬೇಕು" ಎಂದು ಹೇಳುವಂತೆ ತೋರಿಬರುತ್ತದೆ.

"ಗ್ರಾನೈಟ್ ಲೀಫ್" ನ್ನು ದಾಟಿ ನಾವು 'Ante Chamber'ನ ಗ್ರಾನೈಟ್‌ರ ನೆಲದ ಮೇಲೆ ಅನಿರ್ಬಂಧತೆಯೊಡನೆ ನಿಂತುಕೊಳ್ಳುತ್ತೇವೆ (ರೇಖಾ ಚಿತ್ರವನ್ನು ನೋಡಿರಿ). ಇದೊಂದು ವಿಚಿತ್ರವಾದ ಕೊಠಡಿ; ಅದರ ಗೋಡೆಗಳು ಒಂದಕ್ಕೊಂದು ಭಿನ್ನವಾಗಿವೆ. ಅದು ತನ್ನ ಭಾಗಗಳ ಮೇಲೆ ಒಂದು ವಿಧವಾದ ಗೋಡೆಗೆ ಹೊಂದಿಸಿದ ಹಲಿಗೆಯ ಹೊದಿಕೆ ಹೊಂದಿರುವುದಾಗಿ ಕಂಡುಬರುತ್ತದೆ. ಅದರ ಕೆಲವು ಗೋಡೆಗಳಲ್ಲಿ ಗ್ರೋವ್‌ಗಳು (ಕೊರಕಲುಗಳನ್ನು) ತೋಡಿರುತ್ತವೆ, ಅದು ನಿಶ್ಚಯವಾಗಿ ಇನ್ನೂ ಗೂಢಾರ್ಥ ತಿಳಿಯದ ಪಾಠಗಳನ್ನು ತುಂಬಿಕೊಂಡಿದೆ ಎಂದು ಕಂಡುಬರುತ್ತದೆ. ಆದಾಗ್ಯೂ, ಅದು ಒಂದು ಶಾಲಾ ಕೊಠಡಿಯನ್ನು ಹೋಲುತ್ತದೆ ಎಂಬುದು ಅದನ್ನು ಸಂದರ್ಶಿಸಿದವರ ಸಲಹೆಯಾಗಿದೆ ಮತ್ತು ಸತ್ಯದಿಂದ ಹುಟ್ಟಿದ ಪವಿತ್ರವಾದವರ ಅನುಭವಗಳನ್ನು ಚಿತ್ರಿಸುವಾಗ ನಾವು ನಿರೀಕ್ಷಿಸಬೇಕಾದ ಸಂಗತಿಗಳೊಂದಿಗೆ ಪೂರ್ಣ ಸಾಮರಸ್ಯವನ್ನು ಹೊಂದಿರುವಂತೆ ತೋರುತ್ತದೆ. ಈ 'Ante Chamber' ಕ್ರಿಸ್ತನ ಶಾಲೆಯನ್ನು, ಮತ್ತು ಶಿಷ್ಯರು – ಶಿಸ್ತನ್ನು, ನಂಬಿಕೆಯ ಪರೀಕ್ಷೆಗಳನ್ನು, ತಾಳ್ಮೆ ಮತ್ತು


NORTH WALL
ಉತ್ತರ ಗೋಡೆ
CEILING
ಛಾವಣಿ
SOUTH WALL
ದಕ್ಷಿಣ ಗೋಡೆ
Entrance for Grand Gallery
EAST WALL
ಪೂರ್ವ ಗೋಡೆ
WEST WALL
ಪಶ್ಚಿಮ ಗೋಡೆ
Granite Leaf
ಕಲ್ಲಿನ ಬೆಣೆ
FLOOR
ನೆಲ
IN SECTIONAL PARTS
LIMESTONE
GRANITE
SIDES OF ANTE-CHAMBER
Opened Out on Plane of East Wall
Limestone Blocks Marked L - Others are Granite
100
50
0
100
SCALE OF BRITISH INCHES

ಸಹನೆ ಮುಂತಾದವುಗಳನ್ನು ಸಂಕೇತಿಸುತ್ತದೆ – ಇದಕ್ಕೆ ತಮ್ಮನ್ನು ದೇವರ ಚಿತ್ತಕ್ಕೆ ಪೂರ್ಣವಾಗಿ ಪ್ರತಿಷ್ಠೆಪಡಿಸಿ ಕೊಂಡವರೆಲ್ಲರೂ ಬದ್ಧರಾಗಿದ್ದಾರೆ. ಇದು ಅವರಿಗೆ ಜಯಶಾಲಿಗಳಾಗಿ ಮತ್ತು ಕ್ರಿಸ್ತನೊಂದಿಗೆ ಆತನ ಬರಲಿರುವ ಮಹಿಮಾ ಆಳ್ವಿಕೆಯಲ್ಲಿ ಹಾಗೆ ಜಯಶೀಲರಾಗಿ ತಮ್ಮ ಅರ್ಹತೆಯನ್ನು ಆ ಸ್ಥಳದಲ್ಲಿ ರುಜುವಾತುಪಡಿಸಿಕೊಳ್ಳುವ ಅವಕಾಶಗಳನ್ನು ಒದಗಿಸಿಕೊಡುತ್ತದೆ. ನಾವು ಅಂತಹ ಪಾಠಗಳನ್ನು ಮತ್ತು ಪರೀಕ್ಷೆಗಳನ್ನು ಹೊಂದಿಲ್ಲವಾದರೆ ನಾವು ದೈವಿಕ ನೆಲೆಯಲ್ಲಿ ಆತನ ಮಕ್ಕಳೂ, ಬಾಧ್ಯಸ್ತರೂ ಆಗುವುದಿಲ್ಲ (ಇಬ್ರಿಯ 12:8). ಈ ಜೀವನದಲ್ಲಿ, ಆತನ ಸೇವೆಗೆ ನಮ್ಮನ್ನ ಪ್ರತಿಷ್ಠಿಸಿಕೊಂಡ ನಂತರದಲ್ಲಿ, ದೇವರು ನಮಗೆ ಬೋಧಿಸುತ್ತಾನೆ ಮತ್ತು ನಮ್ಮನ್ನು ಶಿಸ್ತುಬದ್ಧರನ್ನಾಗಿ ಮಾಡುತ್ತಾನೆ. ಮತ್ತು ಅದರಿಂದ ನಮ್ಮ ಒಡಂಬಡಿಕೆಗೆ ಅನುಗುಣವಾಗಿ ನಮ್ಮ ನಿಷ್ಠೆಯನ್ನು ಪರೀಕ್ಷಿಸುವುದಲ್ಲದೆ. ಪರೀಕ್ಷೆಗೊಳಗಾಗಿರುವವರೊಂದಿಗೆ, ತೊಂದರೆಯಲ್ಲಿರು ವವರೊಂದಿಗೆ ಸಹಾನುಭೂತಿ ಹೊಂದುವಂತೆ ನಮ್ಮನ್ನು ಸಿದ್ಧಪಡಿಸುತ್ತಾನೆ. ನಮ್ಮನ್ನು ಸಧ್ಯದಲ್ಲಿಯೇ ಅವರನ್ನು ಆಳುವವರನ್ನಾಗಿಯೂ, ನ್ಯಾಯಾಧಿಪತಿಗಳನ್ನಾಗಿಯೂ ಮಾಡುತ್ತಾನೆ – 1 ಕೊರಿಂಥ 6:2,3.

ಚಿತ್ತದ ಮರಣ ಮಾತ್ರವಲ್ಲ, ನಿಜವಾದ ಮರಣವನ್ನೂ ಸಹ ನಾವು 'ನೂತನವಾದ ದೈವಸ್ವಭಾವದ ಸ್ಥಿತಿ'ಗೆ ಪೂರ್ಣವಾಗಿ ಮತ್ತು ನಿಜವಾಗಿ ಪ್ರವೇಶಿಸುವ ಮೊದಲು ಹಾದುಹೋಗಬೇಕಾಗುತ್ತದೆ. ಇದನ್ನು ಸಹಾ ಕಲ್ಲಿನ 'ಸಾಕ್ಷ್ಯ'ವು ತೋರಿಸುತ್ತದೆ; 'Ante Chamber'ನ ಮತ್ತೊಂದು ತುದಿಯಲ್ಲಿ ಒಂದು ಕೆಳಗಣ ಹಾದಿಯಿದೆ ಮತ್ತು ಅದರ ಮೂಲಕ 'ಅರಸನ ಕೊಠಡಿ'ಗೆ ಪ್ರವೇಶ ದೊರೆಯುತ್ತದೆ. ಈ ರೀತಿಯಲ್ಲಿ ಪಿರಮಿಡ್‌ನ ಅತ್ಯಂತ ವೈಭವವುಳ್ಳ, ಮತ್ತು ಎತ್ತರವಾದ 'ಅರಸನ ಕೊಠಡಿ'ಯು ಚಿಕ್ಕಹಿಂಡು ಹೊಂದಿಕೊಳ್ಳುವ ದೈವಿಕ ಸ್ವಭಾವದ ಸಮರ್ಪಕತೆಯ ಚಿಹ್ನೆಯಾಗುತ್ತದೆ. ಈ ಚಿಕ್ಕ ಹಿಂಡಿನಲ್ಲಿ ಕರೆಯಲ್ಪಟ್ಟ ಅನೇಕರಲ್ಲಿ ಆರಿಸಲ್ಪಟ್ಟ ಕೆಲವರು ಜಯಶಾಲಿಗಳಿರುತ್ತಾರೆ. (ಅವರ ಕರೆಯು 'ಗ್ರ್ಯಾಂಡ್ ಗ್ಯಾಲರಿ'ಯಿಂದ ಸಂಕೇತಿಸಲ್ಪಟ್ಟಿದೆ) ಮತ್ತು ಅವರು ಸ್ವಾರ್ಥ ತ್ಯಾಗ ಮತ್ತು ಪರೀಕ್ಷೆಗಳನ್ನು ಹಾದು ಹೋಗುತ್ತಾರೆಂಬುದಾಗಿದೆ. 'Ante Chamber'ನಲ್ಲಿ ಮತ್ತು ಅದಕ್ಕೆ ಮತ್ತು ಅದರಿಂದ ಹೊರಟು ಕೆಳಗಣ ಮಾರ್ಗಗಳಲ್ಲಿ ಚಿತ್ರಿತವಾಗುತ್ತದೆ. 'ದೈವ ಸ್ವಭಾವ'ಕ್ಕೆ ಕರೆಯು ಮೊದಲಿಗೆ ನಮ್ಮ ಕರ್ತನಾದ ಯೇಸುವಿಗೆ ಬಂತು. ಆತನ ಈ ಲೋಕದ ನಿಯೋಗವು ಎರಡು ಪಟ್ಟಿನ ಉದ್ದೇಶವನ್ನು ಹೊಂದಿತ್ತು (1) ಆದಾಮನ ಪರವಾಗಿ ಮತ್ತು ಆತನಲ್ಲಿರುವವರೆಲ್ಲರ ಪರವಾಗಿ ಈಡುಬಲಿಯನ್ನು ಅರ್ಪಿಸುವುದರ ಮೂಲಕ ಪಾಪಿಗಳನ್ನು ರಕ್ಷಿಸುವುದು (2) ಮರಣದ ಪರ್ಯಂತ ವಿಧೇಯನಾಗುವುದರಿಂದ ತನ್ನನು ದೇವರ ಸ್ವಭಾವಕ್ಕೆ ಮತ್ತು ಮಹಿಮೆಗೆ ಅರ್ಹನೆಂದು ತೋರ್ಪಡಿಸುವುದು. ಆದುದರಿಂದ ನಮ್ಮ ಕರ್ತನ ಜನನದ ಪ್ರಾರಂಭವಾಗಿ ಆ 'ಗ್ರ್ಯಾಂಡ್ ಗ್ಯಾಲರಿ'ಯನ್ನೇ ತೋರಿಸುತ್ತದೆ. ಆದ್ದರಿಂದ, ಅದು ಸುವಾರ್ತಾಯುಗವನ್ನು ಸಂಕೇತಿಸುವುದಿಲ್ಲ. ಅದು ಕ್ರಿಸ್ತನು ತನ್ನ ಜನನದ ಮೂವತ್ತಮೂರು ವರ್ಷಗಳ ನಂತರ ತನ್ನನ್ನು ಶಿಲುಬೆಯಲ್ಲಿ ತ್ಯಾಗಮಾಡುವುದರ ಮೂಲಕ ಧರ್ಮಶಾಸ್ತ್ರ ಯುಗದ ಅಂತ್ಯವನ್ನು ಮಾಡಿದಾಗ ಪ್ರಾರಂಭವಾಯಿತು. ಅದು ದೈವ ಸ್ವಭಾವಕ್ಕೆ – 'ಅರಸನ ಕೊಠಡಿ'ಗೆ ಮಹಾ ಅಥವಾ ಪರಲೋಕದ ಕರೆಯನ್ನು (ತ್ಯಾಗದ ಮೂಲಕ) ಸಾಂಕೇತಿಸುತ್ತದೆ. ನಮ್ಮ ಕರ್ತನಾದ ಯೇಸು ತಾನು ಜನನ ಹೊಂದಿದಂದಿನಿಂದ ಕರೆಯಲ್ಪಟ್ಟಿದ್ದನು ಮತ್ತು ಪಂಚಾಶತ್ತಮ ದಿನದಿಂದ, ಎಲ್ಲಾ ನೀತಿ ನಿರ್ಣಯ ಹೊಂದಿದ ವಿಶ್ವಾಸಿಗಳು ಅದೇ ಮಹಾಭಾಗ್ಯಕ್ಕೆ ಕರೆಯಲ್ಪಟ್ಟರು. ಅದಾಗ್ಯೂ ಕೆಲವರು ಮಾತ್ರವೇ ತ್ಯಾಗದ ಕರೆಯನ್ನು ಒಪ್ಪಿಕೊಂಡರು, ಮತ್ತು ಹೇಗೂ ಕೆಲವರು ಮಾತ್ರ ತಮ್ಮ ಕರೆಯನ್ನು ಮತ್ತು ಆಯ್ಕೆಯನ್ನು ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯುವ ಷರತ್ತನ್ನು ಹೃತ್ಪೂರ್ವಕವಾಗಿ ಅನುಸರಣೆ ಮಾಡುವುದರ ಮೂಲಕ ಖಚಿತ ಪಡಿಸಿಕೊಂಡರು. ದೇವರ ಸ್ವಭಾವಕ್ಕೆ ಕರೆಯುವ ಈ 'ಮಹಾ ಕರೆ'ಯು ಸಮಯದ ಅವಧಿಯನ್ನು ಮತ್ತು ಮುಕ್ತಾಯವನ್ನು ಈಗಾಗಲೇ ಸೂಚಿಸಿರುವಂತೆ ಈ 'ಗ್ರ್ಯಾಂಡ್ ಗ್ಯಾಲರಿ'ಯ ಉದ್ದ ಮತ್ತು ಅಂತ್ಯದಿಂದ ಸೂಚಿತವಾಗುತ್ತದೆ.

'ಗ್ರ್ಯಾಂಡ್ ಗ್ಯಾಲರಿ'ಯ ಮಾರ್ಗದಿಂದ ಮಾತ್ರವೇ ತಲುಪಬಹುದಾದ 'ಅರಸನ ಕೊಠಡಿ'ಯು ಮತ್ತು 'Ante Chamber' ಇವುಗಳು ಎಲ್ಲಾ ರೀತಿಯಲ್ಲಿಯೂ ಮಹಾ ಪಿರಮಿಡ್ಡಿನಲ್ಲಿ ಅತ್ಯಂತ ಉನ್ನತವಾದ ಮತ್ತು ಗಣ್ಯವಾದ ಖೋಲಿಯಾಗಿದೆ ಮತ್ತು ಅದು ತಕ್ಕಂಥಃ ದೈವ ಸ್ವಭಾವವನ್ನು ಸಂಕೇತಿಸುತ್ತದೆ. ಮಾನ್ಯ ಹೆನ್ರಿ ಎಫ್. ಗೋರ್ಡನ್ ಎಂಬಾತನು ಇದನ್ನು ಹೀಗೆ ವಿವರಿಸಿದ್ದಾನೆ:–

"ಅದೊಂದು ಬಹಳ ಶ್ರೀಮಂತ ಖೋಲಿಯಾಗಿದೆ. ಇದು 34 ಅಡಿಗಳ ಉದ್ದ, 17 ಅಡಿಗಳ ಅಗಲ ಮತ್ತು 19 ಅಡಿಗಳ ಎತ್ತರವುಳ್ಳದ್ದಾಗಿದ್ದು ಸಾದ್ಯಂತವಾಗಿ ಹೊಳಪುಗೊಳಿಸಿದ ಕೆಂಪು ಗ್ರಾನೈಟ್ ಶಿಲೆಯಿಂದ ಮಾಡಲ್ಪಟ್ಟಿದೆ; ಗೋಡೆಗಳು, ನೆಲ ಮತ್ತು ಛಾವಣಿ ಇವುಗಳು ಚೌಕಾಕಾರದ ದಿಮ್ಮಿಗಳಿಂದ (ಬ್ಲಾಕ್ಸ್)

ಮಾಡಲ್ಪಟ್ಟಿರುವುದು ನಿಜ, ಮತ್ತು ಅಂಥಾಃ ಉತ್ಕೃಷ್ಟವಾದ ಕೌಶಲ್ಯತೆಯಿಂದ ಜೋಡಿಸಲ್ಪಟ್ಟಿದು, ಆಧುನಿಕ ಯುಗದ ಯಾವುದೇ ನಿರಂಕುಶ ಚಕ್ರವರ್ತಿಯೂ ಇದಕ್ಕಿಂತ ಹೆಚ್ಚಾದ ಶ್ರೇಷ್ಠತೆಯುಳ್ಳ ಮತ್ತು ಪರಿಷ್ಕರಿಸಲ್ಪಟ್ಟದ್ದನ್ನು ಬಯಸಲಾರರು. ಈ ಕೊಠಡಿಯಲ್ಲಿರುವ ಏಕೈಕ ವಸ್ತುವೆಂದರೆ ಖಾಲಿಯಾದ ಮತ್ತು ಮುಚ್ಚಳವಿಲ್ಲದ ಸಂದೂಕ (Granite Coffer) (ಕಲ್ಲಿನ ಪೆಟ್ಟಿಗೆ). ಬಹಳ ಮುಖ್ಯವಾಗಿ ಗಮನಿಸ ಬೇಕಾದುದೆಂದರೆ ಈ ಸಂದೂಕವು ವಿಸ್ತಾರದಲ್ಲಿ ಮೋಶೆಯ ಪವಿತ್ರ ದೇವದರ್ಶನ ಗುಡಾರಕ್ಕೆ ಅನುಗುಣವಾಗಿದೆ ಎಂಬುದು.

ಇಸ್ರಾಯೇಲ್ಯರ ದೇವದರ್ಶನ ಗುಡಾರದಲ್ಲಿ ಮತ್ತು ದೇವಾಲಯದಲ್ಲಿ ಬಂಗಾರವು ಸಂಕೇತಿಸಿರುವಂತೆ, ಪಿರಮಿಡ್‌ನಲ್ಲಿ ದೈವಿಕ ಸಂಗತಿಗಳನ್ನು ಅಥವಾ ದೈವಿಕ ಸ್ವಭಾವವನ್ನು ಚಿತ್ರಿಸಲು ಗ್ರಾನೈಟನ್ನು ಉಪಯೋಗಿಸಲಾಗಿದೆ. 'Ante Chamber'ಗೆ ಮತ್ತು ಅರಸನ ಕೊಠಡಿಗೆ ನಡೆಸುವ ಕೆಳಗಣ ಮಾರ್ಗವು ದೇವದರ್ಶನ ಗುಡಾರದ ಪವಿತ್ರ ಮತ್ತು ಅತಿ ಪವಿತ್ರ ಸ್ಥಳಗಳ ಮುಂದಿರುವ ಪರದೆಗಳಿಗೆ ಅನುಗುಣವಾಗಿದೆ. ಗ್ರಾನೈಟ್ ಅರಸನ ಕೊಠಡಿಯಲ್ಲಿರುವ ಏಕೈಕ ವಸ್ತುವಾದ ಸಂದೂಕವು ಒಡಂಬಡಿಕೆಯ ಭಂಡಾರಕ್ಕೆ (coffer) ಅನುಗುಣವಾಗಿದೆ. ಅದು ದೇವದರ್ಶನ ಗುಡಾರವಿರುವ ದೇವಾಲಯದ ಅತಿ ಪರಿಶುದ್ಧ ಸ್ಥಳದಲ್ಲಿರುವ ಏಕೈಕ ವಸ್ತುವಾಗಿದೆ. ಅದು ಬಂಗಾರದಲ್ಲಿರುವುದೂ, ಇಲ್ಲಿ ಗ್ರಾನೈಟಿನಲ್ಲಿರುವುದೂ ಎರಡೂ ಒಂದೇ ಸಾಂಕೇತಿಕ ಅರ್ಥವನ್ನು ಹೊಂದಿದೆ.

ಇದೇ ಎಲ್ಲವೂ ಅಲ್ಲ. ದೇವದರ್ಶನ ಗುಡಾರದ ಮತ್ತು ದೇವಾಲಯದ, ಅತಿಪವಿತ್ರ ಸ್ಥಳಗಳನ್ನು ಪ್ರತ್ಯೇಕಿಸುವ ಪರದೆಗಳು ಇವುಗಳ ಎರಡೂ ಪಾರ್ಶ್ವಗಳಲ್ಲಿ ಸಂಕೇತಿಸಿರುವ ಅದೇ ಮಹತ್ತಾದ ಸತ್ಯಗಳು ಮತ್ತು ಎರಡೂ ಕೋಣೆಗಳ ಬೋಧನೆಗಳೂ ಮಹಾ ಪಿರಮಿಡ್‌ನಲ್ಲಿ ಅರಸನ ಕೊಠಡಿ ಮತ್ತು 'Ante Chamber' ಈ ಮತ್ತು ಅವುಗಳನ್ನು ಪ್ರತ್ಯೇಕಿಸುವ ಕೆಳಗಣ ಮಾರ್ಗಗಳಲ್ಲಿ ತಾಳೆಹೊಂದುತ್ತವೆ ಎಂದು ನಾವು ಕಾಣುತ್ತೇವೆ. 'Ante Chamber' ದೇವದರ್ಶನ ಗುಡಾರದ ಪವಿತ್ರ ಸ್ಥಳದಂತೆ, ದೇವರೊಂದಿಗೆ ಸಂಬಂಧದ ಆ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ನೂತನ ಸೃಷ್ಟಿಯಾಗಿ ದೈವಸ್ವಭಾವ ಮತ್ತು ಮಹಿಮೆಯಲ್ಲಿ ಕ್ರಿಸ್ತನೊಂದಿಗಿನ ಜೊತೆ ಬಾಧ್ಯಸ್ತನು ಎಂದು ಎಣಿಸಲ್ಪಟ್ಟಿರುವ ವಿಶ್ವಾಸಿಯು ತನ್ನ ಪಾಪಗಳ ಕ್ಷಮಾಪಣೆಯನ್ನು, ಈಡುಬಲಿಯ ನಿಮಿತ್ತ ಮೈತ್ರಿ ಸಂಧಾನವನ್ನು ಹೊಂದಿದನಂತರ ಅದನ್ನು ಪ್ರವೇಶಿಸುತ್ತಾನೆ ಮತ್ತು ನೀತಿನಿರ್ಣಯ ಹೊಂದಿದ ತನ್ನನ್ನು ದೇವರಿಗೆ ಜೀವಂತ ಅರ್ಪಣೆಯಾಗಿ ಸಮರ್ಪಿಸಿ ಕೊಳ್ಳುತ್ತಾನೆ. ದೇವದರ್ಶನ ಗುಡಾರದ ಮೊದಲನೆಯ ಪರದೆಯು ಪ್ರತಿಷ್ಠೆಪಡಿಸುವಿಕೆಯನ್ನು ಅಥವಾ ನಮ್ಮ ಸ್ವಂತ ಚಿತ್ತವನ್ನು ತ್ಯಾಗಮಾಡುವುದು ಅಥವಾ ಸಾಯಿಸುವುದು ಮತ್ತು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡುವುದನ್ನು ಪ್ರತಿನಿಧಿಸುತ್ತದೆ, ಅದರಂತೆ 'Ante Chamber'ಗೆ ಇರುವ ಕೆಳಗಣ ಪ್ರವೇಶವು ರಾಜವಂಶಸ್ಥ ಯಾಜಕತ್ವದ ಸದಾಕಾಲದ ಸದಸ್ಯರಾದವರ ಜೀವನದಲ್ಲಿ ಹೊಸತನವನ್ನು ಪ್ರಾರಂಭಿಸುವ ಇದೇ ಮಹಾ ಕಾರ್ಯವನ್ನು ಸಂಕೇತಿಸುತ್ತದೆ.

ಬಲಿಪೀಠದ ಮೇಲೆ ನಮ್ಮದೆಲ್ಲವನ್ನೂ ಸಮರ್ಪಿಸುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ, ವಿಶ್ವಾಸಿಯು ಇನ್ನು ಮುಂದೆ ಮಾನವನೆಂದು ಎಣಿಸಲ್ಪಡದೆ 'ನೂತನ ಸೃಷ್ಟಿ', ದೇವಸ್ವಭಾವದಲ್ಲಿ ಪಾಲುದಾರನು ಎಂದು ಎಣಿಸಲ್ಪಡುತ್ತಾನೆ. ಸತ್ಯಸಂಗತಿ ಏನೆಂದರೆ, ಆತನು ದೈವ ಚಿತ್ತಕ್ಕೆ ನಿಜವಾದ ಅನುಭವದಲ್ಲಿಯೂ, ಈ ಜೀವನ ಕಲಿಸುವ ಪಾಠಗಳಿಗೂ ವಿಧೇಯನಾಗುವುದನ್ನು ವಿಶ್ವಾಸಪೂರ್ವಕವಾಗಿ ಕಲಿತುಕೊಳ್ಳುವವರೆಗೂ ಆತನನ್ನು ದೈವ ಸ್ವಭಾವದ ಪಾಲುದಾರನು ಎಂಬುದಾಗಿ ಮಾಡಲಾಗದು. (ವಿಚಿತ್ರವಾಗಿ ನಿರ್ಮಿಸಲ್ಪಟ್ಟ 'Ante Chamber' ಗೋಡೆಗಳಲ್ಲಿ ಮತ್ತು 'ಪ್ರದರ್ಶನದ ರೊಟ್ಟಿ'ಯಲ್ಲಿ. 'ಬಂಗಾರದ ಮೊಂಬತ್ತಿ'ಯಲ್ಲಿ ಮತ್ತು 'ದೇವದರ್ಶನ ಗುಡಾರದ'ಲ್ಲಿರುವ ಧೂಪದ ಪೀಠದಲ್ಲಿ ಪ್ರತಿನಿಧಿಸ ಲ್ಪಡುತ್ತದೆ); ಆತನು ಮರಣವನ್ನು ತಾನೇ ದಾಟಿ ಹೋಗುವವರೆಗೆ ಅಲ್ಲ (ಇದು ದೇವದರ್ಶನ ಗುಡಾರದ ಎರಡನೆಯ ಪರದೆಯನ್ನು ಮತ್ತು ಪಿರಮಿಡ್ಡಿನ 'ಅರಸನ ಕೊಠಡಿ'ಗೆ ಹೋಗುವ ಎರಡನೆಯ ಕೆಳಗಣ ಮಾರ್ಗವನ್ನು ಪ್ರತಿನಿಧಿಸುತ್ತದೆ); ಮತ್ತು ಮೊದಲ ಪುನರುತ್ಥಾನದಲ್ಲಿ ಪಾಲು ತೆಗೆದುಕೊಳ್ಳುವುದರ ಮೂಲಕ ಅವನು ಕ್ರಿಸ್ತನೊಂದಿಗೆ ವಾಗ್ದಾನ ಮಾಡಿದ ದೈವಿಕ ಸ್ವಭಾವದ ಪೂರ್ಣತೆಗೆ ಪ್ರವೇಶಿಸಿದ್ದನ್ನು 'ಕಿಂಗ್ಸ್ ಚೇಂಬರ್'ನಲ್ಲಿ ಸಂಕೇತಿಸಲಾಗಿದೆ.

ಈ ರೀತಿಯಲ್ಲಿ ಮಹಾ ಪಿರಮಿಡ್ ಪಾಪಿ ಮಾನವನ ಕೆಳಮುಖ ಕ್ರಮವನ್ನು ಸಾಕ್ಷ್ಯಪಡಿಸುವುದು ಮಾತ್ರವಲ್ಲ, ಪತನದಿಂದ ಆತನ ಸಂಪೂರ್ಣ ಉದ್ಧಾರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ತೆಗೆದುಕೊಂಡ ವಿವಿಧ ಹೆಜ್ಜೆಗಳು (ಜೀವನ ಕ್ರಮದಿಂದ), ಕರ್ತನ ಮರಣ ಮತ್ತು ಪುನರುತ್ಥಾನದ ಮೂಲಕ ತೆರೆದುಕೊಳ್ಳುವ 'ಜೀವದ ಮಾರ್ಗ'ವನ್ನು ತೋರಿಸುತ್ತದೆ.


ರೇಖಾಚಿತ್ರದಿಂದ, ಗ್ರಾನೈಟ್ ನೆಲವು 'Ante Chamber'ನ ಸರಿಯಾಗಿ ಅದರ ಮುಂದುಗಡೆ ತಲುಪುವುದಿಲ್ಲ, ಆದರೆ ಭಾವಣಿಗಳ ಗ್ರಾನೈಟ್ ಕೋಣೆಯ ಸಂಪೂರ್ಣ ಉದ್ದವನ್ನು ತಲುಪುತ್ತದೆ ಎಂಬುದನ್ನು ಗಮನಿಸಬಹುದು. ದೈವಿಕ ಯೋಜನೆಯ ವೈಶಿಷ್ಟವೆಂದು ನಾವು ನೋಡಿದ್ದನ್ನು ಗಮನದಲ್ಲಿಟ್ಟು ಕೊಂಡು ಇದು ಒಂದು ಪಾಠವನ್ನು ಕಲಿಸುತ್ತದೆ ಎಂದು ತೋರುತ್ತದೆ, ಏನೆಂದರೆ ಇದು ದೈವಿಕ ಸ್ವರೂಪವನ್ನು ಪ್ರವೇಶಿಸಲು ಬಯಸುವ ಕರೆಸಿಕೊಳ್ಳುವವರಿಗೆ ಸಂಬಂಧಿಸಿದೆ. ಮೊದಲನೆಯ ಕೆಳಗಣ ಮಾರ್ಗವು ವಿಶ್ವಾಸಿಗಳ ಚಿತ್ತವನ್ನು ಪ್ರತಿಷ್ಠೆ ಪಡಿಸುವುದನ್ನು ಚಿತ್ರಿಸುತ್ತದೆ. ಅದು ಆತನಿಗೆ ನಿಜವಾಗಿಯೂ 'Ante Chamber'ನಲ್ಲಿ ಪ್ರತಿನಿಧಿಸಲ್ಪಟ್ಟ "ಪವಿತ್ರ" ಅಥವಾ ಪರಿಶುದ್ಧಗೊಳಿಸಿದ ಸ್ಥಿತಿಗೆ ಮಹಿಮೆ ಮತ್ತು ನಿತ್ಯತ್ವದ ಬಾಧ್ಯಸ್ತಿಕೆಯ ಪ್ರತೀಕ್ಷಿತ ಪ್ರವೇಶವನ್ನು ನೀಡುತ್ತದೆ ಮತ್ತು ಅದರ ಗ್ರಾನೈಟ್ ಭಾವಣಿ ಈಗ ಆತನನ್ನು ಆವರಿಸಿಕೊಳ್ಳುತ್ತದೆ; ಆದಾಗ್ಯೂ ಅಂತಹವರು ಜೀವನದ ಹೊಸತನಕ್ಕೆ ಚಟುವಟಿಕೆಗಳಿಗೆ ಸ್ಫೂರ್ತಿಗೊಳ್ಳುವವರೆಗೆ ಪೂರ್ಣವಾಗಿ ನೂತನ ಸ್ವಭಾವಕ್ಕೆ ಸೇರಿದ್ದಾರೆಂದು ಪರಿಗಣಿಸಲಾಗದು. ಈ ಪರೀಕ್ಷೆಯು 'ಗ್ರಾನೈಟ್ ಲೀಫ್'ನಲ್ಲಿ ಪ್ರತಿನಿಧಿಸಲ್ಪಡುತ್ತದೆ. ಅದು ತನ್ನ ವಿಚಿತ್ರವಾದ ಸ್ಥಾನದ ನಿಮಿತ್ತ, ಬೀಳಲು ಸಿದ್ಧವಾಗಿದೆಯೋ ಎಂಬಂತೆ ನೇತಾಡುತ್ತಿದ್ದು ಎಲ್ಲಾ ಮುಂದಿನ ಪ್ರಗತಿಯನ್ನು ಪ್ರತಿಬಂಧಿಸುತ್ತದೆ ಮತ್ತು "ಯಾತ್ರಿಕನೇ, ನೀನು ಇದುವರೆಗೆ ಬಂದು ದೇವರಿಗೆ ನಿನ್ನನ್ನು ಪ್ರತಿಷ್ಠಿಸಿಕೊಂಡಿದ್ದರೂ, ನೀನು ಸತ್ಯದ ಸ್ಫೂರ್ತಿಯಿಂದ ಆತನ ಸೇವೆಗೆ ಚುರುಕುಗೊಳ್ಳದ ಹೊರತು ನೀನು ಕರೆಯಲ್ಪಟ್ಟ ಅಥವಾ ಆಹ್ವಾನಿಸಲ್ಪಟ್ಟ ದೈವಿಕ ಸ್ವಭಾವದಲ್ಲಿ ನಿನಗೆ ನಿಜವಾದ ನೆಲೆ ಇರುವುದಿಲ್ಲ" ಎಂದು ಹೇಳುವಂತೆ ತೋರಿಬರುತ್ತದೆ. ಈ ಯುಗದಲ್ಲಿ ಕರೆಯಲ್ಪಟ್ಟವರು ತಮ್ಮ ಕರ್ತನ ಮಹಿಮೆಗೆ ಪ್ರವೇಶಿಸಲು ಇಡಬೇಕಾದ ಮೂರು ಹೆಜ್ಜೆಗಳು ಆ ರೀತಿಯಾಗಿ ಮಹಾ ಪಿರಮಿಡ್‌ನಲ್ಲಿ ಮಾತ್ರವಲ್ಲದೆ ಪವಿತ್ರ ಗ್ರಂಥಗಳಲ್ಲಿ ಗುರುತಿಸಲ್ಪಟ್ಟಿದೆ. ಅವುಗಳೆಂದರೆ, (1) 'ಪ್ರತಿಷ್ಠೆ' ಅಥವಾ ಸತ್ಯದ ವಾಕ್ಯದ ಮುಖಾಂತರ ಆತ್ಮನಿಂದ ಹುಟ್ಟುವುದು. ಇದು 'Ante Chamber'ಗೆ ಹೋಗುವ ಕೆಳಗಣ ಮಾರ್ಗದಲ್ಲಿ ಸಂಕೇತಿಸಲ್ಪಟ್ಟಿದೆ. (2) ಚೈತನ್ಯಪಡಿಸುವಿಕೆ (Quickening) : ಆತ್ಮನಿಂದ ಶುದ್ಧೀಕರಿಸಲ್ಪಡುವುದರ ಮೂಲಕ ಚಟುವಟಿಕೆಯುಳ್ಳ ಸೇವೆಗೆ ಮತ್ತು ಅರ್ಪಣೆಗೆ ಸಜೀವಗೊಳ್ಳುವುದು. ಇದು, 'ಗ್ರಾನೈಟ್ ಲೀಫ್'ನ ಅಡಿಯಿರುವ ಕೆಳಗಣ ಮಾರ್ಗದಲ್ಲಿ ಸಂಕೇತಿಸಲ್ಪಟ್ಟಿದೆ. (3) ಆತ್ಮೀಕ ಜೀವನ (Birth of Spirit) : ನಮ್ಮ ದೇವರ ಪರಿಪೂರ್ಣ ಹೋಲಿಕೆಯಲ್ಲಿ ಆತ್ಮನ ಜನನದ ಮೂಲಕ ಮೊದಲ ಪುನರುತ್ಥಾನದ ಪಾಲುದಾರಿಕೆ ಎಂಬುದನ್ನು ಇವುಗಳು 'ಕಿಂಗ್ಸ್ ಚೇಂಬರ್'ನ ಕೆಳಗಣ ಹಾದಿಯಲ್ಲಿ ಚಿತ್ರಿಸಲಾಗಿದೆ.

## ಮಾನವ ಸ್ವಭಾವ ಮತ್ತು ಆತ್ಮಿಕ ಸ್ವಭಾವಗಳನ್ನು ತೋರಿಸಲಾಗಿದೆ

## The Human and Spiritual Natures Shown


ಪುಟ 227 ರಲ್ಲಿ ಕೊಟ್ಟಿರುವ ರೇಖಾ ಚಿತ್ರವನ್ನು ನೋಡುವಾಗ, ಒಂದು ಊಹಾರೇಖೆಯನ್ನು ಪಿರಮಿಡ್‌ನ ಲಂಬ ಅಕ್ಷರೇಖೆಯಲ್ಲಿ ಹಾಕಲಾಗಿದೆ ಎಂಬುದನ್ನು ಗಮನಿಸಬಹುದು. ಇದು 'ಕ್ವೀನ್ಸ್ ಚೇಂಬರಿ'ನ ಮತ್ತು ಅದರ 'ಸಮತಟ್ಟಾದ ಹಾದಿ'ಯಲ್ಲಿ, 'ಪ್ರವೇಶ ಮಾರ್ಗ'ದಲ್ಲಿ, 'ಮೊದಲ ಆರೋಹಣ ಮಾರ್ಗ' ಮತ್ತು 'ಗ್ರ್ಯಾಂಡ್ ಗ್ಯಾಲರಿ' ಈ ಎಲ್ಲವೂ ಗೆರೆಯ ಅಥವಾ ಅಕ್ಷರೇಖೆಯ ಉತ್ತರ ಭಾಗದಲ್ಲಿದೆ ಮತ್ತು 'Ante Chamber' ಮತ್ತು 'King's Chamber'ಗಳು ಮಾತ್ರ ಅದರ ದಕ್ಷಿಣ ಭಾಗದಲ್ಲಿದೆ. ಈ ರೀತಿಯಲ್ಲಿ ಮಹಾ ಪಿರಮಿಡ್ಡಿನ ರಚನಕಾರನು (ಯೆಹೋವನು) ಸ್ವಭಾವದ ಭಿನ್ನತೆಗಳನ್ನು ತೋರಿಸಿಕೊಡುತ್ತಾನೆ (Noted in Vol. I, Chapter X).

"The Queen's Chamber" ಸಹಸ್ರಮಾನದ ನಂತರ ಮಾನವೀಯತೆಯ ಸಮರ್ಪಕತೆಯನ್ನು ಪ್ರತಿನಿಧಿಸುವುದಾಗಿದ್ದು ಎಲ್ಲಾ ವಿಧೇಯರನ್ನೂ, ಅರ್ಹರನ್ನೂ ಸೃಷ್ಟಿಕರ್ತನ ನೈತಿಕ ಸಾಮ್ಯಕ್ಕೆ ಪುನಃ ಸ್ಥಾಪಿಸುತ್ತದೆ ಎಂಬುದು ಅದು ಅದರ ಹಿಂದಿನ ಅಥವಾ ಅತಿ ದೂರದ ಗೋಡೆಯು ಪಿರಮಿಡ್‌ನ ಅಕ್ಷಗೆರೆಯ ಸಾಲಿನಲ್ಲಿದೆ ಎಂಬುದನ್ನು ಕಲಿಸಿಕೊಡುತ್ತದೆ ಮತ್ತು ಆ ರೀತಿಯಲ್ಲಿ ದೇವರ ಸ್ವರೂಪಕ್ಕೆ ಮತ್ತು ಸಾಮ್ಯತೆಗೆ ಪುನಃ ಸ್ಥಾಪಿಸುತ್ತದೆ, ಇನ್ನೂ ಮಾನವ ಸ್ವಭಾವದಲ್ಲಿದ್ದಾಗ್ಯೂ. ಒಂದು ಸ್ವಭಾವವು ಅದರ ಸಾಮ್ಯತೆ ಇರುವ ಮತ್ತೊಂದಕ್ಕೆ ಸ್ವಭಾವಕ್ಕೆ ಹತ್ತಿರವಾಗಿರುವಂತೆ ಮಾನವ ಜಾತಿಯು ದೈವ ಸ್ವಭಾವಕ್ಕೆ ಹತ್ತಿರವಾಗಿಯೇ ಇರುತ್ತದೆ. ಮತ್ತು ಆ ಅಕ್ಷೆಯ ದಿಕ್ಕಿನಲ್ಲಿ ಹೋಗುವ ಎಲ್ಲಾ ಮೇಲ್ಮುಖವಾದ ಹಾದಿಗಳೂ ದೇವ ಜನರ ಬಯಕೆಗಳು ಮತ್ತು ಪ್ರಯತ್ನಗಳು ಇವುಗಳೆಲ್ಲವೂ ಮಾನವರ ಸಮರ್ಪಕತೆಗಾಗಿ ಎಂಬುದನ್ನು ಕಲಿಸಿಕೊಡುತ್ತದೆ. ಅಲ್ಲದೇ ಸಮಯದಲ್ಲಿ ಕರೆಯಲ್ಪಟ್ಟಿರುವ ಸುವಾರ್ತಾ ಯುಗದ ಸಭೆಗಳು ಮಾನವ ಸಮರ್ಪಕತೆಗಿಂತಲೂ ಹೆಚ್ಚಿನ ಸಂಪೂರ್ಣತೆಗೆ ಹೋಗಬೇಕಾಗುತ್ತದೆ. ಅವರು




**Vertical Section (looking west) of KING'S CHAMBER; also of ANTE-CHAMBER, South End of GRAND GALLERY and Vyse's Hollows of Construction above King's Chamber**
**THE DARK TONED AREAS INDICATE GRANITE**

ರಾಜನ ಕೊಠಡಿ ಹಾಗೂ ಹೊರಕೋಣೆ ಮತ್ತು ಮಹಾದ್ವಾರವು ಪಶ್ಚಿಮ ದಿಕ್ಕಿನಿಂದ ಕಾಣುವ ಲಂಬ (ಉದ್ದನೆ) ವಿಭಾಗ
ಕಪ್ಪು ಚುಕ್ಕೆಗಳಿಂದ ಕೂಡಿರುವ ವಿಸ್ತೀರ್ಣ ಭಾಗಗಳು ಗ್ರಾನೈಟ್ (ಕಲ್ಲು) ನಿಂದ ಕೂಡಿರುವುದನ್ನು ಸೂಚಿಸುತ್ತದೆ.




**SCALE OF BRITISH INCHES** - ಬ್ರಿಟಿಷ್ ಅಳತೆಯ ಅಂಗುಲಗಳಲ್ಲಿ

ಕ್ರಿಸ್ತನೊಂದಿಗೆ ಜೊತೆ ಭಾಧ್ಯಸ್ತರಾಗಿ ಅವರುಗಳು ದೈವ ಸ್ವಭಾವದ ಪರಿಪೂರ್ಣತೆಗೆ ಪ್ರವೇಶಿಸಬೇಕಾಗುತ್ತದೆ.

'ಭೂಗರ್ಭ ಕೋಣೆ' ಅಥವಾ 'ಗುಂಡಿ' (ಪಿಟ್) ಇವುಗಳು ತೊಂದರೆ ಮತ್ತು ಮರಣವನ್ನು ಪ್ರತಿನಿಧಿಸುತ್ತದೆ ಎಂಬ ಸತ್ಯವು 'Queen's Chamber'ನಂತೆ ಸಂಪೂರ್ಣವಾಗಿ ಲಂಬ ಅಕ್ಷೆಯ ಒಂದೇ ಬದಿಯಲ್ಲಿ ಇರುವುದಿಲ್ಲ ಮತ್ತು ಅದರ ಮಾರ್ಗವು ಈ ಅರ್ಥವಿವರಣೆಗೆ ಪ್ರತಿಕೂಲ ವಾಗಿರುವುದಿಲ್ಲ, ಕಟ್ಟುನಿಟ್ಟಾಗಿ ಹೇಳುವುದಾದರೆ, ಅದು ಪಿರಮಿಡ್ಡಿನ ಭಾಗವೇ ಅಲ್ಲ. ಅದು ಪಿರಮಿಡ್ಡಿನ ಕೆಳಗೆ ಅದರ ತಳದಿಂದ ಬಹುದೂರದಲ್ಲಿದೆ. ಆದರೆ ಅದು ನಮಗೆ ತಿಳಿಸಲು ಮತ್ತೊಂದು ಪಾಠವಿದೆ. ಅದರ ಅತಿ ದೂರದ ಗೋಡೆಯಿಂದ ಒಂದು ಲಂಬವಾದ ಗೆರೆಯು 'Ante Chamber'ನ ಅತಿ ದೂರದ ಗೋಡೆಯ ಮೂಲಕ ಹಾದುಹೋಗುತ್ತದೆ. ಇದರಿಂದ ಸೆಳೆಯಲ್ಪಟ್ಟ ಪಾಠವೇನೆಂದರೆ, ಪರಿಶುದ್ಧ ಗ್ರಂಥದ ಎಚ್ಚರಿಕೆಯ ಸಾಮರಸ್ಯದಲ್ಲಿ ಯಾರು ಪವಿತ್ರವಾದ ಅಥವಾ ಪರಿಶುದ್ಧಿಸಲ್ಪಟ್ಟ ಸ್ಥಿತಿಗೆ ಪ್ರವೇಶಿಸಿದ್ದಾರೋ (ಸತ್ಯದ ವಾಕ್ಯದಿಂದ ಹುಟ್ಟಿದವರು, ಮತ್ತು ಅದರಿಂದ ಜೀವಹೊಂದಿದವರೂ ಸಹ) ಮರಣಕರ ಪಾಪ ಮಾಡಿದರೆ – ಎರಡನೆಯ ಮರಣಪಾತ್ರರಾಗುತ್ತಾರೆ.

ಹೀಗೆ, ಆದುದರಿಂದ, ಅಕ್ಷರೇಖೆಗಿರುವ ಗುಂಡಿಯ ಸ್ಥಳದ ಸಂಬಂಧಕ್ಕೆ, ಅದರ ಮೇಲಿರುವ ಪಿರಮಿಡ್‌ನ ವ್ಯವಸ್ಥೆಯ ವಿಷಯದಲ್ಲಿ ಯಾವುದೇ ಮಹತ್ವವಿರುವು ದಾದರೆ – ಎರಡನೆಯ ಮರಣವು, ಅಂತ್ಯವಿಲ್ಲದ, ನಿರೀಕ್ಷೆಯಿಲ್ಲದ ನಾಶನವು ಅದರ ದಂಡವಾಗಿರುತ್ತದೆಂದು ತೋರಿಬರುತ್ತದೆ. ಅದು ಸಹಸ್ರಮಾನದ ಯುಗದಲ್ಲಿನ ಆಶೀರ್ವಾದಕರ ಸಮಯದಲ್ಲಿ ಮಾನವ ಸಮರ್ಪಕತೆ ಹೊಂದಿಕೊಳ್ಳಲು ನಿರಾಕರಿಸಿ ಇಚ್ಛಾಪೂರ್ವಕವಾಗಿ ಪಾಪಮಾಡುವವರಿಗೆ ಮಾತ್ರವಲ್ಲದೆ, ಅಶೀರ್ವಾದಗಳ ಅವಕಾಶಗಳಿರುವ ಸುವಾರ್ತಾಯುಗದಲ್ಲಿ ಪರಿಶುದ್ಧತೆ ಹೊಂದಿಕೊಂಡು, ನಂತರದಲ್ಲಿ ಕ್ರಿಸ್ತನ ಸಮರ್ಪಣೆ ಯನ್ನು ಮತ್ತು ಈ ಹಿಂದೆ ಅಂಗೀಕರಿಸಿ ಒಪ್ಪಿಕೊಂಡ ಹೋಲಿಸಿರುವ ನೀತಿವಂತಿಕೆಯ ನಿಲುವಂಗಿಯನ್ನು ನಿರಾಕರಿಸುವವರಿಗೂ ಸಹ.

ಗಮನಿಸಲು ಅರ್ಹವಾದ ಮತ್ತೊಂದು ಸಂಗತಿ ಏನೆಂದರೆ, ಮಹಾ ಪಿರಮಿಡ್ ಕಟ್ಟಡದ ತಳದ ಗೆರೆಯ ಮೇಲಿರುವ ಲಂಬವಾದ ಅಕ್ಷಾರೇಖೆ ಇದಾಗಿದೆ: ನಮ್ಮ ಕರ್ತನ ಮೊದಲ ಆಗಮನ ಮತ್ತು ಆತನ ಮರಣವು "ಬಾವಿಯ ಬಾಯಿ"ಯಿಂದ ಗುರುತಿಸಲ್ಪಟ್ಟಿದೆ. ಇವುಗಳು ಪಿರಮಿಡ್‌ನ ಅಕ್ಷರೇಖೆಯ ಆಚೆಯ ಬದಿಯಲ್ಲಿದೆ ಮತ್ತು ಇದು ಮಾನವ ಸ್ವಭಾವವನ್ನು ಪ್ರತಿನಿಧಿಸುತ್ತದೆ. ಮತ್ತು ಅದರ ಸ್ಥಳವು 'ರಾಣಿ ಕೊಠಡಿ'ಗೆ ಹೋಗುವ ಅದೇ ಮಾರ್ಗದಲ್ಲಿದ್ದು ಮಾನವ ಪರಿಪೂರ್ಣತೆಯನ್ನು ಚಿತ್ರಿಸುತ್ತದೆ ಎಂಬುದು ಸಹ ಗಮನಾರ್ಹವಾದುದು. ಈ ರೀತಿಯಲ್ಲಿ ಮಹಾ ಪಿರಮಿಡ್ ಹೇಳುವುದೇನೆಂದರೆ: "ಆತನು ಮಾಂಸಧಾರಿಯಾಗಿ ಮಾಡಲ್ಪಟ್ಟನು" – ಮನುಷ್ಯನಾದ ಯೇಸು ಕ್ರಿಸ್ತನು ಎಲ್ಲರ ಈಡುಬಲಿಯಾಗಿ ತನ್ನನ್ನೇ ಅರ್ಪಿಸಿದನು. ಆದಾಗ್ಯೂ ಆತನು ಯಾವುದೇ ಪಾಪವನ್ನು ತಿಳಿದಿರಲಿಲ್ಲ, ಪವಿತ್ರನೂ, ನಿರುಪದ್ರವಿಯೂ, ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನೂ ಆಗಿದ್ದು ಆದಾಮನ ವಂಶದ ಪಾಪಭರಿತ ಕೆಳಮುಖದ ಕ್ರಮದಲ್ಲಿ [ರೇಖಾ ಚಿತ್ರದಲ್ಲಿ 'ಗುಂಡಿ' (ಪಿಟ್) ಎಂಬುದಾಗಿ ಚಿತ್ರಿಸಲ್ಪಟ್ಟಿದೆ] ಆತನಿಗೆ ಯಾವುದೇ ಪಾತ್ರವಿರಲಿಲ್ಲ. ಇದಕ್ಕೂ ಮೇಲಾಗಿ, ಕೃತ್ರಿಮ ಗವಿಯ (Grotto) ಸ್ಥಳವು ಮತ್ತು ಅದು ಸ್ವಾಭಾವಿಕವಾಗಿದೆ, ಕತ್ತರಿಸಿದ್ದಲ್ಲ ಎಂಬ ಸತ್ಯವು ಮಹತ್ವವುಳ್ಳದ್ದು. ಅದು ಸ್ಪಷ್ಟವಾಗಿ ನಮ್ಮ ಕರ್ತನ ಮರಣವನ್ನು ಸಾಂಕೇತಿಸುತ್ತದೆ. ಅದು ಸ್ವಾಭಾವಿಕ ವಾದುದು ಎಂಬ ಸತ್ಯವು ನಮಗೆ ಕರ್ತನು ತನ್ನನ್ನೇ ಸಮರ್ಪಿಸಿಕೊಂಡದ್ದು ಸಮಯ ಸಾಧಕವಾದದ್ದಲ್ಲ, ಅದು ಮುಂಚೆಯೇ ಗೊತ್ತುಪಡಿಸಿದ್ದು, ಪಿರಮಿಡ್ಡಿನ ಕಾರ್ಯದಲ್ಲಿ ಸಂಕೇತಗೊಂಡಿರುವ ಯೋಜನೆಯು ಪ್ರಾರಂಭವಾಗುವ ಮುನ್ನವೇ ಯೆಹೋವನ ಯೋಜನೆಯಲ್ಲಿನ ಪೂರ್ವ ನಿಯೋಜಿತ ಸಂಗತಿ ಎಂಬುದನ್ನು ಬೋಧಿಸುತ್ತದೆ. ಅದು ಮಿರಮಿಡ್ಡಿನ ಗೆರೆಯ ಮೇಲಿನ ಸ್ಥಳದಲ್ಲಿದೆ ತಳದ ಗೆರೆಯ ಕೆಳಗಲ್ಲ ಎಂಬ ಸತ್ಯವು ಸತ್ಯವೇದದೊಂದಿಗಿನ ಸಾಮರಸ್ಯದ ಮತ್ತೊಂದು ಪಾಠವನ್ನು ಕಲಿಸುತ್ತದೆ. ಅದೇನೆಂದರೆ, ನಮ್ಮ ಕರ್ತನು ಪಾಪಿಗಳ ಈಡುಬಲಿಯಾಗಿ ಸತ್ತರೂ ಆತನು ಪಾಪಕ್ಕೆ ಇಳಿಯಲಿಲ್ಲ, ತನ್ನನ್ನು ಕೆಳದರ್ಜೆಗೆ ಇಳಿಸಿಕೊಳ್ಳಲಿಲ್ಲ, ಆದರೆ, ಆತನ ಮರಣವು ಸಹ ಪಿರಮಿಡ್ ರಚನೆಯ ತಳದ ಗೆರೆಯ ಮೇಲೆ ಚಿತ್ರಿಸಿದಂತೆ ದೇವಯೋಜನೆಯ ಮಿತಿ ಮತ್ತು ಬಂಧನದೊಳಗೇ ಇತ್ತು ಎಂಬುದೇ.

ಈಗ ಕೆಲವು ಕುತೂಹಲಕಾರಿ ಪ್ರಶ್ನೆಯು ಉದ್ಭವಿಸುತ್ತವೆ. ಮಹಾಕರೆಯು ಅಂತ್ಯವಾಗುವ ಸಮಯದ ಬಗೆಗಿನ ಪಿರಮಿಡ್ ಸಾಕ್ಷ್ಯವು ಇದೇ ವಿಷಯದ ಬಗ್ಗೆ ಇರುವ ಪರಿಶುದ್ಧ ಗ್ರಂಥಗಳ ಸಾಕ್ಷ್ಯವನ್ನು ಪುಷ್ಟೀಕರಿಸುತ್ತದೆಯೋ? ಪರಿಶುದ್ಧ ಗ್ರಂಥಗಳು ಈ ಕೃಪೆಗೆ ದೇವರ ಕರೆಯು ಮುಗಿಯುತ್ತದೆ ಎಂದು ದೃಢಪಡಿಸುವ ಸರಿಯಾದ ಸಮಯದಲ್ಲಿ

'ಗ್ರ್ಯಾಂಡ್ ಗ್ಯಾಲರಿ'ಯು ಕೊನೆಗೊಳ್ಳುತ್ತದೆ ಎಂಬುದನ್ನು ಇದು ತೋರಿಸುತ್ತದೆಯೋ? ಅಥವಾ ಅದು ನಾವು ಪರಿಶುದ್ಧ ಗ್ರಂಥಗಳಿಂದ ಕಲಿತುಕೊಂಡವುಗಳಿಗೆ ಇವು ವಿರೋಧಿಸುತ್ತವೆಯೋ? ಹಾಗೂ, ದೈವಿಕ ಸ್ವಭಾವಕ್ಕೆ ಕರೆಯು ಉದ್ದವಾದ ಅಥವಾ ಚಿಕ್ಕದಾದ ಕಾಲವನ್ನಾಗಿ ತೋರಿಸುತ್ತದೆಯೇ ? ಎಂಬಿವುಗಳು.

ಇದು ಮತ್ತೊಂದು ನಿರ್ಣಾಯಕ ಪರೀಕ್ಷೆಯಾಗಿದೆ. ಆದಾಗ್ಯೂ ಬೇರೆ ಎಲ್ಲರಿಗೂ ಪ್ರಮುಖವಾಗಿರುವ ದೇವರ ವಾಕ್ಯದ ಮತ್ತು ಅದರ ಅದ್ಭುತವಾದ ಸಾಕ್ಷ್ಯಗಳ ಪರೀಕ್ಷೆ ಅಲ್ಲ. ಆದರೆ ಈ ಕಲ್ಲಿನ "ಸಾಕ್ಷಿಯ" ಪರೀಕ್ಷೆಯಾಗಿದೆ. ಅದು ಸತ್ಯವೇದದ ಸಾಕ್ಷ್ಯವನ್ನು ದೃಢಪಡಿಸುವುದರ ಮೂಲಕ ಅದರ ದೈವಿಕ ವಾಸ್ತುಶಿಲ್ಪವನ್ನು ಸಾಬೀತುಪಡಿಸುತ್ತದೆಯೋ? ಅಥವಾ ವ್ಯತ್ಯಾಸವನ್ನು ಹೆಚ್ಚುಕಡಿಮೆಯಾಗಿ ತೋರುತ್ತದೆಯೋ? ಅದು ಸತ್ಯವೇದದ ವಿವರಣೆಯನ್ನು ವಿಶೇಷವಾಗಿ ಮತ್ತು ನಿರ್ದಿಷ್ಟವಾಗಿ ಸಮರ್ಥಿಸುವುದಾದರೆ ಅದು Dr Seissರವರು ನೀಡಿರುವ "A Miracle stone" ಎಂಬ ಹೆಸರನ್ನು ಬಹಳವಾಗಿ ಅರ್ಹಗೊಳಿಸುತ್ತದೆ.

ಹಾಗಿದ್ದರೆ, ಇದ್ದಕ್ಕಿಂತ ಕಡಿಮೆಯಾಗಿ ನಾವು ಏನನ್ನೂ ಹೇಳಲಾರೆವು. ಯಾಕೆಂದರೆ ಅದರ ಸಾಕ್ಷ್ಯವು ದೇವರ ಸಮಗ್ರ ಯೋಜನೆಯ ಎಲ್ಲಾ ವಿವರಣೆಗಳನ್ನು ನಾವು ಸತ್ಯವೇದದಿಂದ ಕಲಿತುಕೊಂಡಿರುವಂತೆಯೇ ಒಪ್ಪಿಕೊಳ್ಳುವುದಾಗಿದೆ. ಸತ್ಯವೇದದೊಂದಿಗಿನ ಅದರ ಅದ್ಭುತವಾದ ಹೊಂದಿಕೆಯು ಯಾವುದೇ ಅನುಮಾನಕ್ಕೆ ಎಡೆಮಾಡಿ ಕೊಟ್ಟಿಲ್ಲ. ಅಪೊಸ್ತಲರ ಮತ್ತು ಪ್ರವಾದಿಗಳ ಅದೇ ದೈವಿಕ ಪ್ರೇರಕನು ಈ ಸಾಕ್ಷ್ಯವನ್ನೂ ಪ್ರೇರೇಪಿಸಿದ್ದಾನೆ. ನಾವೂ ಈ ಕೆಲವು ಸಾಮರಸ್ಯಗಳನ್ನು ವಿಶಿಷ್ಟವಾಗಿ ಪರೀಕ್ಷಿಸೋಣ.

ಈ ಲೋಕದಲ್ಲಿ ಅನ್ಯಜನಗಳ ಶಕ್ತಿಯು ಪೂರ್ಣವಾಗಿ ಮುಕ್ತಾಯವಾಗುವುದನ್ನೂ ಮತ್ತು ಸಂಕಟದ ಸಮಯವು ಅದನ್ನು ತೊಡೆದು ಹಾಕುವುದನ್ನೂ ಪರಿಶುದ್ಧ ಗ್ರಂಥವು ತೋರಿಸುತ್ತದೆ ಎಂಬುದನ್ನು ನಮ್ಮ ಮನಸ್ಸಿಗೆ ತಂದುಕೊಳ್ಳೋಣ. ಇದು 1914ರ ಅಂತ್ಯವನ್ನು ಅನುಸರಿಸುತ್ತದೆ. ಆ ದಿನಾಂಕದ ಸ್ವಲ್ಪ ಸಮಯದ ಹತ್ತಿರ ಕ್ರಿಸ್ತನ ಸಭೆಯ ಕಡೆಯ ಸದಸ್ಯರುಗಳು ಬದಲಾವಣೆ ಹೊಂದುತ್ತಾರೆ ಮತ್ತು ಮಹಿಮೆ ಹೊಂದುತ್ತಾರೆ. ದೇವರ ವಾಕ್ಯಗಳು ಅನೇಕ ವಿಧದಲ್ಲಿ ಸುಗ್ಗಿಯ ಕಾಲಚಕ್ರಗಳಿಂದ, ದಾನಿಯೇಲನ 1335 ದಿನಗಳು, ಸಮಾನಾಂತರ ಹಂಚಿಕೆ ಮೊದಲಾದವುಗಳು, ಸುಗ್ಗಿಯ ಕಾಲ ಅಥವಾ ಈ ಯುಗದ ಅಂತ್ಯವು ಅಕ್ಟೋಬರ್ 1874ರಲ್ಲಿ ಪ್ರಾರಂಭವಾಗಬೇಕಾಗಿದೆ. ಆಗ ಮಹಾ ಕೊಯ್ಲುಗಾರನು ಪ್ರತ್ಯಕ್ಷನಾಗುವ ಸಮಯ ಯುಕ್ತವಾಗುತ್ತದೆ ಎಂಬುದನ್ನು ಪರಿಶುದ್ಧ ಗ್ರಂಥವು ಸಾಬೀತುಗೊಳಿಸುತ್ತದೆ ಎಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಏಳು ವರ್ಷಗಳ ನಂತರದಲ್ಲಿ – 1881ರ ಅಕ್ಟೋಬರ್‌ನಲ್ಲಿ – ಮಹಾಕರೆಯು ಮುಕ್ತಾಯಗೊಳ್ಳುತ್ತದೆ. ಆದರೂ, ಯಾವುದೇ ಸಾಮಾನ್ಯ ಕರೆ ಮಾಡಲ್ಪಡದಿದ್ದರೂ ಕರೆಯಲ್ಪಟ್ಟ ಕೆಲವರು ಪರೀಕ್ಷಿಸಿದಾಗ ಅನರ್ಹರಾಗಿ ಕಂಡು ಬಂದ ಕಾರಣ, ಆ ಸ್ಥಳಗಳನ್ನು ತುಂಬಿಕೊಳ್ಳುವಂತೆ ಕೆಲವರನ್ನು ನಂತರದಲ್ಲಿ ಅದೇ ಭಾಗ್ಯಕ್ಕೆ ಸೇರಿಸಲಾಗುವುದು. ಆದ್ದರಿಂದ, ಯಾವ ರೀತಿಯಲ್ಲಿ ಕಲ್ಲಿನ ಸಾಕ್ಷ್ಯವು ಅದೇ ದಿನಗಳ ಬಗ್ಗೆ ಸಾಕ್ಷಿ ಹೇಳುತ್ತದೆ ಮತ್ತು ಅದೇ ಪಾಠಗಳನ್ನು ವಿಶದಗೊಳಿಸುತ್ತದೆ ಎಂಬುದರ ರೀತಿಯಾಗಿ ಗಮನಿಸಿರಿ:

'ಗ್ರ್ಯಾಂಡ್ ಗ್ಯಾಲರಿ'ಯ ನೆಲದ ರೇಖೆಯು ಉತ್ತರದಿಂದ ದಕ್ಷಿಣ ಗೋಡೆಯವರೆಗೆ ಇತ್ತೀಚಿನ ವರ್ಷಗಳಲ್ಲಿ ಎರಡು ಸಾರಿ ಜಾಗರೂಕತೆಯಿಂದ ಅಳೆಯಲಾಗಿದೆ ಮತ್ತು ಮೂರು ನಿರ್ದಿಷ್ಟವಾದ ಅಳತೆಗಳ ಗುಂಪನ್ನು ಪಡಕೊಳ್ಳಲಾಗಿದೆ. ಮೊದಲನೆಯ ಅಳತೆ (1) ಉತ್ತರ ತುದಿಯ ಗೋಡೆಯಿಂದ ಮೆಟ್ಟಿಲವರೆಗೆ ಅಳೆಯಲಾಗಿದೆ – (ನಂತರ ಅದರ ಉಬ್ಬು ಅಥವಾ ಮುಂದಿನದರಲ್ಲಿ ಅದರ ಮೇಲಣ ಮೇಲ್ಮೈ ಹೊಂದಿಕೊಂಡಂತೆ 'ಗ್ರ್ಯಾಂಡ್ ಗ್ಯಾಲರಿ'ಯ ನೆಲದ ಮೇಲಣ ಮೇಲ್ಮೈ ಇವುಗಳನ್ನು ಬಿಟ್ಟು). ಎರಡನೆಯ ಅಳತೆ (2) ಮೆಟ್ಟಿಲಿನ ಮೂಲಕ (ಮೆಟ್ಟಿಲು ಅಲ್ಲಿ ಇಲ್ಲವೋ ಎಂಬಂತೆ) ಅಳೆದ ಅಳತೆ; ಮೂರನೆಯ ಅಳತೆ (3) ಇದು ನೆಲದ ಸಂಪೂರ್ಣ ಮೇಲ್ಮೈಯನ್ನು ಮತ್ತು ಮೆಟ್ಟಲಿನ ಮುಂದಿನ ಅಥವಾ ಉಬ್ಬಿನ, ಅದರ ಸಮಗ್ರ ಮೇಲಣ ಮೇಲ್ಮೈನ ಅಳತೆಯನ್ನು ನೀಡುತ್ತದೆ. ಪ್ರೊ॥ ಸ್ಮಿತ್‌ರವರು ಈ ಅಳತೆಗಳಲ್ಲಿ ಮೊದಲನೆಯದನ್ನು (1) 1874 ಪಿರಮಿಡ್ ಅಂಗುಲಗಳನ್ನಾಗಿ ಎರಡನೆಯದನ್ನು (2) 1881 ಪಿರಮಿಡ್ ಅಂಗುಲಗಳನ್ನಾಗಿ ಮತ್ತು ಮೂರನೆಯದನ್ನು (3) 1911 ಪಿರಮಿಡ್ ಅಂಗುಲಗಳ ಉದ್ದವನ್ನಾಗಿ ಕಂಡು ಕೊಂಡರು. ಮಿ. ಫ್ಲಿಂಡ್ಸ್ ಪೆಟ್ರಿ (Mr. Flinders Petrie) ಈ ಅಳತೆಗಳನ್ನು 8/10 ಅಂಗುಲ ಉದ್ದವಾಗಿ ಅಳೆದಿದ್ದಾರೆ. ಸಮಂಜಸವಾದ ಅಂದಾಜು (1) 1875 (2) 1882 ಮತ್ತು (3) 1911 ಪಿರಮಿಡ್ ಅಂಗುಲಗಳು ಎಂಬುದು ಸರಿಯಾದ ಅಳತೆಗೆ ಹತ್ತಿರವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಈಗ ನಾವು ವಿಚಾರಿಸುವುದೇನೆಂದರೆ, ಮಾರ್ಗದ ನೆಲರೇಖೆಯ ಅಂಗುಲಗಳು ಒಂದೊಂದು ಪಿರಮಿಡ್‌ನ ವಿದ್ಯಾರ್ಥಿಗಳು ಹೇಳುವಂತೆ ಮತ್ತು ಒಪ್ಪಿಕೊಳ್ಳುವಂತೆ ಒಂದು ವರ್ಷವನ್ನು ಪ್ರತಿನಿಧಿಸುವುದಾದರೆ, 'ಗ್ರ್ಯಾಂಡ್ ಗ್ಯಾಲರಿ'ಯ ಈ ಅಳತೆಗಳು ಯಾವ ದಿನಾಂಕವನ್ನು 'ಗ್ರ್ಯಾಂಡ್ ಗ್ಯಾಲರಿ'ಯಲ್ಲಿ ಸಂಕೇತಿಸಿರುವ ದೈವಿಕ ಸ್ವಭಾವದ ಮಹಾಕರೆಯ ಅಂತ್ಯವೆಂದು ಸೂಚಿಸುತ್ತದೆ? ನಮ್ಮ ಉತ್ತರವೆಂದರೆ, ಈ ಅಂಗುಲ–ವರ್ಷಗಳನ್ನು ನಮ್ಮ ಸಮಯದ ಪ್ರಸ್ತುತ ಎಣಿಕೆಗೆ ಅನ್ವಯಿಸುವಾಗ, ನಾವು ನಮ್ಮ ಕ್ರಿ.ಶ.ದ ದಿನಾಂಕ ಸರಿಯಾದ ದಿನಕ್ಕೆ ಒಂದು ವರ್ಷ ಮೂರು ತಿಂಗಳಷ್ಟು ಕಡಿಮೆಯಾಗಿದೆ (ಸಂಪುಟ II, p. 54–62ನಲ್ಲಿ ತೋರಿಸಿರುವಂತೆ) ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಇದು ಕ್ರಿ.ಪೂ.ದ ಯಾವುದೇ ನಿಗದಿತ ದಿನಾಂಕದಿಂದ ಅಥವಾ ಕ್ರಿ.ಶ.ದ ನಿಗದಿತ ದಿನಾಂಕದಿಂದ ಲೆಕ್ಕಹಾಕುವಾಗ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂಬುದನ್ನು ಈ ಪ್ರಕರಣದಲ್ಲಿ ಮಾನ್ಯ ಮಾಡಬೇಕು. ಇದೇ ಘಟನೆಯಲ್ಲಿ, ಯೇಸುವಿನ ಜನನವು, ಪ್ರಾರಂಭದ ದಿನವಾದಲ್ಲಿ, ನಮ್ಮ ಕ್ರಿ.ಶ.ದಲ್ಲಿ ಕಂಡುಬರುವ ತಪ್ಪನ್ನು ಸರಿಯಾದ ಫಲಿತಾಂಶವನ್ನು ತಲಪುವಂತೆ ಅನುಮತಿಸಬೇಕು. ನಿರಾಡಂಬರತೆಗಾಗಿ, ನಮ್ಮ ತಪ್ಪಾದ ಕ್ರಿ.ಶ.ವನ್ನು ನಿರ್ದಿಷ್ಟ ಪ್ರಮಾಣವಾಗಿ ತೆಗೆದುಕೊಳ್ಳೋಣ ಮತ್ತು ಪಿರಮಿಡ್ ಅಂಕೆಗಳನ್ನು ಇದಕ್ಕೆ ಅನುಗುಣವಾಗಿ 1¼ ಅಂಗುಲಗಳನ್ನು ಅವುಗಳಿಂದ ಕಳೆದು ಅವು ನಮ್ಮ ಸಾಮಾನ್ಯ ಎಣಿಕೆಗೆ ಹೊಂದಿಕೊಳ್ಳುವಂತೆ ಅಳೆಯೋಣ. ಆ ರೀತಿಯಲ್ಲಿ ಕಡಿಮೆಗೊಳಿಸುವಾಗ ಅವು (1) 1875 – 1¼ = 1873¾; (2) 1882 – 1¼ = 1880¾ ಮತ್ತು (3) 1911 – 1¼ = 1909¾, ಮತ್ತು (a) ಅಕ್ಟೋಬರ್ 1874, (b) ಅಕ್ಟೋಬರ್ 1881 ಮತ್ತು (c) ಅಕ್ಟೋಬರ್ ಕ್ರಿ.ಶ. 1910 ಎಂಬುದಾಗಿ ಕೊಡುತ್ತವೆ.

ಈ ಮೂರುಪಟ್ಟು ಮುಗಿಯುವಿಕೆಯು ನಾವು ಪರಿಶುದ್ಧ ಗ್ರಂಥದಲ್ಲಿ ಕಲಿಸಿಕೊಟ್ಟಂತೆ ಇರುತ್ತದೆ; ಮತ್ತು ಸುಗ್ಗಿಯು, ಯುಗದ ಅಂತ್ಯವು 1874ರಲ್ಲಿ ಮುಟ್ಟಿಯದೆ. ಮತ್ತು ಸಮಂಜಸವಾದ 'ಕರೆ'ಯು 1881ರ ಅಕ್ಟೋಬರ್‌ನಲ್ಲಿ ಮುಕ್ತಾಯಗೊಂಡಿದೆ. ಅದೇ ಸಮಯದಲ್ಲಿ ಅವಧಿಯೊಂದು ಅನುಸರಿಸುತ್ತದೆ. ಅದರಲ್ಲಿ ಸಾಮಾನ್ಯ ಕರೆಯು ಅಂತ್ಯಗೊಂಡಿದ್ದರೂ, ಅದರ ವಿಶೇಷ ಪ್ರಯೋಜನಗಳನ್ನು ಅರ್ಹರಾದ ಕೆಲವರಿಗೆ ವಿಸ್ತರಿಸಲಾಗುವುದು ಮತ್ತು ಆಗಲೇ ಕರೆಯಲ್ಪಟ್ಟವರಲ್ಲಿ ಕೆಲವರು ಅವರಿಗಾಗಿ ಸಿದ್ಧಪಡಿಸಿರುವ ಕಿರೀಟಕ್ಕೆ ಅನರ್ಹರೆಂದು ಪರೀಕ್ಷೆಯಲ್ಲಿ ಕಂಡುಬರುವಾಗ, ಆ ಸ್ಥಳವನ್ನು ಅವರಿಗೆ ಕರೆಯನ್ನು ಅಂಗೀಕರಿಸುವಾಗ ನೀಡಲಾಗಿತ್ತು. ಪ್ರತಿಷ್ಠೆ ಗೊಂಡವರ ಸೂಕ್ಷ್ಮ ಪರಿಶೀಲನೆ ಎಷ್ಟು ದೀರ್ಘಕಾಲ ನಡೆಯುವುದು? ಆ ಸಮಯದಲ್ಲಿ ಅನರ್ಹರಾದವರ ಕಿರೀಟಗಳನ್ನು ಬೇರೆ ಕೆಲವರಿಗೆ ನೀಡಲಾಗುವುದು ಮತ್ತು ಅವರುಗಳ ಹೆಸರನ್ನು ಅಳಿಸಲ್ಪಟ್ಟ ಹೆಸರುಗಳ ಸ್ಥಾನದಲ್ಲಿ ಬರೆಯಲಾಗುವುದು (ಪ್ರಕಟನೆ 3: 5,11). ನಾವು ಇನ್ನೂ ನೋಡಿರುವಂತೆ ಸತ್ಯವೇದವು ಸೂಚಿಸುವುದಿಲ್ಲ; ಆದರೆ ಈ ದಿನಾಂಕ, 1910, ಪಿರಮಿಡ್‌ನಿಂದ ಸೂಚಿಸಲ್ಪಟ್ಟಿದೆ, ಸತ್ಯವೇದವು ಒದಗಿಸಿದ ದಿನಾಂಕಗಳೊಂದಿಗೆ ಇದು ಉತ್ತಮವಾಗಿ ಸಾಮರಸ್ಯಗೊಳ್ಳುವದಿಲ್ಲ. ಅನ್ಯಜನರ ಸಮಯವು ಸಂಪೂರ್ಣವಾಗಿ ಮುಕ್ತಾಯ ಗೊಳ್ಳುವುದಕ್ಕಿಂತ ಕೆಲವು ವರ್ಷಗಳ ಹಿಂದೆ, ನಾವು ಕರ್ತನ ಮಾತುಗಳನ್ನು ನೆನಪು ಮಾಡುವಾಗ, ಜಯಶಾಲಿಗಳಾದವರು ಲೋಕದ ಮೇಲೆ ಬರಲಿರುವ ಅತಿ ತೀವ್ರವಾದ ತೊಂದರೆಗಳನ್ನು ತಪ್ಪಿಸಿಕೊಳ್ಳುವಂತೆ ಎಣಿಸಲ್ಪಡುವರು ಎಂಬ ಉಲ್ಲೇಖವನ್ನು 1914ರ ನಂತರದ ಅರಾಜಕತೆಯ ತೊಂದರೆ ಎಂದು ಅರ್ಥಮಾಡಿಕೊಳ್ಳದೆ ಅದು ಮುಖ್ಯವಾಗಿ 1910ರಲ್ಲಿ ಸಭೆಯ ಮೇಲೆ ಬರಲಿರುವ ತೊಂದರೆಯೆಂದು ತಿಳಿದುಕೊಳ್ಳಬೇಕು (Note No. VII).

ಇದು ಕಲ್ಲಿನ ಸಾಕ್ಷಿ ಮತ್ತು ಸತ್ಯವೇದ ಸಾಕ್ಷಿ ಇವುಗಳ ನಡುವಣ ಅತ್ಯಂತ ಗಣನೀಯವಾಗಿ ಒಪ್ಪಿಗೆಯಾಗಿದೆ ಅಲ್ಲವೆ? ಅಕ್ಟೋಬರ್ 1874 ಮತ್ತು ಅಕ್ಟೋಬರ್ 1881 ಇವುಗಳು ನಿಖರವಾದವುಗಳು. ಅದೇ ಸಮಯದಲ್ಲಿ ದಿನಾಂಕ 1910ನ್ನು ಸತ್ಯವೇದದಲ್ಲಿ ನೀಡಿಲ್ಲವಾದರೂ, ಅದು ಸಭೆಯ ಮುಖ್ಯವಾದ ಘಟನೆಯ ಅನುಭವಕ್ಕೆ ಮತ್ತು ಅಂತಿಮ ಪರೀಕ್ಷೆಗೆ ಸಮಂಜಸವಾಗಿದೆ ಎಂದು ತೋರಿಬರುತ್ತದೆ, ಅದೇ ಸಮಯದಲ್ಲಿ 1914 ಅದು ಅಂತ್ಯಗೊಳ್ಳುವಾಗ ಸುವ್ಯಕ್ತವಾಗಿ ನಿರೂಪಿಸಲ್ಪಟ್ಟಿದೆ, ಅದರ ನಂತರ ಲೋಕದ ತೊಂದರೆಯು ಬರಲಿದೆ ಮತ್ತು ಇದರಲ್ಲಿ ಕೆಲವು 'ಮಹಾ ಸಮೂಹದವರು' ಪಾಲುದಾರರಾಗಬೇಕಿದೆ. ಈ ಸಂಬಂಧದಲ್ಲಿ ನಾವು 1914 – ಎಂಬ ಈ ದಿನಾಂಕದ ಮಿತಿಯು – ಕ್ರಿಸ್ತನ ಸಂಪೂರ್ಣ ದೇಹದ ಆಯ್ಕೆ ಮತ್ತು ಶೋಧನೆ ಮತ್ತು ಮಹಿಮೆ ಹೊಂದುವವರ ಸಾಕ್ಷಿ ಮಾತ್ರವಲ್ಲ, ಕೆಲವು ಪ್ರತಿಷ್ಠೆ ಹೊಂದಿದ ವಿಶ್ವಾಸಿಗಳ ದೊಡ್ಡ ಸಮೂಹಗಳ ಶುದ್ಧೀಕರಣವೂ ಆಗಿದೆ, ಅವರು ಅಂಜಿಕೆ ಮತ್ತು ಬಲಹೀನ ಹೃದಯದಿಂದ ದೇವರಿಗೆ ಅಂಗೀಕಾರಾರ್ಹವಾದ ಸಮರ್ಪಣೆಗಳನ್ನು ಅರ್ಪಿಸಲು ಸೋತು ಹೋದರು. ಮತ್ತು ಆ ಕಾರಣದಿಂದ ಅವರು

ಈ ಲೋಕದ ಮನೋಭಾವನೆಗಳಿಂದ ಮತ್ತು ದೃಷ್ಟಿಕೋನಗಳಿಂದ ಕಲುಷಿತರಾಗಿದ್ದಾರೆ. ಇವರಲ್ಲಿ ಕೆಲವರು ಈ ಅವಧಿಯ ಮುನ್ನವೇ ಮಹಾಸಂಕಟದಿಂದ ಹೊರಬರಬಹುದು (ಪ್ರಕಟನೆ 7:14). ಇವರಲ್ಲಿ ಅನೇಕರು ಅನೇಕ ಹಣಜಿಗಳ ಕಟ್ಟುಗಳೊಂದಿಗೆ ಸುಡಲ್ಪಡುವಂತೆ ನಿಕಟವಾಗಿ ಬಂಧಿಸಲ್ಪಟ್ಟಿದ್ದಾರೆ ಮತ್ತು ಸುಗ್ಗಿಯ ಕಾಲದ ಎರಡನೆಯ ಅಂತ್ಯದ ತೀಕ್ಷ್ಣವಾದ ಸಂಕಟಗಳು ಬಾಬೇಲಿನ ದಾಸತ್ವದ ಬಂಧಿತ ಕಟ್ಟುಗಳನ್ನು ಸುಡುವಾಗ ಇವರುಗಳು ಬೆಂಕಿಯಿಂದ ತಪ್ಪಿಸಿಕೊಂಡು ರಕ್ಷಿಸಲ್ಪಡುವವರೆಗೆ ಇದಾಗದು. ಅವರು ಬಾಬೇಲಿನ ಸಂಪೂರ್ಣ ನಾಶನವನ್ನು ಕಾಣಬೇಕು ಮತ್ತು ಅದರ ಪಿಡುಗನ್ನು ಸ್ವಲ್ಪಮಟ್ಟಿಗಾದರೂ ಅನುಭವಿಸಲೇ ಬೇಕು (ಪ್ರಕಟನೆ 18:4). 1910 ರಿಂದ 1914ರ ಕೊನೆಯವರೆಗಿನ ನಾಲ್ಕು ವರ್ಷಗಳು ಆ ರೀತಿಯಲ್ಲಿ ಪಿರಮಿಡ್‌ನಲ್ಲಿ ಸೂಚಿತವಾಗಿದ್ದು ನಿಸ್ಸಂದೇಹವಾಗಿ ಅದು ಸಭೆಯ ಪರಿಶೋಧನೆಗೆ ಪುಟಕ್ಕೆ ಹಾಕಲ್ಪಡುವ ಪರೀಕ್ಷೆಯ ಕಾಲವಾಗಿದೆ (1 ಕೊರಿಂಥ 3:15) ಮತ್ತು ಈ ಲೋಕದ ಅರಾಜಕತ್ವವನ್ನು ಅನುಸರಿಸುವುದು ಮತ್ತು ಇದು ದೀರ್ಘಕಾಲದವರೆಗೂ ಇರುವುದಿಲ್ಲ :– "ಕರ್ತನು ಆ ದಿನಗಳನ್ನು ಕಡಿಮೆ ಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ಆರಿಸಿಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡುವನು" (ಮತ್ತಾಯ 24:22).

ಇವುಗಳೆಲ್ಲವೂ ಪಿರಮಿಡ್‌ನ ಅದ್ಭುತವಾದ ಸಂಕೇತಗಳು ಅಷ್ಟೇ ಅಲ್ಲ. ಅವುಗಳು ದೇವರ ಯೋಜನೆ ಯೊಂದಿಗೆ ಅಸಾಧಾರಣವಾದ ಸಾಮರಸ್ಯವನ್ನು ಹೊಂದಿದೆ ಎಂಬುದನ್ನು ಮತ್ತೊಂದು ಗಣನೀಯ ವೈಶಿಷ್ಟ್ಯದಲ್ಲಿ ತೋರಿಸಲಾಗಿದೆ. ಈ ಎರಡೂ ಮಹಾ ಘಟನೆಗಳ ದಿನಾಂಕಗಳು ಈ ಯುಗದ ಅಂತ್ಯದೊಂದಿಗೆ ಜೋಡಿಸಲ್ಪಟ್ಟಿದೆ ಎಂಬುದನ್ನು ನಾವು ನಿರೀಕ್ಷಿಸಬಹುದು. (1) ನಮ್ಮ ಕರ್ತನ ಎರಡನೆಯ ಆಗಮನ, (2) ಸುಗ್ಗಿಯ ಪ್ರಾರಂಭ, ಇದನ್ನು ಯಾವುದಾದರೂ ರೀತಿಯಲ್ಲಿ 'ಗ್ರ್ಯಾಂಡ್ ಗ್ಯಾಲರಿ'ಯ ಮೇಲಣ ತುದಿಯಲ್ಲಿ ಗುರುತಿಸಲಾಗಿದೆ, ಕರ್ತನ ಮರಣ ಹಾಗೂ ಪುನರುತ್ಥಾನವೂ ಸಹ "ಬಾವಿ" (Well) ಯ ಕೆಳಗಣ ತುದಿಯಲ್ಲಿ ಗುರುತಿಸಲ್ಪಟ್ಟಿದೆ. ಇದರಲ್ಲಿ ನಾವು ನಿರಾಶೆ ಹೊಂದುವುದಿಲ್ಲ. ಪೂರ್ವ ಗೋಡೆಯ ಮೇಲಣ ದಕ್ಷಿಣ ತುದಿಯ ಮೆಲ್ಗಡೆಯ ಮೆಟ್ಟಿಲುಗಳ ಬಹಳ ಎತ್ತರದಲ್ಲಿ 'ಅರಸನ ಕೊಠಡಿ'ಯ ಇನ್ನೂ ಪೂರೈಸದ ಮೇಲಣ ಜಾಗಕ್ಕೆ ಸೇರುವ ಸ್ಥಳದಲ್ಲಿ ರೇಖಾ ಚಿತ್ರದಲ್ಲಿ ತೋರಿಸಿರುವಂತೆ ಒಂದು ರಂಧ್ರವಿದೆ. ಪಿರಮಿಡ್‌ನ ಸಾಂಕೇತಿಕ ಭಾಷೆಯಲ್ಲಿ ಆ ರಂಧ್ರವು "ಇಲ್ಲಿ ಪರಲೋಕದವನು ಪ್ರವೇಶಿಸಿದನು. ಆತನಿಗೆ ನಡೆಯಲು ಯಾವುದೇ ನೆಲದ ಅವಶ್ಯವಿಲ್ಲ. ಆದರೆ ಆ ಗಾಳಿಯಂತೆ ಬಂದು ಹೋಗುವಾತನು" ಎಂದು ತಿಳಿಸುತ್ತದೆ. ಪ್ರೊ॥ ಸ್ಮಿತ್‌ರವರು ಮಾಡಿದ 'ಗ್ರ್ಯಾಂಡ್ ಗ್ಯಾಲರಿ'ಯ ದಕ್ಷಿಣ ಗೋಡೆಯ ಜಾಗರೂಕ ಅಳತೆಯು ಅದು ನಿಖರವಾಗಿ ಸಮಕೋನ ದಲ್ಲಿರುವದಿಲ್ಲ, ಆದರೆ ಮೇಲುಗಡೆ ಏಳು ಇಂಚುಗಳವರೆಗೆ ಬಾಗಿದೆ (Prof. Piazzi smyth's report) ಎಂದು ನಮಗೆ ತಿಳಿಸುತ್ತದೆ. ಪಿರಮಿಡ್ ಈ ರೀತಿಯಲ್ಲಿ ನಮಗೆ "ಮಹಾ ಕರೆಯು ಅಂತ್ಯವಾಗುವುದಕ್ಕೆ ಏಳು ವರ್ಷಗಳ ಮುಂಚೆ (ಅಕ್ಟೋಬರ್ 1881) ಪರಲೋಕದ ಮಹಾತ್ಮನೊಬ್ಬನು ಪ್ರವೇಶಿಸುತ್ತಾನೆ" ಎಂದು ಹೇಳುತ್ತದೆ. ಮತ್ತು ಅದು ಮುಂದುವರೆದು ಅಕ್ಟೋಬರ್ 1874ರ ನಂತರದಲ್ಲಿ ದಕ್ಷಿಣ ಗೋಡೆಯ ಇಳಿಜಾರು ಸೂಚಿಸುವಂತೆ ಕರೆಯು ಮುಕ್ತಾಯಕ್ಕೆ ಬರುತ್ತದೆ ಮತ್ತು 1881ರಲ್ಲಿ ಪೂರ್ಣವಾಗಿ ಮುಕ್ತಾಯವಾಗುತ್ತದೆ. ಇದು, ಗಮನಿಸುವಂತೆ ಇದರಲ್ಲಿ ಹೇಳಿರುವ ಸತ್ಯವೇದದ ಸಾಕ್ಷ್ಯದ ಮತ್ತು STUDIES IN SCRIPUTURESನ ಹಿಂದಿನ ಸಂಪುಟಗಳಲ್ಲಿ ನೀಡಿರುವ ಮುಖ್ಯ ಅಂಶಗಳಿಗೆ ಕರಾರುವಾಕ್ಕಾಗಿ ಅನುಗುಣವಾಗಿದೆ.

ಸಮಯಗಳ ಮತ್ತು ಕಾಲಗಳ ಬಗ್ಗೆ ಸತ್ಯವೇದದ ಪ್ರಸ್ತುತಿಯನ್ನು ಅರಿತುಕೊಂಡಿರುವ ನಾವು ಈ ಪಿರಮಿಡ್ಡಿನ ಅಳತೆಗಳನ್ನು ತೆಗೆದುಕೊಳ್ಳುವಲ್ಲಿ ಮಾಡಬೇಕಾದುದು ಏನೂ ಇಲ್ಲವೆಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅದನ್ನು ತೆಗೆದುಕೊಂಡವರಿಗೆ, ಅದನ್ನು ತೆಗೆದುಕೊಂಡ ಸಮಯದಲ್ಲಿ ಪ್ರವಾದನೆಗಳು ಅದಕ್ಕೆ ಅನ್ವಯಿಸುವದೆಂದು ಅವರಿಗೆ ತಿಳಿದಿರಲಿಲ್ಲ, ನಮಗೆ ತಿಳಿದಂತೆ ಇದುವರೆಗೆ ಸಹಾ ಅವರಿಗೆ ಗೊತ್ತಿಲ್ಲ. ಆದುದರಿಂದ, ಚರಿತ್ರೆಯ ಆರು ಸಾವಿರ ವರ್ಷಗಳಿಗೆ ಸಂಬಂಧಿಸಿದ ಸಂಗತಿಯಲ್ಲಿ ಅಂಥಾಃ ನಿಖರತೆಯು ಒಂದು ಕಡೆ, ಪಿರಮಿಡ್‌ನ ಅಳತೆಗಳ ಸಾವಿರಾರು ಅಂಗುಲಗಳು ಒಂದು ಕಡೆ ಇವುಗಳು ಕೇವಲ ಅಕಸ್ಮಿಕವೋ? ಕಾಕತಾಳಿಯವೋ? ಎಂದು ನಾವು ಕೇಳುತ್ತೇವೆ. ಇಲ್ಲ, ನಿಜವಾಗಿಯೂ ಸತ್ಯವು ಕಲ್ಪನಾ ಕಥೆಗಳಿಗಿಂತ ಆಶ್ಚರ್ಯಕಾರಿಯಾಗಿದೆ. "ಇದು ಕರ್ತನಿಂದಲೇ ಆಯಿತು. ಇದು ನಮ್ಮ ಆಶ್ಚರ್ಯವಾಗಿ ತೋರುತ್ತದೆ".

ಮುಂದುವರೆದು, ಸಾಮಾನ್ಯವಾದ ಸುವಾರ್ತಾ ಕರೆಯ ವಿಶೇಷ ಸವಲತ್ತುಗಳು ಮುಗಿದುಹೋಗುವಾಗ (ಅಕ್ಟೋಬರ್ 1881), ಈ ಲೋಕದ ಆಶೀರ್ವಾದಗಳು

ಪ್ರಾರಂಭವಾಗುವಂತಹ ಉಚಿತತೆಯು ಕಂಡುಬರುತ್ತದೆ. ಅದರ ಮೇಲಣ ಕೊನೆಯಲ್ಲಿ ಗುರುತಿಸಲ್ಪಡುವ 'ಬಾವಿ'ಯು ಬರಲಿರುವ ಆಶೀರ್ವಾದವನ್ನು ಸುರಕ್ಷಿತಗೊಳಿಸುವ ಈಡುಬಲಿಯಾಗಿದ್ದು ಅದು ಕೆಳಗಣ ತುದಿಯಲ್ಲಿ ಕಂಡುಬರುತ್ತದೆ (ಅಲ್ಲಿ ಅದು ಕೆಳಮುಖ ಹಾದಿಯನ್ನು ಸಂಧಿಸುತ್ತದೆ) ಮತ್ತು ಅದು ಪುನರ್‌ವಶದ ಆಶೀರ್ವಾದವು ಲೋಕವನ್ನು ತಲುಪುವ ದಿನಾಂಕವನ್ನು ಗುರುತಿಸುತ್ತದೆ. ಯೆಹೂದ್ಯ ಮತ್ತು ಸುವಾರ್ತಾ ಯುಗದ ಆಯ್ಕೆಗಳು ಮುಗಿಯುವಾಗ, ಈಡುಬಲಿಯ ಲಾಭಗಳು ಈ ಲೋಕದ ಕುಟುಂಬಗಳನ್ನು ಆಶೀರ್ವದಿಸಲು ಪ್ರಾರಂಭಿಸುತ್ತವೆ ಎಂದು ತಿಳಿಸುವಂತಿದೆ.

ವಿಶೇಷ ಕರೆಯ ಸುವಾರ್ತಾ ಯುಗದ 1881ನ್ನು ಸ್ಪಷ್ಟವಾಗಿ ಗುರುತುಪಡಿಸಿದರೆ ಅದರ ಪುನರ್‌ವಶದ ಆಶೀರ್ವಾದ ದಿನಾಂಕವು ಯುಕ್ತವಾಗಿ ಪ್ರಾರಂಭ ವಾಗುತ್ತದೆಂದು ತಿಳಿದು ಅದನ್ನು ನಾವು ಅಳವಡಿಸಿಕೊಳ್ಳುವುವರಾದರೆ, ಮತ್ತು "ಬಾವಿಯ" ಕೆಳಗಣ ಕೊನೆಯನ್ನು ಆ ದಿನಾಂಕವನ್ನು (1881) ಗುರುತಿಸುವುದೆಂದು ಗಣನೆಗೆ ತೆಗೆದುಕೊಳ್ಳುವವರಾದರೆ ಆ ಪ್ರವೇಶ ದ್ವಾರದೊಂದಿಗೆ ಹಿಂದಕ್ಕೆ ಪಿರಮಿಡ್‌ನ 'ಮೂಲ ಪ್ರವೇಶದ್ವಾರ'ಕ್ಕೆ ಅಳತೆ ಮಾಡುವಾಗ ಯಾವುದೋ ಒಂದು ಆಸಕ್ತಿಯುಳ್ಳ ವಿಷಯವನ್ನು ನಾವು ಕಂಡುಕೊಳ್ಳುತ್ತೇವೆ. ಈ ದೂರವನ್ನು ನಾವು 3826 ವರ್ಷಗಳನ್ನು ಪ್ರತಿನಿಧಿಸುವ 3826 ಪಿರಮಿಡ್ ಅಂಗುಲಗಳು ಎಂದು ಕಂಡುಕೊಳ್ಳುತ್ತೇವೆ. ನಮ್ಮ ಊಹನೆಯು ಸರಿಯಾದುದಾಗಿ ಕಂಡುಬಂದರೆ, 1881ರಿಂದ ಹಿಂದಕ್ಕೆ 3826 ವರ್ಷಗಳು ಯಾವುದೋ ಗಮನೀಯ ಘಟನೆಯು ನಡೆದಿದ್ದಿರಬೇಕು. ಆ ಸಮಯದಲ್ಲಿ ಅಂತಹ ಯಾವ ಘಟನೆಯು ನಡೆದಿದೆ ಎಂದು ತಿಳಿದುಕೊಳ್ಳಲು ನಾವು ದೇವರ ವಾಕ್ಯದ ದಾಖಲೆಗಳನ್ನು ತಿರುವಿ ಹಾಕುವುದಾದರೆ, ನಮಗೆ ನಮ್ಮ ಊಹನೆಗೆ ಗಣನೀಯವಾದ ದೃಢತೆ ದೊರೆಯುತ್ತದೆ 3826ರ ಹಿಂದೆ ಕೇವಲ 1881 ಅಂದರೆ ಅದು ಕ್ರಿ.ಪೂ 1945 ಆಗುತ್ತದೆ. ವಾಗ್ದಾನದ ಸಾಂಕೇತಿಕ ಸಂತಾನವಾದ ಇಸಾಕನು ತನ್ನ ತಂದೆಯಾದ ಅಬ್ರಹಾಮನ ಸಂಪತ್ತಿಗೆ ವಾರಸುದಾರನಾದನು. ಹೀಗಾಗಿ ಆತನ ತನ್ನ ಸಹೋದರರೆಲ್ಲರನ್ನೂ – ಹಾಗರನ ಮಗನಾದ ಇಷ್ಮಾಯೇಲನನ್ನೂ (ಶಾರೀರಿಕ ಇಸ್ರಾಯೇಲ್ಯರ ಸಂಕೇತ) ಮತ್ತು ಅಬ್ರಹಾಮನ ಎರಡನೆಯ ಹೆಂಡತಿಯಾದ ಕೆಟೂರಳ ಅನೇಕ ಗಂಡು ಹೆಣ್ಣು ಮಕ್ಕಳನ್ನೂ (ಸಾಮಾನ್ಯವಾಗಿ ಈ ಲೋಕದ ನಮೂನೆಯವರು) ಆಶೀರ್ವದಿಸುವ ಸ್ಥಾನದಲ್ಲಿದ್ದನು.

ಈ ರೀತಿಯಲ್ಲಿ, 'ಹೊರಗಣ ಮಾರ್ಗ' ಆಚೆಯಿರುವ ಎಲ್ಲೆಯಿಂದ ಕೆಳಗಣ ಹತ್ತಿರದ ಎಲ್ಲೆಯವರೆಗೆ ಪ್ರವೇಶದ್ವಾರವು 'ಭಾವಿ'ಯೊಂದಿಗೆ ಜೋಡಿಸಲ್ಪಟ್ಟಿದ್ದು ಸಾಂಕೇತಿಕನಾದ ಇಸಾಕನ (ಆತನಲ್ಲಿ ಈ ಲೋಕದ ಆಶೀರ್ವಾದವು ಸಾಂಕೇತಿಕವಾಗಿ ಗುರುತಿಸಲ್ಪಟ್ಟಿದೆ) ದಿನದಿಂದ ವರ್ಷ ಇಂಚುಗಳಾಗಿ ಗುರುತಿಸಲ್ಪಟ್ಟು ಆತನು ಕ್ರಿ.ಪೂ. 1945ರಿಂದ ಕ್ರಿ.ಶ. 1881ರವರೆಗೆ ಎಲ್ಲವುಗಳ ವಾರಸುದಾರನಾದನು. ಆಗ ಆಶೀರ್ವಾದವು ಪ್ರತಿ ಸಂಕೇತಿಕನಾದ ಇಸಾಕನಿಂದ ಅಂದರೆ ಎಲ್ಲಾ ಸಂಗತಿಗಳ ವಾರಸುದಾರನಾದ ಕ್ರಿಸ್ತನಿಂದ ಈ ಲೋಕಕ್ಕೆ ನಿಖರವಾಗಿ ನಿರೀಕ್ಷಿತವಾಗಿತ್ತು – ಗಲಾತ್ಯ 3:16,29.

ನಾವು ಈ ಸಮಯವನ್ನು ಇಸಾಕನ ಬಾಧ್ಯತಾ ಸಮಯದಿಂದ, ಆತನ ಸಹೋದರರನ್ನು ಆಶೀರ್ವಾದಿಸುವ ಭಾಗ್ಯವು ಆತನಿಗೆ ದೊರೆತಂದಿನಿಂದ 1881ನೇ ವರ್ಷದವರೆಗೆ ಅಳೆಯುತ್ತಿದ್ದೇವೆ. ಈ ರೀತಿಯಲ್ಲಿ ಇಸಾಕನು ತನ್ನ ತಂದೆಯಾದ ಅಬ್ರಹಾಮನ ಮರಣಾನಂತರ ಆತನ ಪಿತ್ರಾರ್ಜಿತ ಬಾಧ್ಯತೆಯನ್ನು ಪಡಕೊಳ್ಳುವವನಾದನು. ಇದು ಅಬ್ರಹಾಮನು ಒಡಂಬಡಿಕೆಯನ್ನು ಮಾಡಿಕೊಂಡ ನೂರು ವರ್ಷಗಳ ನಂತರದಲ್ಲಿ ನಡೆಯಿತು (ಅಬ್ರಹಾಮನು ತನ್ನ ಒಡಂಬಡಿಕೆಯನ್ನು ಮಾಡಿಕೊಳ್ಳುವಾಗ 75 ವರ್ಷದವನಾಗಿದ್ದನು ಮತ್ತು ಆತನು ತನ್ನ 175ನೇ ವರ್ಷದಲ್ಲಿ ಮೃತಿ ಹೊಂದಿದನು). ನಂತರ ಒಡಂಬಡಿಕೆಯಿಂದ ಇಸಾಕನ ಮಗನಾದ ಯಾಕೋಬನ ಮರಣದವರೆಗೆ 232 ವರ್ಷಗಳು (See Vol. II, pages 231–232). ಮತ್ತು ಇಸಾಕನು ತನ್ನ ಬಾಧ್ಯಸ್ಥಿಕೆಗೆ ಬಂದ ಸಮಯದಿಂದ, ಒಡಂಬಡಿಕೆ ಮಾಡಿಕೊಂಡ ನೂರು ವರ್ಷಗಳ ನಂತರ ಯಾಕೋಬನ ಮರಣದವರೆಗೆ 132 ವರ್ಷಗಳಾಗುತ್ತವೆ (232 – 100). ಇದಕ್ಕೆ ನಾವು ಯಾಕೋಬನ ಮರಣದಿಂದ ನಮ್ಮ ಕ್ರಿ.ಶ.ದವರೆಗೆ 1813ನ್ನು ಕೂಡಿಸುತ್ತೇವೆ. ಆಗ ಕ್ರಿ.ಪೂ. 1945 ಅಂದರೆ ಸಾಂಕೇತಿಕನಾದ ಇಸಾಕನು ಅಬ್ರಹಾಮನ ಎಲ್ಲಾ ಆಸ್ತಿಯನ್ನು ಪಡಕೊಂಡ ವರ್ಷ (ಆದಿ. 25:5). ಈ ಕ್ರಿ.ಪೂ 1945ನ್ನು ಕ್ರಿ. ಶ. 1881ಕ್ಕೆ ಕೂಡಿಸಿದಾಗ ಪಿರಮಿಡ್ಡಿನ ಅಂಗುಲಗಳಲ್ಲಿ ಸಾಂಕೇತಿಕ ಇಸಾಕನು ತನ್ನ ಸಹೋದರರನ್ನು ಆಶೀರ್ವದಿಸಿದ ಸಂಕೇತದಿಂದ ಪ್ರತಿಸಂಕೇತಿಕನಾದ ಯೇಸುವಿನ ಮೂಲಕ ಸಮಸ್ತ ಲೋಕದ ಆಶೀರ್ವಾದದವರೆಗೆ ಸೂಚಿಸಿದ 3826 ವರ್ಷಗಳಾಗುತ್ತವೆ.

ಪುನರ್‌ವಶದ ಕಾರ್ಯವು ಅಕ್ಟೋಬರ್ 1881ರಲ್ಲಿ

ಗುರುತಿಸಲ್ಪಟ್ಟು ಹೇಗೆ ಪ್ರಾರಂಭವಾಯಿತೆಂಬ ಈ ಪ್ರಶ್ನೆಯು ಬೇರೆ ಯಾರಿಗಾದರೂ ಎದ್ದಿದೆಯಾ? ನಾವು ಉತ್ತರಿಸುವುದೇನೆಂದರೆ, ಲೋಕವು ಅರಿತುಕೊಳ್ಳುವಂತೆ ಏನೂ ನಡೆಯಲಿಲ್ಲ. ನಾವು ಇನ್ನೂ ನೋಡುವವರಾಗಿ ನಡೆಯದೆ, ನಂಬುವವರಾಗಿ ನಡೆಯುತ್ತಿದ್ದೇವೆ. 1881ರಿಂದೀಚೆಗಿನ ಮಹಾ ಪುನರ್‌ವಶದ ಬಗ್ಗೆ ನಡೆದ ಎಲ್ಲಾ ತಯಾರಿಕಾ ಹೆಜ್ಜೆಗಳ ಕಾರ್ಯವನ್ನು ಆಶೀರ್ವಾದದ ಮಹಾಮಳೆಯ ಹನಿಗಳೆಂದು ಎಣಿಸಬೇಕು. ಇದು ಇನ್ನು ಮುಂದೆ ಸಮಸ್ತ ಲೋಕವನ್ನು ಉಲ್ಲಾಸಗೊಳಿಸುತ್ತದೆ. 1874ರಲ್ಲಿ ನೆರವೇರಿದಂತೆ 1881ರಲ್ಲಿ ನೆರವೇರಿದ್ದನ್ನು ದೇವರ ವಾಕ್ಯದ ಬೆಳಕಿನಲ್ಲಿ ನಂಬಿಕೆಯ ಕಣ್ಣುಗಳಿಂದ ಗ್ರಹಿಸಿಕೊಳ್ಳಬಹುದು. ಅದು ಮಹಾಕರೆಯ ಆಂತ್ಯ ದಿನಾಂಕವಾಗಿರುವುದರಂದ ಜ್ಯೂಬಿಲಿ ತುತೂರಿಯ – ಮೂಲಕ ಪುನರ್‌ವಶವು ಪ್ರಾರಂಭವಾಗುವ ದಿನಾಂಕದ ಪ್ರಕಟನೆಯೂ ಆಗಿದೆ. ಆ ದಿನಾಂಕದ ಬಗ್ಗೆ ಗ್ರಂಥಕರ್ತನು, ಆತನಿಗೆ ತಿಳಿದಿರುವಂತೆ, ಸುವಾರ್ತಾ ಯುಗದಲ್ಲಿ ಪ್ರಾರಂಭವಾದ ದೈವ ಸ್ವಭಾವಕ್ಕೆ ಇರುವ ಕರೆಗೂ, ಮಾನವ ಪರಿಪೂರ್ಣತೆಗೆ ಅಂದರೆ ಆದಾಮನಲ್ಲಿ ಕಳೆದುಕೊಂಡದ್ದೆಲ್ಲದರ, ಸುವಾರ್ತಾ ಮಹಾ ಕರೆಯ ಅಂತ್ಯದಲಿ ನಿಶ್ಚಯವಾಗಿರುವ* ಪುನರ್‌ವಶದ ಅವಕಾಶಕ್ಕೂ ಇರುವ ವ್ಯತ್ಯಾಸವನ್ನು ಬೇರೆ ಯಾರೂ ಗಮನಿಸಿಲ್ಲ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಸಹಸ್ರಮಾನ ಯುಗದಲ್ಲಿ ಲೋಕವು ಯಾವ ಪಥದ ಮೇಲೆ ನಿತ್ಯಜೀವ ಪಡಕೊಳ್ಳುವಂತೆ ಅಹ್ವಾನಿಸಲ್ಪಡಲಿದೆ ಎಂಬುದು. ಮೇಲುಪ್ಪರಿಗೆಯಾಗಿ, 'ಅರಸನ ಕೊಠಡಿ'ಯು ದೈವಸ್ವಭಾವವನ್ನು ಪ್ರತಿನಿಧಿಸುತ್ತದೆ ಮತ್ತು 'ಗ್ರ್ಯಾಂಡ್ ಗ್ಯಾಲರಿ'ಯು ಅದಕ್ಕೆ ಕರೆಯನ್ನು ಚಿತ್ರಿಸುತ್ತದೆ. ಹೀಗಾಗಿ ಅದರ ಕೆಳಗಿರುವ 'ರಾಣಿಯ ಕೊಠಡಿ'ಯು ಮಾನವನ ಪರಿಪೂರ್ಣ ಸ್ವಭಾವವನ್ನು ಪ್ರತಿನಿಧಿಸುತ್ತದೆ; ಮತ್ತು ಅದಕ್ಕೆ ಹೋಗುವ ಹಾದಿಯು ಜೀವನ ಮಾರ್ಗವನ್ನು ವಿಶದಪಡಿಸುತ್ತದೆ ಮತ್ತು ಅದರಲ್ಲಿ ಲೋಕವು ಸಹಸ್ರಮಾನದ ಯುಗದಲ್ಲಿ ಮಾನವ ಸಂಪೂರ್ಣತೆಯನ್ನು ತಲುಪಲು ನಡೆಯಬೇಕಾಗುತ್ತದೆ. ಈ ಎರಡೂ ಮಾರ್ಗಗಳು, ಮತ್ತು ಈ ಎರಡೂ ಅಂತಿಮ ಫಲಿತಾಂಶಗಳ ಕಾರಣ ತೆರೆಯಲ್ಪಟ್ಟಿವೆ ಮತ್ತು ಮಧ್ಯಸ್ತಗಾರನು ಎಲ್ಲರ ಪರವಾಗಿ ಅರ್ಪಿಸಿದ ಈಡುಬಲಿಯ ಸಮರ್ಪಣೆಯಿಂದ ಸಾಧ್ಯವಾಗಿದೆ. ಇವೆಲ್ಲವೂ ಪಿರಮಿಡ್‌ನಲ್ಲಿ ಪ್ರಭಾಯುತವಾಗಿ ಒಂದು 'ಸ್ಫೋಟವು ಕಾಣಿಸಿಕೊಂಡು' 'ಬಾವಿ'ಯ ಬಾಯಿಯನ್ನು ತೆರೆದದ್ದರಿಂದ ಸೂಚಿತವಾಗಿವೆ ಮತ್ತು ಎರಡು ಮಾರ್ಗಗಳಿಗೆ ಪ್ರವೇಶಾಧಿಕಾರವನ್ನು ನೀಡಿದೆ (ಇದು ಈಗ ದೈವ ಸ್ವಭಾವಕ್ಕೆ ನಡೆಸುವ ಸಭೆಯ ಕರೆಯನ್ನು ಮತ್ತು ಸಹಸ್ರಮಾನ ಕಾಲದಲ್ಲಿ ಲೋಕದ ಕರೆಯನ್ನು ಸಾಂಕೇತಿಸುವ ಉದ್ದೇಶ ಹೊಂದಿದೆ ಮತ್ತು ಇದು ಮಾನವ ಪರಿಪೂರ್ಣತೆಯ ಪುನರ್‌ವಶಕ್ಕೆ ನಡೆಸುತ್ತದೆ).

ಹೀಗೆ ಮಹಾ ಪಿರಮಿಡ್ ಸತ್ಯವೇದದೊಂದಿಗೆ ಸಾಮರಸ್ಯವುಳ್ಳದ್ದಾಗಿದ್ದು "ಕ್ರಿಸ್ತನು ಜೀವವನ್ನು (ಮಾನವ ಜೀವದ ಪುನರ್‌ವಶವನ್ನು) ತಂದಿದ್ದಾನೆ ಮತ್ತು ಇದು 'ರಾಣಿಯ ಕೊಠಡಿ'ಯಲ್ಲಿ ಪ್ರತಿನಿಧಿಸುತ್ತದೆ) ಮತ್ತು ನಿರ್ಲಯತ್ವವನ್ನು (ಅರಸನ ಕೊಠಡಿಯಲ್ಲಿ ಪ್ರತಿನಿಧಿಸಲ್ಪಟ್ಟ ದೈವಿಕ ಸ್ವಭಾವ) ಸುವಾರ್ತೆಯ ಮೂಲಕ ಪ್ರಕಾಶಗೊಳಿಸಿದನು – ವಿಮೋಚನೆಯ ಶುಭಸಮಾಚಾರಕ್ಕೆ ನಡೆಸುತ್ತದೆ – 2 ತಿಮೋಥೆ 1;10.

"ರಾಣಿಯ ಕೊಠಡಿ" ಮತ್ತು "ಗ್ರಾಂಡ್ ಗ್ಯಾಲರಿ"ಗಿರುವ ಒಂದೇ ಪ್ರವೇಶದ್ವಾರವು "ಬಾವಿ" (Well) ಆಗಿದೆ, 'ಮೊದಲನೆಯ ಆರೋಹಣ ಮಾರ್ಗ'ವಾಗಿರುವ ಇದು ಗ್ರಾನೈಟ್ 'ಪ್ಲಗ್ಗಿನ' ಕಾರಣ ಮೂಲತಃ ಹಾದುಹೋಗಲಾರದ್ದಾಗಿತ್ತು. ಈ ರೀತಿಯಲ್ಲಿ "ಕಲ್ಲು ಸಾಕ್ಷಿ"ಯು ಧರ್ಮಶಾಸ್ತ್ರದ ಕರೆ ಅಥವಾ ಒಡಂಬಡಿಕೆಯಿಂದ ಪತನಗೊಂಡ ಯಾವ ಸಂತತಿಯು ಜೀವವನ್ನು (ಮಾನವ ಜೀವವನ್ನು) ಅಥವಾ ಅಮರತ್ವವನ್ನು (ದೈವಿಕ ಸ್ವಭಾವ) ತಲುಪಲಾಗುವುದಿಲ್ಲ. "ಮೊದಲನೆಯ ಆರೋಣ ಮಾರ್ಗವು" ಒಂದು ಹಾದಿಯಾಗಿದ್ದರೂ ಅದರಲ್ಲಿ ಇದುವರೆಗೆ ಯಾರೂ ನಡೆದಿಲ್ಲ. ಹೀಗಾಗಿ, ಧರ್ಮಶಾಸ್ತ್ರದ ಒಡಂಬಡಿಕೆಯು

* ನಾವು ಇದುವರೆಗೂಈ ಕಾಕತಾಳೀಯ ಬಗ್ಗೆ ಆಲೋಚನೆ ಮಾಡದೇ ಇದ್ದರೂ, ಈ ಅಧ್ಯಾಯವನ್ನು ಬರೆಯುವಾಗ, 1881ರ ಕಡೆಯ ಆರು ತಿಂಗಳುಗಳಲ್ಲಿ FOOD FOR THINKING CHRISTIANS ಎಂಬ 166 ಪುಟಗಳ ಪುಸ್ತಕವೊಂದು ಪ್ರಕಟಗೊಂಡದ್ದು ಕಡಿಮೆ ಗಮನಾರ್ಹವಾದುದಲ್ಲ. ಇದರ ಸುಮಾರು ಒಂದು ಮಿಲಿಯನ್ ನಾನೂರು ಸಾವಿರ ಪ್ರತಿಗಳು ಸಂಯುಕ್ತ ಸಂಸ್ಥಾನ ಮತ್ತು ಗ್ರೇಟ್ ಬ್ರಿಟನ್ನಿನಲ್ಲಿ ಹಂಚಲಾಯಿತು. ಆ ಪುಸ್ತಕಕ್ಕೆ ಸಂಬಂಧಿಸಿದಂತೆ, ಮೂರು ಸಂಗತಿಗಳು ಇದ್ದಕ್ಕಿದ್ದಂತೆ ಆದರ ವಿಶಾಲ ಹಂಚುವಿಕೆ (distribution) ಅದನ್ನು ವಿಚಿತ್ರವಾಗಿತ್ತೆಂದು ಗುರುತಿಸಬಹುದಾಗಿದೆ (1) ಬಹುಶಃ ಬೇರೆಯಾವ ಪುಸ್ತಕವು ಅಷ್ಟು ಕಡಿಮೆ ಸಮಯದಲ್ಲಿ ಒಂದೇ ವಿಧವಾಗಿ ಅಷ್ಟು ವಿಶಾಲವಾಗಿ ಹಂಚಲ್ಪಟ್ಟಿಲ್ಲ. ಅದನ್ನು ಸಂಯುಕ್ತ ಸಂಸ್ಥಾನದ ಮತ್ತು ಗ್ರೇಟ್ ಬ್ರಿಟನ್ನಿನ ಮಹಾನಗರಗಳ ಚರ್ಚ್ ಬಾಗಿಲುಗಳಲ್ಲಿ ಜಿಲ್ಲಾ ಮೆಸಂಜರ್ ಸರ್ವಿಸಿನ ಹುಡುಗರ ಮೂಲಕವಾಗಿ ಮೂರು ನಿರಂತರ ಭಾನುವಾರಗಳಲ್ಲಿ ಪುಕ್ಕಟೆಯಾಗಿ, ಮತ್ತು ಸಣ್ಣ ಪಟ್ಟಣಗಳಲ್ಲಿ ಅಂಚೆಯ ಮೂಲಕ ವಿತರಿಸಲಾಯಿತು. (2) ಈ ವೆಚ್ಚವನ್ನು ಭರಿಸುವ 42,000 ಡಾಲರ್‌ಗಳನ್ನು ಯಾವುದೇ ಬೇಡಿಕೆಯಿಲ್ಲದೆ ಸ್ವಯಂಪ್ರೇರಣೆಯಿಂದ ದಾನನೀಡಲಾಗಿತ್ತು. (3) ನಮಗೆ ಗೊತ್ತಿರುವಂತೆ, ಸುವಾರ್ತಾ ಸಭೆಯ ಮಹಾ ಕರೆಗೂ ಮತ್ತು ಸಾಮಾನ್ಯವಾಗಿ ಲೋಕಕ್ಕೆ ದೊರಕುವ ಪುನಃವಶದ ಭಾಗ್ಯಕ್ಕೂ ಇರುವ ಭಿನ್ನತೆಯನ್ನು ತೋರಿಸಿಕೊಡುವುದಾಗಿತ್ತು, ಮತ್ತು ಅದು ಮಹಾ ಕರೆಯ ದಿನಾಂಕವನ್ನು ಅಕ್ಟೋಬರ್ 1881 ಎಂದು ಸೂಚಿಸುವುದಾಗಿತ್ತು.


ಜೀವನದ ಮಾರ್ಗವಾಗಿದೆ. ಆದರೆ ದೇಹದ ದೌರ್ಬಲ್ಯತೆಯ ಕಾರಣ ಯಾರೂ ಕೂಡ ಪ್ರಸ್ತಾಪಿಸದ ಜೀವವನ್ನು ಹೊಂದುಕೊಳ್ಳುವಂತೆ ಅದರಲ್ಲಿ ನಡೆಯಲಾಗಲಿಲ್ಲ. (ರೋಮಾ. 3:20). "ಶಿಲುಬೆ" "ಈಡುಬಲಿ" ಇವುಗಳು ಕಲ್ಲು ಸಾಕ್ಷಿಯಿಂದ ವಿಶೇಷವಾಗಿ ಗುರುತಿಸಲ್ಪಟ್ಟಿವೆ. ದೇವರ ವಾಕ್ಯಗಳಲ್ಲಿ ಇದು ಯೋಜನೆಯ ಬೇರೆ ಯಾವುದೇ ಲಕ್ಷಣಗಳಿಗಿಂತ ಹೆಚ್ಚಾಗಿ ಗುರುತಿಸಲ್ಪಟ್ಟಿದೆ. "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ" (ಯೋಹಾನ 14:06). ಎಂಬುದಾಗಿ ಯೇಸುವೇ ಹೇಳಿದ್ದಾನೆ. "ನಾನು ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಾನು ನಿಮಗೆ ತಿಳಿಸಿಕೊಟ್ಟೆನು, ಅದೇನೆಂದರೆ, ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪನಿವಾರಣೆಗಾಗಿ ಸತ್ತನು" (1 ಕೊರಿಂಥ 15:03) ಎಂದು ಪೌಲನು ಹೇಳಿದ್ದಾನೆ. 'ಬಾವಿ'ಯು (ಕ್ರಿಸ್ತನ ಬಲಿದಾನ ಮತ್ತು ಪುನರುತ್ಥಾನದ ಸಂಕೇತ) ಜೀವಕ್ಕೆ ಮತ್ತು ಅಮರತ್ವಕ್ಕಿರುವ ಏಕೈಕ ಮಾರ್ಗವಾಗಿದೆ ಎಂಬುದಾಗಿ ಮಹಾ ಪಿರಮಿಡ್ ಹೇಳುತ್ತದೆ.

'ರಾಣಿಯ ಕೊಠಡಿ'ಯ ಮಾರ್ಗವು ತಗ್ಗಿನಲ್ಲಿದೆ. ಆದರೆ ಅವಶ್ಯಕತೆಗೆ ತಕ್ಕಂತೆ ಯಾತ್ರಿಕನು ತನ್ನ ತಲೆ ಬಾಗಿ ನಡೆಯಬೇಕಾಗುತ್ತದೆ. ಸರಿಯಾದ ಕೆಲಸ ಮಾಡುವವನ ಮಾರ್ಗವು ದೀನತೆಯುಳ್ಳದ್ದೂ ಮತ್ತು ಸಹಸ್ರ ಮಾನದಲ್ಲಿಯೂ ಹಾಗೆ ಇರುತ್ತದೆ, ಆಗ ಎಲ್ಲರೂ ದೇವರ ರಾಜ್ಯದ ಕಟ್ಟುನಿಟ್ಟಾದ ನಿಯಮಗಳಿಗೆ ತಲೆಬಾಗಲೇ ಬೇಕಾಗುತ್ತದೆ. "ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು" (ಪ್ರಕಟನೆ 2:7). ಆತನು ನಂತರದಲ್ಲಿ ನ್ಯಾಯವನ್ನು ನೂಲನ್ನಾಗಿಯೂ, ಧರ್ಮವನ್ನು ಮಟ್ಟುಗೋಲನ್ನಾಗಿಯೂ ಮಾಡುವನು; ಆತನ ಶ್ರೇಷ್ಠತೆ ಮತ್ತು ಶಕ್ತಿಗೆ ಅಡ್ಡಬಿದ್ದು ಒಡೆಯನೆಂದು ಪ್ರತಿಜ್ಞೆ ಮಾಡುವರು, ಮತ್ತು ಅತನ ನಿಯಮ ಮತ್ತು ಆಜ್ಞೆಗಳಿಗೆ ಎಲ್ಲರೂ ಅಡ್ಡಬೀಳುವರು, ಮತ್ತು ಆತನ ನೀತಿವಂತರೂ ಮತ್ತು ನಮ್ರರು ಆತನ ದಿನದಲ್ಲಿ ಚೆನ್ನಾಗಿ ಬೆಳೆಯುವರು– ಯೆಶಾಯ 28:12, ರೋಮಾ. 14:11, ಕೀರ್ತನೆ 92:12,13.

"ರಾಣಿಯ ಕೊಠಡಿ"ಯು ಪುನರ್‌ವಶದ ಅಂತ್ಯದ ಕಾರ್ಯವನ್ನು, ಮಾನವ ಪರಿಪೂರ್ಣತೆಯನ್ನು ಸಂಕೇತಿಸುತ್ತದೆ. ಅದಕ್ಕೆ ಏಳು ಪಾರ್ಶ್ವಗಳಿರುವುದರಿಂದ, ನೆಲವನ್ನು ಒಂದು ಪಾರ್ಶ್ವ ಮತ್ತು ಛಾವಣಿಯನ್ನು ರೇಖಾಚಿತ್ರದಲ್ಲಿ ತೋರಿಸಿರುವಂತೆ ಎರಡು ಪಾರ್ಶ್ವಗಳೆಂದು ಲೆಕ್ಕಹಾಕಲಾಗಿದೆ. ಅದಕ್ಕೆ ಹೋಗುವ ಹಾದಿಯೂ ಏಳರ ಅದೇ ಕಥೆಯನ್ನು, ಅಥವಾ ಪರಿಪೂರ್ಣತೆಯನ್ನು ಹೇಳುತ್ತದೆ. ಯಾಕೆಂದರೆ ಅದರ ನೆಲವು ಅದರ ಉದ್ದದ ಏಳನೆಯ ಒಂದರಷ್ಟು ತಗ್ಗಿಸಲ್ಪಟ್ಟಿದೆ. ಏಳರ ಸಂಖ್ಯೆಯು ಸಾಮಾನ್ಯವಾಗಿ ಪರಿಪೂರ್ಣತೆಯನ್ನು ಮತ್ತು ಸಂಪೂರ್ಣತೆಯನ್ನು ಸಂಕೇತಿಸುವುದು ಮಾತ್ರವಲ್ಲ, ಆದರೆ ಈ ಸಂಬಂಧದಲ್ಲಿ ಅದು ವಿಶೇಷವಾಗಿ ಸೂಚಕವಾಗಿದೆ. ಯಾಕೆಂದರೆ ಸಹಸ್ರಮಾನ ಯುಗವು ಭೂಲೋಕದ ಇತಿಹಾಸದ ಏಳನೆಯ ಸಹಸ್ರ ವರ್ಷಗಳಾಗಿದೆ. ಮತ್ತು ಇದರಲ್ಲಿ ಸಂತತಿಗಳು ವಿಧೇಯತೆಯಿಂದ ಮತ್ತು ಇಚ್ಛೆಯಿಂದ ಪರಿಪೂರ್ಣತೆಯನ್ನು ಪಡಕೊಳ್ಳ ಬೇಕಾಗಿದೆ.

ಪ್ರೊ॥ ಸ್ಮಿತ್‌ರವರು ಈ 'ರಾಣಿಯ ಕೊಠಡಿ'ಯ ನೆಲದ ಬಗ್ಗೆ ಮತ್ತು ಅದಕ್ಕೆ ನಡೆಸುವ ಹಾದಿಗಳ ಬಗ್ಗೆ ಟೀಕಿಸುವವರಾಗಿದ್ದು, ಅವು ಒರಟಾಗಿದೆ ಮತ್ತು ಅದರ ಕಾಮಗಾರಿ ಪೂರ್ಣಗೊಂಡಿಲ್ಲ, ಹೀಗಾಗಿ ಅವು ಮೂಲದಲ್ಲಿ ಬಹಳ ನುಣುಪಾಗಿರುವ, ಬಹುಶಃ ಹೊಳಪಿಸಲಾಗಿರುವ ಇತರೆ ಮಾರ್ಗಗಳಿಗಿಂತ ಭಿನ್ನವಾಗಿವೆ ಎಂದಿದ್ದಾರೆ. ಇದು ಬಹುಶಃ ಈ ನೆಲವು ಇತರೆ ನೆಲಗಳಂತೆ ವರ್ಷ–ಅಂಗುಲಗಳ ಅಳತೆಗೆ ಒಳಪಡಿಸಲಾಗಿಲ್ಲ ಎಂಬ ಸೂಚನೆ ನೀಡುತ್ತದೆ ಎಂಬ ಸಲಹೆ ನೀಡುತ್ತಾರೆ. ಪಿರಮಿಡ್ ಅದರ ಸಮವಿಲ್ಲದ ಕಾರಣ "ಸಮಯ ಅಳತೆಗಳು ಇಲ್ಲಿ ದಾಖಲೆ ಗೊಂಡಿಲ್ಲ" ಎಂದು ಹೇಳುವಂತಿದೆ.

ಪಿರಮಿಡ್‌ನ ಅಂಗುಲ–ವರ್ಷಗಳು 'ರಾಣಿ ಕೊಠಡಿ'ಯ ಹಾದಿಯಲ್ಲಿಯಾಗಲೀ, ಅದರ ನೆಲದಲ್ಲಿಯಾಗಲೀ ಗಮನಿಸಲಿಲ್ಲವಾದರೂ, ಮತ್ತೊಂದು ಸಂಗತಿಯನ್ನು ತೋರಿಸುವ ಅಗತ್ಯವಿದೆ. ಅದೇನೆಂದರೆ ಪರಿಪೂರ್ಣವಾದ ಜೀವಿತದ ಮತ್ತು ಪರಿಪೂರ್ಣವಾದ ಮಾನವ ಶರೀರ ರಚನೆ. ಪುನರ್‌ವಶದ ಹಾದಿಯು, ಮಾನವ ಸ್ವಭಾವದ ಈ ಪರಿಪೂರ್ಣತೆಯನ್ನು 'ರಾಣಿಯ ಕೊಠಡಿಯಲ್ಲಿ' ವಿಶದಗೊಳಿಸಲ್ಪಟ್ಟರೂ, ಅದರ ಮಾರ್ಗವು ಏಳು ಸಾವಿರ ವರ್ಷಗಳ ಅನುಭವವನ್ನು ಮತ್ತು ಶಿಸ್ತನ್ನು ಚಿತ್ರಿಸುತ್ತದೆ ಮತ್ತು ಪತನಗೊಂಡ ಸಂತತಿಯು ಸಂಪೂರ್ಣ ಪುನರ್‌ವಶಕ್ಕೆ ಪರಿಪೂರ್ಣತೆಯನ್ನು ಹೊಂದಿಕೊಳ್ಳುವ ಮೊದಲು ಇದರ ಮೂಲಕವಾಗಿ ಹಾದುಹೋಗಬೇಕು. 'ರಾಣಿಯ ಕೊಠಡಿ'ಗೆ ಮೊದಲ ಏಳರಲ್ಲಿ ಆರನೆಯ ಭಾಗದ ಹಾದಿಯು ತೀರ ತಗ್ಗಿನದಾಗಿದ್ದು, ಅದು ಆರು ಸಾವಿರ ವರ್ಷಗಳ ಹಿಂದಿನದರಲ್ಲಿ ಚಿತ್ರಿಸುತ್ತದೆ, ಮತ್ತು ಅತಿಯಾದ ಕಷ್ಟ ಮತ್ತು ದೈನ್ಯತೆಯು ನೀತಿವಂತ


THY KINGDOM COME
ನಿನ್ನ ರಾಜ್ಯವು ಬರಲಿ
NORTHERN CEILING
ಉತ್ತರ ಭಾಗದ ಚಾವಣಿ
SOUTHERN CEILING
ದಕ್ಷಿಣ ಭಾಗದ ಚಾವಣಿ
NORTHERN CEILING
ಉತ್ತರ ಭಾಗದ ಚಾವಣಿ
25"
Vyse's Hole
ವೈಸೆಯ ರಂಧ್ರ
NORTH WALL
ಉತ್ತರ ಗೋಡೆ
Door Way
ದ್ವಾರ ಮಾರ್ಗ
EAST WALL
ಪೂರ್ವ ಗೋಡೆ
NICHE
ಗೂಡು
FLOOR
ನೆಲ
SOUTH WALL
ದಕ್ಷಿಣ ಗೋಡೆ
WEST WALL
ಪಶ್ಚಿಮ ಗೋಡೆ
Masonry courses of Walls and Ceiling are from an Unfinished Examination by Waynman Dixon
THE SEVEN SIDES OF THE QUEEN'S CHAMBER
ರಾಣಿ ಕೊಠಡಿಯ ಏಳು ಪಕ್ಕಗಳು (ಪಾರ್ಶ್ವಗಳು)
Laid Open on the Plane of the East Wall
ಪೂರ್ವಗೋಡೆಯ ಸಮತಲ ತೆರೆದಿಟ್ಟಿರುವುದು
100 50 0 100 200 300
SCALE OF BRITISH INCHES
ಬ್ರಿಟಿಷ್ ಅಳತೆಯ ಅಂಗುಲಗಳಲ್ಲಿ

ಜೀವಿತದಲ್ಲಿ ನಡೆಯಲು ಅವಶ್ಯವೆಂದು ವಿವರಿಸುತ್ತದೆ – ನೀತಿವಂತರಾಗಿ ನಡೆಯಲು ಬಯಸಿದವರ ಪಾಲಿಗೂ ಹಾಗೆಯೇ ಇತ್ತು – ಪಿತೃಗಳು, ಪ್ರವಾದಿಗಳು ಮತ್ತಿತರರು, ನೀತಿನಿರ್ಣಯ ಹೊಂದಿದವರು – ಪಾಪ ಮತ್ತು ಮರಣದ 6000 ವರ್ಷಗಳ ಆಳ್ವಿಕೆಯಲ್ಲಿ ಹಾಗೆಯೇ ಇತ್ತು. ಇದಕ್ಕೆ ವ್ಯತಿರಿಕ್ತವಾಗಿ, ಮಾರ್ಗದ ಕಡೆಯ ಏಳನೆಯದು ಜನರ ಮೇಲೆ ಉದಯಿಸುವ ಸಹಸ್ರಮಾನವನ್ನು ಪ್ರತಿನಿಧಿಸುತ್ತದೆ. ಅದರ ಎತ್ತರವು ಸುಮಾರು ಎರಡು ಪಟ್ಟು ದೊಡ್ಡದಾಗಿದೆ ಎಂಬದು ಏನನ್ನು ಸೂಚಿಸುವದೇನೆಂದರೆ, ಭೂಮಿಯಲ್ಲಿ ಕೃಪೆಯು ಮತ್ತು ಶಾಂತಿಯೂ ಮುಂಬರುವ ಸಾವಿರ ವರ್ಷಗಳಲ್ಲಿ ಅನುಗ್ರಹ ಹೊಂದಿದವರು ಆರಾಮವಾಗಿ, ಸರಾಗವಾಗಿ ಪ್ರಗತಿ ಹೊಂದಬಹುದು ಮತ್ತು ಪರಿಪೂರ್ಣತೆಯ ಕಡೆಗೆ ಸುಲಭವಾಗಿ ಹೋಗಬಹುದು.

ಕಳೆದ ಆರು ಸಾವಿರವರ್ಷಗಳಲ್ಲಿ ಯಾರಾದರೂ ಈ ರೀತಿಯಲ್ಲಿ ನಡೆದುಕೊಂಡಿದ್ದಾರೆಯೋ ಎಂದು ಕೇಳಲಾಗಿದೆಯೋ? ನಾವು ಉತ್ತರಿಸುವುದೇನೆಂದರೆ, – ಹೌದು: ನಂಬಿಕೆಯಿಂದ ಕೆಲವರು ಇದರಲ್ಲಿ ನಡೆದಿದ್ದಾರೆ. ಇದು ಮಾನವ ಸ್ವಭಾವವನ್ನು ಸಮರ್ಥಿಸುವ ಮಾರ್ಗವಾಗಿದೆ, ಆದರೆ ಸುವಾರ್ತಾ ಸಭೆಯ ವಿಧಾನ ಮತ್ತು ಕರೆಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ, ಇದು ನೀತಿನಿರ್ಣಯದ ಮೂಲಕವಾದರೂ ಹೊಸ, ದೈವಿಕ ಸ್ವರೂಪಕ್ಕೆ ನಡೆಸುವುದಾಗಿದೆ. ಅಬ್ರಹಾಮ, ಇಸಾಕ ಮತ್ತು ಯಾಕೋಬ ಹಾಗೂ ನಂಬಿಗಸ್ತ ಪ್ರವಾದಿಗಳು ಆ ಮಾರ್ಗವಾಗಿ ನಡೆದರು, 'ಬಾವಿ'ಯ ಮೂಲಕ – ಕ್ರಿಸ್ತನ ಈಡುಬಲಿಯಲ್ಲಿ ನಂಬಿಕೆಯುಳ್ಳವರಾಗಿ ಅವರುಗಳು ಕ್ರಿಸ್ತನ ಮರಣಕ್ಕೂ ಮೊದಲು ಸಾಂಕೇತಿಕ ಬಲಿದಾನಗಳಿಂದ, 'ಕಲ್ಲುಸಾಕ್ಷಿ'ಯು ಅದನ್ನು ಸೂಚಿಸುವ ಮೊದಲೇ ಸಾಂಕೇತಿಕವಾಗಿ ಅದನ್ನು ಪ್ರತಿನಿಧಿಸಿದರು. ದೇವರ ಉದ್ದೇಶ ಮತ್ತು ಪ್ರಕಟನೆಯಲ್ಲಿ ಕ್ರಿಸ್ತನು ಈ ಲೋಕದ ಅಸ್ತಿವಾರ ಹಾಕುವ ಮೊದಲೇ ಪ್ರಾಯಶ್ಚಿತ್ತ ಸಂದೇಶಕ್ಕಾಗಿ ಕೊಯ್ಯಲ್ಪಟ್ಟ ಕುರಿಮರಿಯಾಗಿದ್ದನು.

ಮತ್ತು ಈ ರೀತಿಯಲ್ಲಿ 'ರಾಣಿಯ ಕೊಠಡಿ'ಗೆ ಎಂಬುದು ಮಾನವ ಸ್ವಭಾವದ ಸಂಪೂರ್ಣತೆಯ ಮಾರ್ಗ ಮತ್ತು ಸಹಸ್ರಮಾನದ ಜೀವನ ಇವುಗಳ ಬಗ್ಗೆ ಇರುವ ಸತ್ಯವೇದದ ದಾಖಲೆಗೆ ಉತ್ತಮವಾಗಿ ಒಪ್ಪಿಗೆಯಾಗಿದೆ. ಒಬ್ಬ ವ್ಯಕ್ತಿಯು ಒಡಂಬಡಿಕೆಯ ಷರತ್ತುಗಳಿಗೆ ತನ್ನ ಹೃದಯ ಮತ್ತು ಜೀವನವನ್ನು ಅರ್ಪಿಸುವುದರಲ್ಲಿ ತೋರುವ ತೀವ್ರತೆ ಅಥವಾ ನಿಧಾನಗತಿಯ ಆಧಾರದಲ್ಲಿ, ಪರಿಪೂರ್ಣತೆಯನ್ನು ತಲಪುವ ಸಮಯದ ವಿಸ್ತಾರವು ವ್ಯಕ್ತಿಗತ ಪ್ರಕರಣಗಳಲ್ಲಿ ವ್ಯತ್ಯಾಸವಾಗಿರುತ್ತವೆ. ಇದು ಇನ್ನು ಮುಂದೆ ಮೇಲ್ಮುಖ ಹೋರಾಟವಾಗುವುದಿಲ್ಲ, ಧರ್ಮಶಾಸ್ತ್ರದ ಮತ್ತು ಸುವಾರ್ತಾ ನಿರ್ವಹಣೆಯಲ್ಲಿದ್ದಂತೆ ಒಳಗೂ, ಹೊರಗೂ ನಿರಂತರವಾಗಿ ವಿರೋಧಿಸುವ ಕೆಳಮುಖದ ಪ್ರವೃತ್ತಿಯಾಗಿರುವುದಿಲ್ಲ; ಆದರೆ ಇದು ಎಲ್ಲವೂ ಯಾತ್ರಿಕನ ಅನುಕೂಲಕ್ಕೆ ತಕ್ಕಂತೆ ಇರುವ ಮಾರ್ಗವಾಗಿದೆ ಮತ್ತು ಆತನ ಪುನರ್‌ವಶಗೊಂಡ ಜೀವಿತದ ಸಂಪೂರ್ಣವಾದ ತೀವ್ರಗತಿಯ ಪ್ರಗತಿಯತ್ತ ಅದರ ಫಲವಾದ ಎಲ್ಲಾ ಆಶೀರ್ವಾದಗಳೊಂದಿಗೆ ಸುಗಮಗೊಳಿಸುವ ಮಾರ್ಗವಾಗಿದೆ.

'ಅರಸನ ಕೊಠಡಿ'ಯು ಅದರ ವಾಯುಸಂಚಾರ ಕೊಳವೆಗಳಿಂದ ಅದು ಶಾಶ್ವತವಾದ ವಾಸಸ್ಥಳವಾಗಿದೆ ಎಂದು ಸೂಚಿಸುತ್ತದೆ, ಅದು ನಿರಂತರವಿರುವ ಸ್ಥಿತಿಯಾಗಿದೆ. ಅದರಂತೆ 'ರಾಣಿಯ ಕೊಠಡಿ'ಯು ಮಾನವ ಪರಿಪೂರ್ಣತೆಯ ಸ್ಥಿತಿಯನ್ನು ತಲುಪಿದಾಗ ನಿರಂತರವಾದ ವ್ಯವಸ್ಥೆಯನ್ನು ಮಾಡಬಹುದಾಗಿದೆ ಎಂಬ ಸತ್ಯವನ್ನು ಚಿತ್ರಿಸುತ್ತದೆ. ಯಾಕೆಂದರೆ, ಅದರಲ್ಲಿ ಸಹ ಅದೇ ರೀತಿಯ ವಾಯು ಸಂಚಾರದ ಕೊಳವೆಗಳಿವೆ ಅಥವಾ ಗಾಳಿ ಮಾರ್ಗಗಳು ಅದಕ್ಕೆ ಒದಗಿಸಲ್ಪಟ್ಟಿವೆ. ಒಂದು ವಿಷಯದಲ್ಲಿ, ಅದು ಶಾಶ್ವತ ಸ್ಥಿತಿಯನ್ನು ಪ್ರತಿನಿಧಿಸುತ್ತದೆ ಎಂದು ನಾವು ಹೇಳಬಹುದು. ಮತ್ತೊಂದರಲ್ಲಿ, ಅದನ್ನು ಶಾಶ್ವತವನ್ನಾಗಿ ಅಥವಾ ನಿರಂತರವಾದ ಸ್ಥಿತಿಯದನ್ನಾಗಿ ಮಾಡಬಹುದು. ಯಾಕೆಂದರೆ ಇದು ಸತ್ಯವೇದದಲ್ಲಿ ಮತ್ತು "ಕಲ್ಲು ಸಾಕ್ಷಿ"ಯ ಪುರಾವೆಗಳಲ್ಲಿ ಸೂಚಿಸಿರುವ ಸತ್ಯ ಸಂಗತಿಯಾಗಿದೆ. ಪರಿಶುದ್ಧ ಗ್ರಂಥಗಳು 'ಅರಸನ ಕೊಠಡಿ'ಯು ಪ್ರತಿನಿಧಿಸುವ ಸ್ಥಿತಿಯನ್ನು ಹೊಂದಿಕೊಳ್ಳುವವರು ದೇವರ ಸ್ವಭಾವದಲ್ಲಿ ಪಾಲುಗಾರರಾಗುವರು ಮತ್ತು ಅವರು ಅಮರರು ಅಥವಾ ಮರಣಾಧೀನರಲ್ಲ. ಅವರು ಅಂದಿನಿಂದ ಸಾಯುವುದೇ ಇಲ್ಲ ಎಂದು ಹೇಳುತ್ತವೆ. ಪೂರ್ತಿಯಾಗಿ ಪುನರ್‌ವಶವನ್ನು ತಲುಪುವ ಇತರರು, ನಿಷ್ಠಾವಂತಿಕೆ ಅಂತಿಮ ಪರೀಕ್ಷೆಯನ್ನು ಸಹಸ್ರಮಾನದ ಅಂತ್ಯದಲ್ಲಿ ಎದುರಿಸಿ ನಿಲ್ಲುವವರು ದೈವಿಕ ಸ್ವಭಾವಕ್ಕೆ ಅವಶ್ಯವಾದ ಸಾಮರ್ಥ್ಯ; ಅಮರತ್ವ ಎಂದು ಕರೆಯುವ ಗುಣವನ್ನು ಹೊಂದದೇ ಹೋದಾಗ್ಯೂ ಅವರಿಗೆ ನಿರಂತರವಾಗಿ ಜೀವಿಸುವ ಸೌಭಾಗ್ಯವನ್ನು ರಕ್ಷಣಾ ಯೋಜನೆಯ ಮಹಾ ಶಿಲ್ಪಿಯು ಈಗಾಗಲೇ ಒದಗಿಸಿದ್ದಾನೆ. ಅವರು ದೇವರೊಂದಿಗಿನ ಸಾಮರಸ್ಯದಲ್ಲಿ ಮತ್ತು ಆತನ ಚಿತ್ತಕ್ಕೆ ವಿಧೇಯರಾಗಿ ಇರುವುದಾದರೆ ಅವರೂ ಸದಾಕಾಲ ಬಾಳುವರು.

ಮಹಾ ಪಿರಮಿಡ್ ಅದೇ ಸತ್ಯಗಳನ್ನು ಪ್ರಕಟಿಸುತ್ತದೆ; "ಅರಸನ ಕೊಠಡಿ"ಯು ವಾಯು ಸಂಚಾರ ಕೊಳವೆಗಳನ್ನು ತೆರೆದದ್ದಾಗಿದ್ದರೂ, ಮೂಲತಃ 'ರಾಣಿಯ ಕೊಠಡಿ'ಯಲ್ಲಿ ಇರುವ ವಾಯು ಸಂಚಾರ ಕಿಂಡಿಗಳು ವಿಚಿತ್ರವಾಗಿ ಮುಚ್ಚಿಕೊಂಡಿದ್ದವು. ವಾಯು ನಳಿಕೆಗಳು ಮಹಾ ಪಿರಮಿಡ್‌ನ ಹೊರಗಡೆಯಿಂದ 'ರಾಣಿ ಕೊಠಡಿ'ಯ ಒಳಗೋಡೆಗಳ ಮೇಲ್ಮೈಯ ಐದು ಅಂಗುಲಗಳಲ್ಲಿ ಮುಕ್ತಾಯಗೊಳ್ಳುತ್ತದೆ, 'ರಾಣಿ ಕೊಠಡಿ'ಯ ಎರಡೂ ಕಡೆಗಳಲ್ಲಿ ಈ ಐದು ಆಂಗುಲಗಳನ್ನು ದಪ್ಪವನ್ನು ಹೊರತುಪಡಿಸಿ ಎಲ್ಲಾ ಕಡೆಗಳಲ್ಲಿಯೂ ಕಲ್ಲುಗಳಿರುತ್ತವೆ. ಈ ದಪ್ಪವಾದ ಭಾಗವು ಉಳಿಯಿಂದ ಕೆತ್ತಲ್ಪಟ್ಟು ಮಹಾ ಪಿರಮಿಡ್‌ನ ಶಿಲ್ಪದ ಮೇಲೆ ವಿನ್ಯಾಸವೊಂದನ್ನು ಇತರೆ ಎಲ್ಲಾ ವೈಶಿಷ್ಟ್ಯಗಳಂತೆ ತೋರಿಸುವುದಾಗಿದೆ. ಮಾನ್ಯ Waynman Dixon ಎಂಬಾತನು 'ರಾಣಿ ಕೊಠಡಿ'ಯ ಪರೀಕ್ಷೆಯನ್ನು ಮಾಡುವಾಗ ಇದನ್ನು ಕಂಡುಹಿಡಿದನು. ಆತನು ಗೋಡೆಯು ಒಂದು ಭಾಗದಲ್ಲಿ ಟೊಳ್ಳಾಗಿರುವುದನ್ನು ಗಮನಿಸಿದನು, ಅದರ ಮೇಲ್ಮೈಯನ್ನು ಒಡೆದಾಗ ಒಂದು ವಾಯುನಾಳ ಕಂಡುಬಂದಿತು. ಅದೇ ಪ್ರಕ್ರಿಯೆಯಿಂದ ಆತನು ಅದರ ಜೋಡಿಯನ್ನು ಎದುರಿನ ದಿಕ್ಕಿನ ಗೋಡೆಯಲ್ಲಿ ಕಂಡನು. ಈ ರೀತಿಯಲ್ಲಿ ಪಿರಮಿಡ್ ಸತ್ಯವೇದದೊಂದಿಗಿನ ಸಾಮರಸ್ಯದೊಂದಿಗೆ 'ರಾಣಿಯ ಕೊಠಡಿ'ಯಲ್ಲಿ ಪ್ರತಿನಿಧಿಸುವಂತೆ ಪರಿಪೂರ್ಣವಾದ ಮಾನವ ಸ್ಥಿತಿಯಲ್ಲಿ ವಿಫುಲವಾದ ಸಿದ್ಧತೆಗಳನ್ನು ಮಾಡಲಾಗಿದೆ ಮತ್ತು ಇವುಗಳು ತಮ್ಮ ಅಗತ್ಯತೆಯನ್ನು ಕಾಪಾಡಿಕೊಳ್ಳುವ ಪ್ರತಿಯೊಬ್ಬರಿಗೂ ಶಾಶ್ವತಕಾಲ ಇರುವುದಾಗಿವೆ.

ಇದು ಹೇಳುವುದನ್ನು ಕೇಳಿಸಿಕೊಂಡಮೇಲೆ, ನಾವು 'ಕಲ್ಲು ಸಾಕ್ಷ್ಯ' ಮತ್ತು ಅದರ ಪುರಾವೆಗಳ ಬಗ್ಗೆ ಏನು ತಿಳುಕೊಳ್ಳಬಹುದು? ಅಂಥಾಃ ಪುರಾವೆಗಳು ಯಾವುದೇ ಪವಿತ್ರ ಗ್ರಂಥದ ವಚನವೂ ಈ ಪ್ರಸ್ತಾಪದ ಬಗ್ಗೆ ಸಂಬಂಧ ಹೊಂದಿಲ್ಲವಾದರೂ, ಅವು ನಿಜವಾಗಿಯೂ ವಿಶಿಷ್ಟವೂ, ಎದ್ದು ಕಾಣುವಂಥವುಗಳೂ ಆಗಿವೆ. ಅದರೆ ಪಿರಮಿಡ್‌ನ ಪುರಾವೆಗಳನ್ನು ಕೇಳಿಸಿಕೊಳ್ಳುವ ಮೊದಲೇ ಮೊದಲು ಪರಿಶುದ್ಧ ಗ್ರಂಥಗಳು ಈಗಾಗಲೇ ಸ್ಪಷ್ಟವಾಗಿ ಮತ್ತು ಸಕಾರಾತ್ಮಕವಾಗಿ ಈ ಪರಿಸ್ಥಿತಿಗಳು ಮತ್ತು ದಿನಾಂಕಗಳ ಬಗ್ಗೆ ಪ್ರಕಟಿಸಿವೆ. ಅದರ ಅದ್ಭುತವಾದ ಒಪ್ಪಂದವು ಮತ್ತು ಅದರ ಸಮರ್ಥನೆಯು ದುಪ್ಪಟ್ಟು ಮಹತ್ವವುಳ್ಳದ್ದೂ, ಎದ್ದುಕಾಣುವವುಗಳೂ ಆಗುತ್ತವೆ. ಈಗ, ಲೌಕಿಕ–ಬುದ್ಧಿವಂತರು ದೇವರ ವಾಕ್ಯವನ್ನು ಬಳಕೆಯಲ್ಲಿಲ್ಲದ ಮತ್ತು ಅವೈಜ್ಞಾನಿಕ ಎಂದು ಒಪ್ಪಿಕೊಳ್ಳದೇ ಇರುವಾಗ ಕಲ್ಲಿನ ಸಾಕ್ಷಿಯು ಮಾತನಾಡುವುದು ಮತ್ತು ಸತ್ಯವೇದದ ಸಾಕ್ಷ್ಯವನ್ನು ಸಮರ್ಥಿಸುವುದು ನಿಜವಾಗಿಯೂ ದಿಗ್ಭ್ರಮೆಯನ್ನುಂಟುಮಾಡುವುದಾಗಿದೆ. ಮನುಷ್ಯನು ಎಂದಿಗೂ ಪರಿಪೂರ್ಣನಾಗಿರಲಿಲ್ಲ ಮತ್ತು ಅದರಿಂದ ಎಂದಿಗೂ ಬೀಳಲಿಲ್ಲ ಮತ್ತು ದೇವರ ಸ್ವರೂಪದಲ್ಲಿರಲಿಲ್ಲ ಎಂದು ಲೌಕಿಕ ಬುದ್ಧಿವಂತರು ಹೇಳಿಕೊಳ್ಳುತ್ತಿರುವ ಸಮಯದಲ್ಲಿ ಮನುಷ್ಯನ ಪತನದ ಬಗ್ಗೆ ಅದರ ಸಾಕ್ಷ್ಯವನ್ನು ಕೇಳಲು ಗಮನಾರ್ಹವಾಗಿದೆ. ಅದರ ಸಾಕ್ಷ್ಯವನ್ನು ಕೇಳಲು ಯಾರೂ ಸುವಾರ್ತೆಯನ್ನು ದೈವಿಕ ಸ್ವಭಾವಕ್ಕೆ ಅಥವಾ ಮಾನವನ ನೀತಿನಿರ್ಣಯ ಧರ್ಮಶಾಸ್ತ್ರದ ಮತ್ತು ಜೀವನವನ್ನು ನೀತಿನಿರ್ಣಯ ಧರ್ಮಶಾಸ್ತ್ರದ ಒಡಂಬಡಿಕೆಯ ಮೂಲಕ ಅಥವಾ ಅಂಗೀಕಾರದ ಮೂಲಕ ಪ್ರವೇಶಿಸಲು ಸಾಧ್ಯವಾಗಲಿಲ್ಲ, ಈ ಸಮಯದಲ್ಲಿ ಮೋಶೆಯ ಧರ್ಮಶಾಸ್ತ್ರವು ಜೀವನಕ್ಕೆ ಏಕೈಕ ಮಾರ್ಗವಾಗಿದೆ ಎಂದು ಅನೇಕ ಉಪದೇಶಗಳು ಹೇಳುವದು ಖಂಡಿತವಾಗಿಯೂ ಸಂತೋಷಕರ. ನಿಜವಾಗಿಯೂ ಮಹಾ ಪಿರಮಿಡ್‌ನಲ್ಲಿ "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ, ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ" (ರೋಮಾ. 1 : 20).

ಕೆಲವರು ದೇವರ ಲಿಖಿತ ವಾಕ್ಯವನ್ನು ಧಿಕ್ಕರಿಸುವಂತೆ, ಕಲ್ಲು ಸಾಕ್ಷ್ಯದ ಪುರಾವೆಗಳ ಬಗ್ಗೆಯೂ ಧಿಕ್ಕರಿಸಬಹುದು. ಆದರೆ, ಅವರ ಧಿಕ್ಕಾರಕ್ಕೆ ನಾವು ಉತ್ತರಿಸುವುದನೆಂದರೆ, ಈ ವಿಚಿತ್ರವಾದ ಸಂಗತಿಗಳ ಔಚಿತ್ಯದ ಬಗ್ಗೆ ಪರಿಗಣಿಸಿರಿ, ಇಲ್ಲವಾದಲ್ಲಿ ಭವಿಷ್ಯದ ಬಗ್ಗೆ ಪ್ರವಾದನೆಯನ್ನು ಹುಡುಕುವ ಸಾಹಸವನ್ನು ಮಾಡಿರಿ ಮತ್ತು ನಿಮ್ಮ ಪ್ರವಾದನೆಯ ಫಲಿತಾಂಶವೇನೆಂದು ನೋಡಿರಿ. ಮಂದಿನ ಸಂಗತಿಗಳನ್ನು ಮುಂದಾಗಿ ತಿಳಿಸಲು ಯಾವುದೇ ಸ್ಫೂರ್ತಿಯು ಬೇಕಾಗಿಲ್ಲವೆಂಬುದನ್ನು ನಮಗೆ ಸಾಬೀತುಪಡಿಸಿರಿ. ಲೋಕಜ್ಞಾನದ ಮಾದರಿಯನ್ನು ನಮಗೆ ತೋರಿಸಿರಿ. "ಯಾಕೊಬ್ಯರ ಅರಸನಾದ ಯೆಹೋವನು ಹೀಗೆನ್ನುತ್ತಾನೆ. ನಿಮ್ಮ ವ್ಯಾಜ್ಯವು ಈಚೆಗೆ ಬರಲಿ, ನಿಮ್ಮ ಬಲವಾದ ನ್ಯಾಯಗಳನ್ನು ತೋರ್ಪಡಿಸಿರಿ. ತಮ್ಮ ನ್ಯಾಯಗಳನ್ನು ಮುಂದಕ್ಕೆ ತರಲಿ. ಭವಿಷ್ಯತ್ತನ್ನು ನಮಗೆ ತಿಳಿಸಲಿ; ನಡೆದ ಸಂಗತಿಗಳ ವಿಶೇಷವನ್ನು ಸೂಚಿಸಿರಿ. ನಾವು ಅವುಗಳನ್ನು ಮನಸ್ಸಿಗೆ ತಂದು ಅವುಗಳ ಪರಿಣಾಮವನ್ನು ಗ್ರಹಿಸುವೆವು; ಅಥವಾ ಭವಿಷ್ಯತ್ತುಗಳನ್ನು ಅರುಹಿರಿ. ನೀವು ದೇವರುಗಳೆಂದು (ಪರಾಕ್ರಮಿಗಳು) ನಮಗೆ ಅರಿವು ಹುಟ್ಟುವಂತೆ ಮುಂದಾಗತಕ್ಕವುಗಳನ್ನು ತಿಳಿಸಿರಿ;

ನಾವು ಒಟ್ಟಾಗಿ ಕಕ್ಕಾಬಿಕ್ಕಿಯಾಗಿ ನೋಡುವಂತೆ ಮೇಲಾಗಲೀ, ಕೇಡಾಗಲೀ ಏನಾದರೂ ಮಾಡಿರಿ" (ಯೆಶಾಯ 41: 21–23).

ಮಹಾ ಪಿರಮಿಡ್ ನಾಸ್ತಿಕ ವಿಜ್ಞಾನಿಗಳನ್ನು ದಿಗ್ಭ್ರಮೆಗೊಳಿಸುವುದು ಮಾತ್ರವಲ್ಲ, ಅದು ಅವರ ಆಧುನಿಕ ಮತ್ತು ಸತ್ಯವೇದ ವಿರೋಧವಾದ "ವಿಕಾಸವಾದದ ವಿಚಾರ ಸರಣಿ" (theory of Evolution) ಯನ್ನು ಖಂಡಿಸುತ್ತದೆ. ಈ ವಿಷಯದ ಬಗ್ಗೆ ನಾವು Dr. Joseph Seiss ರವರ ಪಿರಮಿಡ್ ಮೇಲಿನ ಅವರ "A Miracle in Stone" ಎಂಬ ಉತ್ಕೃಷ್ಟವಾದ ಪ್ರಬಂಧ ಗ್ರಂಥವನ್ನು ಉಲ್ಲೇಖಿಸುತ್ತೇವೆ. ಅದರಲ್ಲಿ ಅವರು ಹೇಳುವುದೇನೆಂದರೆ :–

ಪ್ರಾಚೀನ ಮನುಷ್ಯನು ಗೊರಿಲ್ಲಾ ಅಥವಾ ಟ್ರೊಗ್ಲೊಡೈಟ್ (ಯೆತಿಗಳು) ಅನ್ನು ಹೊರತುಪಡಿಸಿ ಬೇರೇನೂ ಅಲ್ಲದಿದ್ದರೆ, ಆ ಐತಿಹಾಸಿಕ ರಚನೆಯ ನಿರ್ಮಾಣಕಾರರು ಶತಮಾನಗಳ ಅವಲೋಕನ ಮತ್ತು ಪ್ರಯೋಗಗಳನ್ನು ಮಾಡಿದ ನಂತರವೂ, ನಮ್ಮ ಅತ್ಯಂತ ಪರಿಜ್ಞಾನಹೊಂದಿರುವ ವಿದ್ವಾಂಸರುಗಳು ಅದನ್ನು ಅಪೂರ್ಣವಾಗಿ ಮಾತ್ರವೇ ಕಂಡುಹಿಡಿಯಲು ಸಾಧ್ಯವಾಯಿತು ಎಂಬುದನ್ನು ಹೇಗೆ ತಿಳಿಯಬಹುದು? ಅವರಿಗೆ ಆ ಬಹಳಷ್ಟು ಸ್ಥೂಲ ಪದಾರ್ಥಗಳನ್ನು ಉಪಯೋಗಿಸಿ ವಿಸ್ತೀರ್ಣದಲ್ಲಿ ಅಷ್ಟೊಂದು ವಿಶಾಲವಾದ, ಅಷ್ಟೊಂದು ಎತ್ತರವಾದ ಸೌಧವನ್ನು ಸಮರ್ಪಕವಾದ ಇದುವರೆಗೂ ಈ ಲೋಕದಲ್ಲಿ ಯಾವುದೇ ವಿರೋಧವಿಲ್ಲದ ಕೈಕೆಲಸದೊಂದಿಗೆ ಕಟ್ಟಲುಬೇಕಾಗುವ ಅನೇಕ ಸಲಕರಣಾ ಸಾಧನಗಳನ್ನು, ಅತ್ಯವಶ್ಯಕವಾದ ಉಪಕರಣಗಳನ್ನು ಮಾಡಲು ಮತ್ತು ಅವನ್ನು ಸಮಯೋಚಿತವಾಗಿ ಉಪಯೋಗಿಸುವುದು ಹೇಗೆ ತಿಳಿಯಿತು? ಅವರಿಗೆ ಗೋಳಾಕಾರ, ನಿಯತಾವರ್ತನಗಳು, ವ್ಯಾಸ, ಸಾಂದ್ರತೆ, ಅಕ್ಷಾಂಶ, ಧ್ರುವಗಳು, ಭೂಮಿಯ ವಿತರಣಗಳು ಮತ್ತು ಭೂಮಿಯ ಉಷ್ಣಾಂಶ ಹಾಗೂ ಅವುಗಳ ಖಗೋಳ ಸಂಬಂಧಗಳು ಇವುಗಳ ಬಗ್ಗೆ ಹೇಗೆ ತಿಳಿದಿತ್ತು? ಅವರು ವೃತ್ತವನ್ನು ಚದರಗಳನ್ನಾಗಿ ಮಾಡುವ ಸಮಸ್ಯೆಯನ್ನು ಹೇಗೆ ಪರಿಹರಿಸಿದರು? ಅನುಪಾತವನ್ನು ಲೆಕ್ಕಹಾಕುವ ಮತ್ತು ನಾಲ್ಕು ಮೂಲಭೂತ ಬಿಂದುಗಳನ್ನು ಹೇಗೆ ನಿರ್ಧರಿಸುತ್ತಾರೆ?. ಅವರು ತಮ್ಮ ಸಮಯದ ನಾನೂರು ವರ್ಷಗಳ ನಂತರದಿಂದ ಅಂತಿಮ ನೆರವೇರಿಕೆ ಯವರೆಗಿನ ಪ್ರತಿಯೊಂದು ವಿಶಿಷ್ಟವಾದ ಸತ್ಯಕ್ಕೆ ತಕ್ಕುದಾದ ಇತಿಹಾಸದ ಮತ್ತು ಹಂಚಿಕೆಗಳ ರೇಖಾಪಟ್ಟಿಯನ್ನು ಹೇಗೆ ನಿಯೋಜಿಸುತ್ತಾರೆ? ಮೋಶೆಯ ಅರ್ಥವ್ಯವಸ್ಥೆ (Economy) ಯಾವಾಗ ಪ್ರಾರಂಭವಾಗುತ್ತದೆ, ಎಷ್ಟು ದೂರ ಮುಂದುವರೆ ಯುತ್ತದೆ ಮತ್ತು ಯಾವುದರಲ್ಲಿ ಪರಿಣಮಿಸುತ್ತದೆ ಎಂಬುದು ಅವರಿಗೆ ಹೇಗೆ ಗೊತ್ತು? ಕ್ರೈಸ್ತ ಧರ್ಮವು ಯಾವಾಗ ಪರಿಚಯಿಸಲ್ಪಡುತ್ತದೆ?, ಯಾವ ಮಹಾ ಸತ್ಯಗಳು ಮತ್ತು ಲಕ್ಷಣಗಳಿಂದ ಅದು ಗುರುತಿಸಲ್ಪಡುತ್ತದೆ? ಮತ್ತು ಕ್ರಿಸ್ತನ ಸಭೆಯ ವಿಶೇಷ ಗುಣಲಕ್ಷಣಗಳು, ಜೀವನ ವೃತ್ತಿ ಮತ್ತು ಅಂತ್ಯವೇನು ಎಂಬುದನ್ನು ಅವರಿಗೆ ಹೇಗೆ ತಿಳುಕೊಳ್ಳುತ್ತಾರೆ? ಅವರು ಭವ್ಯವಾದ ಪೂರ್ವಭಾವಿ ಚಕ್ರವನ್ನು, ಅದರ ಅವಧಿಯ ಉದ್ದವನ್ನು, ಸತ್ಯವಾದ ವರ್ಷದಲ್ಲಿನ ದಿನಗಳ ಸಂಖ್ಯೆ, ಭೂಮಿಯಿಂದ ಸೂರ್ಯನವರೆಗಿನ ಸರಾಸರಿ ಅಂತರ, ಮಹಾ ಪಿರಮಿಡ್ ಕಟ್ಟುವ ಸಮಯದಲ್ಲಿ ತಾರೆಗಳ ನಿಖರವಾದ ಆಯಕಟ್ಟಿನ ಸ್ಥಳ ಇವುಗಳ ಬಗ್ಗೆ ಅವರಿಗೆ ಹೇಗೆ ಗೊತ್ತು? ಅವರು ಅಳತೆ ಮತ್ತು ತೂಕಗಳ ನಿರ್ದಿಷ್ಟಮಾನ ಮತ್ತು ವ್ಯವಸ್ಥೆಯು ಒಂದಕ್ಕೊಂದು ಎಷ್ಟೋ ಉದಾರವಾಗಿ ಮಾನವರ ಸಾಮಾನ್ಯ ಅಗತ್ಯತೆಗೆ ತಕ್ಕಂತೆ ಎಷ್ಟೋ ಸರಿಯಾಗಿ ಹೊಂದಿಕೊಳ್ಳುವಂಥೇ ಪಕೃತಿಯ ಎಲ್ಲಾ ಸತ್ಯಸಂಗತಿಗಳನ್ನು ರಚಿಸಿದರು, ಎಲ್ಲಾ ದಾಖಲೆಗಳನ್ನು ಒಂದೇ ಒಂದು ಕಲ್ಲುಕಟ್ಟಡದಲ್ಲಿ ಅಡಕವಾಗಿರುವಂತೆ, ಒಂದೇ ಒಂದು ಪದದಿಂದಾಗಿ ಅಥವಾ ಚಿತ್ರದ ಕಲ್ಬರಹದಿಂದಾಗಿ ರಚಿಸಲು ಸಾಧ್ಯವಾಯಿತು. ಆದರೂ ಇನ್ನೂ ಎಲ್ಲಾ ವಿನಾಶಗಳು ಮತ್ತು ಸಮಯದ ಬದಲಾವಣೆಗಳ ವಿರುದ್ಧ ಪುರಾವೆ ಮತ್ತು ಕೊನೆಯವರೆಗೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇವುಗಳೊಡನೆ ಸಾಮರಸ್ಯಗೊಳಿಸುವಂತೆ ಮಾಡುವುದು ಅವರಿಗೆ ಹೇಗೆ ಗೊತ್ತಾಗುತ್ತದೆ?

ಮಾನವರು ಪರಿಹಾಸ್ಯಮಾಡಬಹುದು. ಆದರೆ ಅವರು ಈ ಬಲಿಷ್ಟ ಕಟ್ಟಡವನ್ನು ನಗೆಪಾಟಲು ಮಾಡಲಾರರು, ಇಲ್ಲವೆ ಅದರಿಂದ ಕೋನಗಳನ್ನು, ಅನುಪಾತಗಳನ್ನು, ಅಳತೆಗಳನ್ನು, ಪ್ರಾಕೃತಿಕ ಉಲ್ಲೇಖಗಳನ್ನು ಮತ್ತು ಅದನ್ನು ಮಾಡಿದಾತನು ನೀಡಿದ ಪವಿತ್ರ ಅನುರೂಪತೆಗಳನ್ನು ಕಡೆಗಣಿಸಲಾರರು. ಇಲ್ಲಿ ಅವೆಲ್ಲವೂ ಅವರ ಮಾತನಾಡುವ ಮಹತ್ವದಲ್ಲಿದ್ದು, ಪಟ್ಟಬಿಡದವುಗಳಾಗಿದ್ದು ಅವುಗಳನ್ನು ಬಗ್ಗುಬಡಿಯುವ ಎಲ್ಲಾ ಪ್ರಯತ್ನಗಳೂ ಗೆಲ್ಲಲಾರದವುಗಳಾಗಿರುತ್ತವೆ

ಈ ಅದ್ಭುತವಾದ ಸಾಕ್ಷಿಯ ಸ್ವರವು ನಮ್ಮ ಮನಸ್ಸಿಗೆ ಯೆರೂಸಲೇಮ್ ಪ್ರವೇಶಿಸಿದ ಆ ವಿಜಯಯಾತ್ರೆಯಲ್ಲಿ ನಮ್ಮ ಕರ್ತನು ನುಡಿದ ಮಾತುಗಳನ್ನು

ಪ್ರಭಾವಯುತವಾಗಿ ನೆನಪಿಗೆ ತರುತ್ತವೆ. ಆತನು ಅಂದು ಇಸ್ರಾಯೇಲ್ಯರಿಗೆ ಆತನ ಶಿಷ್ಯಸಮೂಹದವರ ಜಯಘೋಷಗಳ ಮಧ್ಯೆ ತಾನು ಅವರ ಅರಸನೆಂದು ಸಾಂಕೇತಿಕವಾಗಿ ತೋರಿಸಿಕೊಟ್ಟನು, ಆ ಜನರು ದೇವರು ಅವರಿಗೆ ಮಾಡಿದ ಮಹತ್ಕಾರ್ಯಗಳನ್ನು ಸ್ತುತಿಸುವವರಾಗಿ "ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ, ಪರಲೋಕದಲ್ಲಿ ಮಂಗಳ, ಮೇಲಣ ಲೋಕದಲ್ಲಿ ಮಹಿಮೆ" ಎಂದು ಮಹಾ ಶಬ್ದದಿಂದ ದೇವರನ್ನು ಕೊಂಡಾಡುತ್ತಿದ್ದರು. ಜನರ ಗುಂಪಿನಲ್ಲಿದ್ದ ಫರಿಸಾಯರಲ್ಲಿ ಕೆಲವರು – ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು ಎಂದು ಹೇಳಿದ್ದಕ್ಕೆ ಆತನು – "ಇವರು ಸುಮ್ಮನಾದರೆ, ಈ ಕಲ್ಲುಗಳೇ ಕೂಗುವುವು ಎಂದು ನಿಮಗೆ ಹೇಳುತ್ತೇನೆ ಅಂದನು" (ಲೂಕ 19:38–40). ಅದರಂತೆ ಇಂದು ಇದೆ; ಮಹಿಮೆಯ ರಾಜನು ನಿಜವಾಗಿಯೂ ಬಂದಿದ್ದಾನೆ ಮತ್ತು ಅವನ ಸಾಕ್ಷಿಗಳ ಬಹುಪಾಲು ಜನರು ಜೋರಾಗಿ ಸಂತೋಷಪಡಬೇಕು ಮತ್ತು ಕರ್ತನ ಹೆಸರಿನಲ್ಲಿ ಬರುವ ರಾಜನು ಆಶೀರ್ವದಿಸಬೇಕೆಂದು ಹೇಳಬೇಕು – ಅವರು ಮೂಕರಾಗಿದ್ದಾರೆ, ಕೆಲವರು ಅವರನ್ನು ಸಭಾಮಂದಿರದಿಂದ ಹೊರಹಾಕಲ್ಪಡುತ್ತಾರೆ ಎಂದು ಭಯಪಡುತ್ತಾರೆ. ಕೆಲವರು ನಿದ್ರಾಜನಕ ಸೋಮಾರಿತನದಿಂದ ಅಥವಾ ಲೌಕಿಕತೆಯ ಮಾದಕತೆಯಿಂದ ವಿಚಾರಣೆಯ ದಿನದ ಬಗ್ಗೆ (Visitation) ಅಜ್ಞಾನಿಗಳಂತೆ ಇದ್ದಾರೆ – ಈ ಮಹಾನ್ ಪಿರಮಿಡ್‌ನ ಸಾಕ್ಷ್ಯಗಳು ಯಾವುದೇ ನಿರ್ದಿಷ್ಟ ಸ್ವರಗಳಲ್ಲಿ ಕೂಗುತ್ತಿಲ್ಲ. ಈ ಮಹಾ ಸೌಧದ ಪ್ರತಿಯೊಂದು ಅಂಗುಲವೂ ದೇವರ ಜ್ಞಾನವನ್ನು, ಶಕ್ತಿಯನ್ನೂ ಮತ್ತು ಕೃಪೆಯನ್ನೂ ವಾಕ್ಚಾತುರ್ಯದಿಂದ ಸಾರಿ ಹೇಳುತ್ತಿವೆ.


ಈ ಘನ ಕಲ್ಲಿನ ರಚನೆಯಲ್ಲಿ ತೊಡಗಿಸಿಕೊಂಡಿದ್ದು, ಪ್ರಕೃತಿಯ ಬಿರುಗಾಳಿಗಳ ಶಕ್ತಿಯನ್ನು ಮೀರಿ ಅಥವಾ ವಿನಾಶಕನ ನಿರ್ದಯ ಕೈಯಿಂದ ನಾಲ್ಕು ಸಾವಿರ ವರ್ಷಗಳಿಂದ ದೇವರ ಮಹಾನ್ ಯೋಜನೆಗಳ ಹೊರಗಣ ರೇಖಾಚಿತ್ರಗಳು, ಅದೇ ರೀತಿ ಬಹಿರಂಗಪಡಿಸಿದ ಮತ್ತು ಸಮರ್ಥಿಸಲ್ಪಟ್ಟು ನಿಂತಿದೆ. ಆದರೆ ಯುಗಯುಗದಲ್ಲಿ ಭವಿಷ್ಯವಾಣಿಯ ಖಚಿತ ಪದದ ಸಾಕ್ಷ್ಯವನ್ನು ಮರೆಮಾಡಲಾಗಿದೆ. "ಐಗುಪ್ತ ದೇಶದಲ್ಲಿ ಕರ್ತನಿಗೆ ಸಾಕ್ಷಿ" ಎಂಬ ಈ ಸಾಕ್ಷ್ಯವು, ಲಿಖಿತ ವಾಕ್ಯದಂತೆ 'ಮರೆವಿನ ಗುಂಡಿ'ಯಲ್ಲಿರುವ ಹಳೆಯ ಕ್ರಮಗಳ ಅಂತಿಮ ಧ್ವಂಸಕ್ಕೆ ಮತ್ತು ಹೊಸದರ ಅದ್ಭುತವಾದ ಸ್ಥಾಪನೆಗೆ ಗಂಭೀರವಾದ ಮತ್ತು ದೃಢವಾದ ನಿಖರತೆಯೊಂದಿಗೆ ಸೂಚಿಸುತ್ತದೆ ದೇವರ ಅದ್ಭುತ ಪಾತ್ರವಾದ ಈ ಶಾಶ್ವತ ಕಟ್ಟಡದ ದೃಢೀಕರಣದಲ್ಲಿನ ಮುಖ್ಯ ಮೂಲೆಗಲ್ಲಾದ, ಕ್ರಿಸ್ತ ಯೇಸುವಿನ ಅಡಿಯಲ್ಲಿ ಇದನ್ನು ನೂತನವಾಗಿ ನಿರ್ಮಿಸಬೇಕು. ಆಮೆನ್! ಆಮೆನ್! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ *

* * * * * * *

---

* ಸಹೋದರ ಎಡ್ಗರ್‌ರವರ ಅಳತೆಯ ಮೇರೆಗೆ ಈ ಅಧ್ಯಾಯದ ಕೆಲವೊಂದು ಸಲಹೆಗಳು ನಿಖರವಾಗಿಲ್ಲವೆಂದು ತೋರಿಬರುತ್ತದೆ. ಅವುಗಳು ಬೇರೆ ಅನ್ವಯಗಳೊಂದಿಗೆ ಈ ಅಧ್ಯಾಯದಲ್ಲಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಸಮರ್ಥನೆಯನ್ನು ನಿರೂಪಿಸಿವೆ. ಅವರ ಕಾರ್ಯವನ್ನು "The Great Pyramid Passage"ನಲ್ಲಿ ನೋಡಿರಿ.

# Studies in the Scripture



*The Most Comprehensive Bible Study Available!*

**THE DIVINE PLAN OF THE AGES -** Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND -** Deals with Bible chronology and time prophecies, identifies the Antichrist, and. points out the time and manner of our Lord's return. Contains 371 pages. Cloth bound pocket edition.

**THY KINGDOM COME -** Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON -** Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN -** Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION -** The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

Write publishers for further information.

**For Translated Kannada Publications :**

**BIBLE STUDENTS**